


ಸರ್ವಜ್ಞನ ವಚನಗಳ ಓದು

ಸಿ.ಪಿ.ನಾಗರಾಜ

ಸರ್ವಜ್ಞ ವಚನಗಳ ಓದು

ಸಿ.ಪಿ.ನಾಗರಾಜ

ನಾಗು ಸ್ಮಾರಕ ಪ್ರಕಾಶನ
೭೫, ೫ನೆಯ ಕ್ರಾಸ್, ‘ ಎ ‘ ಬ್ಲಾಕ್, ಕ್ರಿಷ್ಣ ಗಾರ್ಡನ್
ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು–೫೬೦ ೦೫೯

SARVAJNA VACHANAGALA ODU
by C.P.Nagaraja, Published by Nagu Smaraka Prakashana,
75, 5th Cross, 'A' Block, Krishna Garden, R.V.College Post,
Bengaluru-560 059
Mobile: 9986347521

First Edition	:	2024
Page	:	104
Price	:	Free
Size	:	Demy 1/8
Copy right	:	Author
Page Layout	:	Harish KR
Cover Design.	:	Omshivaprakash

ನನ್ನ ನುಡಿ

ಸರ್ವಜ್ಞಕವಿಯ ವಚನಗಳನ್ನು ಓದುತ್ತಿದ್ದಾಗ ನನಗೆ ಮೆಚ್ಚುಗೆಯಾದ ಕೆಲವು ವಚನಗಳನ್ನು ಓದುಗರ ಗಮನಕ್ಕೆ ತರಬೇಕೆಂಬ ಆಸೆಯಾಯಿತು. ವಚನಗಳನ್ನು ಮೊದಲ ಬಾರಿ ಓದುವವರಿಗೆ ನೆರವಾಗಲೆಂಬ ಉದ್ದೇಶದಿಂದ ವಚನದಲ್ಲಿ ಜತೆಗೂಡಿರುವ ಪದಗಳನ್ನು ಬಿಡಿಸಿ ಬರೆದು, ಪದಗಳ ತಿರುಳನ್ನು ತಿಳಿಸಿ ಬರೆದ ಬರಹವನ್ನು ಗುರುಗಳಾದ ಕೆ.ವಿ.ನಾರಾಯಣ ಅವರಿಗೆ ತೋರಿಸಿದೆನು. ಅದನ್ನು ನೋಡಿದ ಅವರು "ಹೊಸ ತಲೆಮಾರಿನ ಓದುಗರಿಗೆ ಈ ರೀತಿಯ ಬರಹ ಉಪಯೋಗಕ್ಕೆ ಬರಬಹುದು. ಪದಗಳ ತಿರುಳಿನ ಜತೆಗೆ ಪ್ರತಿಯೊಂದು ವಚನದಲ್ಲಿ ಕಂಡುಬರುವ ಕವಿಯ ಇಂಗಿತವನ್ನು ಕೆಲವು ಸಾಲುಗಳಲ್ಲಿ ಬರೆಯುವುದು ಒಳ್ಳೆಯದು" ಎಂಬ ಸಲಹೆಯನ್ನು ನೀಡಿ, ನನ್ನ ಬರಹಕ್ಕೆ ಮಾರ್ಗದರ್ಶನವನ್ನು ಮಾಡಿದರು.

ಬರಹವನ್ನು ಹೊನಲು ಮಿಂದಾಣಕ್ಕೆ (honalu.net) ಕಳುಹಿಸಿದೆನು. ಹೊನಲು ಮಿಂದಾಣದ ಸಂಪಾದಕ ವರ್ಗದವರು ಸರ್ವಜ್ಞಕವಿಯ ತೊಂಬತ್ತು ವಚನಗಳನ್ನು ಒಂಬತ್ತು ಕಂತುಗಳಲ್ಲಿ ಪ್ರಕಟಿಸಿದರು. ಹೊನಲಿನಲ್ಲಿ ಮೂಡಿ ಬಂದ ಬರಹಕ್ಕೆ ಹೊನಲು ಮಿಂದಾಣದ ಓದುಗ ಬಳಗದವರು ಮೆಚ್ಚುಗೆಯನ್ನು ಸೂಚಿಸಿದರು. ಈ ರೀತಿ ಬರಹ ರೂಪುಗೊಳ್ಳಲು ಗುರುಗಳಾದ ಕೆ.ವಿ.ನಾರಾಯಣ ಅವರ ಮಾರ್ಗದರ್ಶನ, ಹೊನಲು ಮಿಂದಾಣದ ಸಂಪಾದಕ ವರ್ಗ ಮತ್ತು ಓದುಗರು ನೀಡಿದ ಉತ್ತೇಜನವೇ ಕಾರಣವಾಗಿದೆ.

ಈ ಎಲ್ಲಾ ಬರಹಗಳ ಮೊದಲ ಓದುಗಳಾಗಿ ನನ್ನ ಹೆಂಡತಿ ಗಾಯತ್ರಿ ತನ್ನ ಅನಿಸಿಕೆಯನ್ನು ತಿಳಿಸಿದ್ದಾಳೆ. ಬರಹವನ್ನು ಹೊನಲು ಮಿಂದಾಣಕ್ಕೆ ಕಳುಹಿಸುವುದಕ್ಕೆ ಮೊದಲು ಗೆಳೆಯರಾದ ಆರ್.ಲಕ್ಷ್ಮೀನಾರಾಯಣ, ಆರ್.ಚಲಪತಿ,

ಬಿ.ಎ.ಅನ್ನದಾನೇಶ್, ಸುಬ್ರಹ್ಮಣ್ಯ ಸ್ವಾಮಿ ಮತ್ತು ಟಿ.ಮಂಜುನಾಥ ಅವರಿಗೆ ಮಿಂಚಂಚೆಯ ಮೂಲಕ ಕಳುಹಿಸುತ್ತಿದ್ದೆನು. ಅವರು ಪ್ರತಿಯೊಂದು ವಚನದ ಟಿಪ್ಪಣಿಯನ್ನು ಪರಿಶೀಲಿಸಿ, ಅದರ ಸರಿ ತಪ್ಪುಗಳನ್ನು ಗಮನಿಸಿ, ತಪ್ಪು ಗಳನ್ನು ತಿದ್ದಿ ಸರಿಪಡಿಸಿಕೊಳ್ಳಲು ಸೂಚನೆಗಳನ್ನು ನೀಡುತ್ತಿದ್ದರು. ಈ ಬರಹದ ಕರಡು ಪ್ರತಿಯನ್ನು ನನ್ನ ಗುರು ಹಿರಿಯರು ಮತ್ತು ಗೆಳೆಯರಿಗೆ ಅಂಚೆ ಮೂಲಕ ಕಳುಹಿಸಿದ್ದೆನು. ಅವರೆಲ್ಲರೂ ನೋಡಿ ಉತ್ತೇಜನದ ನುಡಿಗಳನ್ನಾಡಿದ್ದಾರೆ. ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರು 'ಕವಿ ಸರ್ವಜ್ಞ' ಎಂಬ ಬರಹದಲ್ಲಿ ಹೇಳಿರುವ ಕೆಲವು ನುಡಿಗಳನ್ನು ಮುನ್ನುಡಿಯ ರೂಪದಲ್ಲಿ ಬಳಸಿಕೊಂಡಿದ್ದೇನೆ.

ಗುರು ಸಮಾನರಾದ ಡಿ.ಎನ್.ಶಂಕರ ಬಟ್ ಅವರು ಕನ್ನಡ ಬರಹದಲ್ಲಿ ಬಳಸಬೇಕಾದ ಲಿಪಿಗಳ ಬಗ್ಗೆ ಹೇಳಿರುವ ಸಂಗತಿಗಳನ್ನು ವಚನಗಳಿಗೆ ಟಿಪ್ಪಣಿಯನ್ನು ಬರೆಯುವಾಗ ಗಮನದಲ್ಲಿಟ್ಟುಕೊಂಡಿದ್ದೇನೆ.

ಉತ್ತಂಗಿ ಚೆನ್ನಪ್ಪನವರು, ಎಲ್.ಬಸವರಾಜು ಅವರು ಮತ್ತು ರಾಗೌ (ರಾಮೇಗೌಡ) ಅವರು ಸಂಪಾದಿಸಿರುವ ಸರ್ವಜ್ಞ ವಚನ ಸಂಪುಟಗಳಿಂದ ವಚನಗಳನ್ನು ಆಯ್ದುಕೊಂಡಿದ್ದೇನೆ.

ಸರ್ವಜ್ಞ ಕವಿಯ ವಚನಗಳ ಓದಿಗೆ ನೆರವಾದ ಮೇಲ್ಕಂಡ ಎಲ್ಲಾ ಗುರು ಹಿರಿಯರಿಗೆ ಮತ್ತು ಗೆಳೆಯರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಸಿ.ಪಿ.ನಾಗರಾಜ

ಸರ್ವಜ್ಞ ಕವಿಯ ಕಾಲದೇಶಾದಿ ಸಂಗತಿಗಳನ್ನು ನಾವು ನಿರ್ದಿಷ್ಟವಾಗಿ ಚೌಕಟ್ಟಿಸಿ ಹೇಳಲು ಸಾಧ್ಯವಿಲ್ಲ. ಅವನು ಹುಟ್ಟಿ ಇಂದಿಗೆ ನಾಲ್ಕು ನೂರು ವರ್ಷಗಳ ಮೇಲಾದುವೆಂಬುದೂ ನಮ್ಮ ಕಲ್ಪನೆಯೇ. ಆದರೆ ಇಷ್ಟು ಮಾತ್ರ ನಿಜ. ವಚನಕಾರರ ಕಾಲದಿಂದ ಈಚೆಗೆ ಹದಿನಾರನೆಯ ಶತಮಾನದ ಒಳಗಿನ ಅವಧಿಯಲ್ಲಿ ಇದ್ದಂಥ ವ್ಯಕ್ತಿತ್ವ ಸರ್ವಜ್ಞನದು.

ಸರ್ವಜ್ಞನ ಒಂದೊಂದು ಬಿಡಿ ಬಿಡಿ ಪದ್ಯಕ್ಕೂ ತನ್ನದೇ ಅಸ್ತಿತ್ವವಿದೆ. ಒಟ್ಟಾಗಿ ನೋಡಿದರೆ ಒಂದು ಧೋರಣೆಯಿದೆ. ಆ ಧೋರಣೆ ಮೂಲತಃ ಜೀವನ ಪರವಾಗಿದೆ. ಜೀವನ ವಿಮರ್ಶೆಯಾಗಿದೆ. 'ಸಾಹಿತ್ಯ ಜೀವನದ ವಿಮರ್ಶೆ' (Literature is the criticism of life) ಎಂಬ ಮ್ಯಾಥ್ಯು ಆರ್ನಾಲ್ಡನ ಮಾತು ಸರ್ವಜ್ಞನಿಗೆ ಅನ್ವಯಿಸುತ್ತದೆ.

ಜಿ.ಎಸ್.ಶಿವರುದ್ರಪ್ಪ

ವಚನಗಳ ಓದಿಗೆ ನೆರವಾದ ಪುಸ್ತಕಗಳು

೧. **ಚೆನ್ನಪ್ಪ ಉತ್ತಂಗಿ (ಸಂ) : ಸರ್ವಜ್ಞನ ವಚನಗಳು**
ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ
ಚಾಮರಾಜಪೇಟೆ
ಬೆಂಗಳೂರು–೫೬೦೦೧೮
ಮುದ್ರಣ : ೨೦೦೫

೨. **ಎಲ್.ಬಸವರಾಜು (ಸಂ) : ಸರ್ವಜ್ಞನ ವಚನಗಳು**
ಗೀತಾ ಬುಕ್ ಹೌಸ್
ಪ್ರಕಾಶಕರು, ಮೈಸೂರು
ಮುದ್ರಣ : ೨೦೦೨

೩. **ರಾಗೌ (ರಾಮೇಗೌಡ) (ಸಂ) : ಸರ್ವಜ್ಞನ ಸಮಗ್ರ ತ್ರಿಪದಿಗಳು**
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ
ಮುದ್ರಣ : ೨೦೧೩

ಪರಿವಿಡಿ

೧. **ಅಕ್ಕರವ ಕಲಿತಾತ ಒಕ್ಕಲನು ತಿನಕಲಿತ**
ಲೆಕ್ಕವ ಕಲಿತ ಕರಣಿಕನು ನರಕದಲಿ
ಹೊಕ್ಕಿರಲು ಕಲಿತ ಸರ್ವಜ್ಞ.

ಕಲಿತ ವಿದ್ಯೆಯಿಂದ ಜನರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ಬದಲು, ಕೇಡನ್ನು ಬಗೆಯುವವರ ನೀಚತನವನ್ನು ಹೇಳಲಾಗಿದೆ.

(ಅಕ್ಕರ=ಅಕ್ಷರ/ವಿದ್ಯೆ; ಅಕ್ಕರವ=ಓದು ಬರಹವನ್ನು; ಕಲಿತ+ಆತ; ಕಲಿ=ಅರಿಯುವುದು/ತಿಳಿಯುವುದು; ಆತ=ಅವನು; ಕಲಿತಾತ=ಕಲಿತವನು; ಒಕ್ಕಲು=ಸಮಾಜದಲ್ಲಿರುವ ಜನಸಮುದಾಯ/ಜನರು; ಒಕ್ಕಲನು=ಒಕ್ಕಲನ್ನು; ತಿನ+ಕಲಿತ; ತಿನ್+ಅ; ತಿನ್=ಉಣ್ಣು/ನಾಶಪಡಿಸು/ಕೊಲ್ಲು; ತಿನ=ತಿನ್ನಲು; ತಿನಕಲಿತ=ನಾನಾ ಬಗೆಗಳಲ್ಲಿ ಜನರನ್ನು ವಂಚಿಸಿ, ಸುಲಿಗೆ ಮಾಡಿ, ನಾಡಿನ ಸಂಪತ್ತನ್ನು ಲೂಟಿ ಮಾಡುವುದರಲ್ಲಿ ನುರಿತವನಾದ; ಲೆಕ್ಕ=ಅಂಕಿಸಂಕೆಗಳಿಂದ ಕೂಡಿದ ವ್ಯವಹಾರ; ಲೆಕ್ಕವ ಕಲಿತ=ಕಂದಾಯ ವಸೂಲಿ ಹಾಗೂ ಇನ್ನಿತರ ವ್ಯವಹಾರದ ಲೆಕ್ಕಪತ್ರಗಳನ್ನು ನೋಡಿಕೊಳ್ಳುವ ಕುಶಲತೆ ಹಾಗೂ ಹೊಣೆಗಾರಿಕೆಯುಳ್ಳ; ಕರಣಿಕ=ಶಾನುಭೋಗ/ಕುಲಕರ್ಣಿ/ಗ್ರಾಮ ಲೆಕ್ಕಿಗ;

ನರಕ=ಈ ಲೋಕದಲ್ಲಿ ಜನರಿಗೆ ಕೇಡನ್ನು ಬಗೆದು ಸಾವನ್ನಪ್ಪಿದ ವ್ಯಕ್ತಿಯು, ಅನಂತರ ತಾನು ಮಾಡಿದ ಪಾಪದ ಕೆಲಸಗಳಿಗೆ ತಕ್ಕಂತೆ ನಾನಾ ಬಗೆಯ ದಂಡನೆಗಳಿಗೆ ಗುರಿಯಾಗಿ ನರಳುವ ಮತ್ತೊಂದು ಲೋಕದಲ್ಲಿರುವ ಜಾಗ. ಜನರಿಗೆ ಕೇಡನ್ನು ಬಗೆದವರು ಸಂಕಟದ ನೆಲೆಯಾದ ನರಕಕ್ಕೆ, ಒಳಿತನ್ನು ಮಾಡಿದವರು ಆನಂದದ ನೆಲೆಯಾದ ಸ್ವರ್ಗಕ್ಕೆ ಹೋಗುತ್ತಾರೆ ಎಂಬ ನಂಬಿಕೆಯು ಜನಸಮುದಾಯದ ಮನದಲ್ಲಿದೆ; ನರಕದಲಿ+ಹೊಕ್ಕು+ಇರಲು=ನರಕದಲ್ಲಿ ಹೋಗಿ ನೆಲಸಲು; ಕಲಿತ=ಸುಳ್ಳು/ಕಪಟ/ಸುಲಿಗೆಗಳಲ್ಲಿ ನಿಪುಣನಾದ;

❖

೨. ಅಡಿಗಳು ಏಳವು ನುಡಿಗಳು ತೋರವು
ಮಡದಿಯರು ಮನಕೆ ಸೊಗಸರು ಕೂಳೊಂದು
ಘಳಿಗೆ ತಪ್ಪಿದರೆ ಸರ್ವಜ್ಞ.

ಹಸಿವನ್ನು ನೀಗಿಸಿ ಜೀವದ ಉಳಿವಿಗೆ ಕಾರಣವಾಗುವ ಕೂಳಿನ ಮಹಿಮೆಯನ್ನು ಕೊಂಡಾಡಲಾಗಿದೆ.

(ಅಡಿ=ಪಾದ/ಹೆಜ್ಜೆ; ಏಳು=ನಿಲ್ಲು; ಅಡಿಗಳು ಏಳವು=ಹೆಜ್ಜೆಗಳನ್ನು ಇಡುವುದಕ್ಕೆ ಆಗುವುದಿಲ್ಲ/ಮೇಲೆದ್ದು ನಡೆಯಲಾಗುವುದಿಲ್ಲ; ತೋರು=ಕಾಣು/ಮನಸ್ಸಿಗೆ ಗೋಚರವಾಗು; **ನುಡಿಗಳು ತೋರವು**=ಬಾಯಿಂದ ಮಾತುಗಳೇ ಹೊರಡವು/ಉಸಿರು ಕುಗ್ಗಿ ಮಾತಿನ ದನಿಗಳು ಹೊರಬರುವುದಿಲ್ಲ; ಮನಕೆ=ಮನಸ್ಸಿಗೆ ಮಡದಿ=ಹೆಂಡತಿ/ಹೆಣ್ಣು; ಸೊಗಸು=ಅಂದ/ಚಂದ/ಚೆಲುವು;

ಮಡದಿಯರು ಮನಕೆ ಸೊಗಸರು=ಹೆಣ್ಣುಗಳ ಬಗ್ಗೆ ಯಾವುದೇ ಬಗೆಯ ಒಲವು ನಲಿವಿನ ಮಿಡಿತಗಳು ಮಯ್-ಮನದಲ್ಲಿ ಉಂಟಾಗುವುದಿಲ್ಲ; ಕೂಳು+ಒಂದು; ಕೂಳು=ಅನ್ನ/ತಿನಸು/ಉಣಿಸು; ಒಂದು ಗಳಿಗೆ=ತುಸು/ಕೆಲ ಸಮಯ; ತಪ್ಪು=ದೊರೆಯದಿರು/ಸಿಕ್ಕದಿರು; ಸರ್ವ+ಜ್ಞ; ಸರ್ವ=ಎಲ್ಲ/ಸಮಸ್ತ; ಜ್ಞ=ತಿಳಿದವನು; ಸರ್ವಜ್ಞ=ಎಲ್ಲವನ್ನು ತಿಳಿದವನು/ಕವಿಯ ಅಂಕಿತನಾಮ/ಕವಿಯು ಕಾವ್ಯರಚನೆಗಾಗಿ ಇಟ್ಟುಕೊಂಡಿರುವ ಹೆಸರು.)

❖

೩. ಅನ್ನ ದೇವರಿಗಿಂತ ಇನ್ನು ದೇವರು ಇಲ್ಲ
ಅನ್ನಕ್ಕೆ ಮೇಲು ಹಿರಿದಿಲ್ಲ ಲೋಕಕ್ಕೆ
ಅನ್ನವೇ ಪ್ರಾಣ ಸರ್ವಜ್ಞ.

ಮಾನವನನ್ನು ಒಳಗೊಂಡಂತೆ ಎಲ್ಲಾ ಜೀವಿಗಳ ಉಳಿವಿಗೆ ಕಾರಣವಾದ ಅನ್ನದ ಮಹಿಮೆಯನ್ನು ಈ ವಚನದಲ್ಲಿ ಕೊಂಡಾಡಲಾಗಿದೆ.

(ಅನ್ನ=ಆಹಾರವಾಗಿ ತಿನ್ನುವ ಉಣ್ಣುವ ಎಲ್ಲಾ ಬಗೆಯ ತಿನಸು ಉಣಿಸುಗಳು; ದೇವರ್+ಇಗೆ+ಇಂತ; ದೇವರು=ಜೀವನದಲ್ಲಿ ಬರುವ ಎಡರುತೊಡರುಗಳನ್ನು ನಿವಾರಿಸಿ, ತಮಗೆ ಒಳಿತನ್ನು ಮಾಡಿ ಕಾಪಾಡುವ ವ್ಯಕ್ತಿ/ಶಕ್ತಿಯನ್ನು 'ದೇವರು' ಎಂದು ಮಾನವ ಸಮುದಾಯ ನಂಬಿದೆ;

ಅನ್ನ ದೇವರು=ಹಸಿವನ್ನು ತಣಿಸುವ ಅನ್ನವನ್ನೇ ದೇವರೆಂದು ತಿಳಿಯಲಾಗಿದೆ; ಹಿರಿದು+ಇಲ್ಲ; ಹಿರಿದು=ದೊಡ್ಡದು/ಹೆಚ್ಚಿನದು; ಲೋಕಕ್ಕೆ=ಜಗದ ಜೀವಿಗಳ ಉಳಿವಿಗೆ ಬೆಳವಣಿಗೆಗೆ ಮುನ್ನಡೆಗೆ ಹಾಗೂ ಎಲ್ಲ ಬಗೆಯ ಚಟುವಟಿಕೆಗಳಿಗೆ; ಪ್ರಾಣ=ಉಸಿರು/ಜೀವ).

❖

೪. ಅನ್ನವನಿಕ್ಕುವುದು ನನ್ನಿಯ ನುಡಿವುದು
ತನ್ನಂತೆ ಪರರ ಬಗೆವುದು ಸ್ವರ್ಗ ತಾ
ಬಿನ್ನಾಣವಲ್ಲ ಸರ್ವಜ್ಞ.

ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಹ ನಡೆನುಡಿಗಳಿಂದ ನಾವಿರುವ ಎಡೆಯನ್ನೇ ಒಲವು ನಲಿವಿನ ತಾಣವನ್ನಾಗಿ ಮಾಡಬಹುದೆಂಬುದನ್ನು ಹೇಳಲಾಗಿದೆ.

(ಅನ್ನವನ್+ಇಕ್ಕುವುದು; ಇಕ್ಕುವುದು=ನೀಡುವುದು/ಹಾಕುವುದು/ಕೊಡುವುದು; ಅನ್ನವನು ನೀಡುವುದು=ಹಸಿವಿನಿಂದ ಕಂಗೆಟ್ಟವರಿಗೆ ಉಣಿಸನ್ನು ನೀಡುವುದು; ನನ್ನಿ=ನಿಜ/ದಿಟ/ಒಲವು/ವಾಸ್ತವ; ನನ್ನಿಯ ನುಡಿವುದು= ಅಕ್ಕರೆಯಿಂದ ಕೂಡಿದ ಸತ್ಯದ ಮಾತುಗಳನ್ನಾಡುವುದು; ತನ್ನ+ಅಂತೆ; ತನ್ನಂತೆ=ತನ್ನ ಹಾಗೆ; ಪರರ=ಇತರರನ್ನು/ ಸಹಮಾನವರನ್ನು; ಬಗೆವುದು= ತಿಳಿಯುವುದು;

ತನ್ನಂತೆ ಪರರ ಬಗೆವುದು= ಇತರರನ್ನು ತನ್ನಂತೆ ಕಾಣುವುದು ಎಂದರೆ ವ್ಯಕ್ತಿಯು ತನ್ನ ಒಳಿತಿಗಾಗಿ ಹಂಬಲಿಸುವಂತೆಯೇ, ಇತರರಿಗೂ ಒಳಿತನ್ನು ಉಂಟುಮಾಡುವ ನಡೆನುಡಿಗಳನ್ನು ಹೊಂದಿರುವುದು; ಸ್ವರ್ಗ=ನಲಿವು ಮತ್ತು ನೆಮ್ಮದಿಯ ನೆಲೆ/ಈ ಲೋಕದಲ್ಲಿ ಜನರಿಗೆ ಒಳಿತನ್ನು ಮಾಡಿದವರು ಸತ್ತ ನಂತರ ಹೋಗಿ ನೆಲೆಸುವಂತಹ ಮತ್ತೊಂದು ಲೋಕ ಇದೆ ಎಂಬ ಜನ ಸಮುದಾಯದ ನಂಬಿಕೆ; ಬಿನ್ನಾಣವು+ಅಲ್ಲ; ಬಿನ್ನಾಣ=ಚೆಲುವು/ಸೊಬಗು/ಸುಂದರ;

ಸ್ವರ್ಗ ತಾ ಬಿನ್ನಾಣವಲ್ಲ=ಮಾನವರು ಒಳ್ಳೆಯ ನಡೆನುಡಿಗಳಿಂದ ಕಟ್ಟುವ ಸಮಾಜದಲ್ಲಿ ಸ್ವರ್ಗಕ್ಕಿಂತಲೂ ಮಿಗಿಲಾದ ನೆಮ್ಮದಿ/ನಲಿವು ದೊರೆಯುತ್ತದೆ).

❖

೫. **ಆಡದೆ ಮಾಡುವವ ರೂಢಿಯೊಳಗುತ್ತಮನು**
ಆಡಿ ಮಾಡುವನು ಮಧ್ಯಮನು ಅಧಮ ತಾ
ನಾಡಿಯೂ ಮಾಡದವ ಸರ್ವಜ್ಞ.

ವ್ಯಕ್ತಿಯೊಬ್ಬನು ಆಡುವ ಮಾತು ಮತ್ತು ಮಾಡುವ ಕೆಲಸದ ರೀತಿಯು, ಅವನ ವ್ಯಕ್ತಿತ್ವವನ್ನು ಹೇಗೆ ರೂಪಿಸುತ್ತದೆ ಎಂಬುದನ್ನು ಹೇಳಲಾಗಿದೆ.

(ಆಡು=ನುಡಿ/ಹೇಳು; ಆಡದೆ=ತಾನು ಮಾಡುವ ಒಳ್ಳೆಯ ಕೆಲಸಗಳನ್ನು ಮೊದಲೇ ಹೆಮ್ಮೆಯಿಂದ ಹೇಳಿಕೊಳ್ಳದೆ; ಮಾಡುವವ=ಮಾಡುವವನು; ರೂಢಿ= ಲೋಕದ ಜನಸಮುದಾಯ/ಸಮಾಜದಲ್ಲಿರುವ ಜನರು; ರೂಢಿಯೊಳಗೆ+ ಉತ್ತಮನು=ಲೋಕ/ಸಮಾಜದ ಜನರ ಗುಂಪಿನಲ್ಲಿ ಒಳ್ಳೆಯವನು;

ಆಡಿ ಮಾಡುವನು=ತಾನು ಮಾಡಲಿರುವ ಒಳ್ಳೆಯ ಕೆಲಸಗಳನ್ನು ತಾನೇ ಜಂಬದಿಂದ ಹೊಗಳಿಕೊಂಡು, ಅನಂತರ ಹೇಳಿದಂತೆ ಮಾಡುವವನು;

ಮಧ್ಯಮನು=ಒಳ್ಳೆಯ/ಕೆಟ್ಟ ಎರಡು ಗುಣಗಳನ್ನು ಹೊಂದಿರುವವನು; **ಅಧಮ**=ನೀಚ/ಕೆಟ್ಟವನು; ತಾನು+ಆಡಿಯೂ=ತಾನು ಮೊದಲು ಹೇಳಿ ಕೊಂಡಿದ್ದರೂ; ಮಾಡದವ=ಮಾಡನು/ಒಳ್ಳೆಯ ಕೆಲಸವನ್ನು ಮಾಡುವುದಿಲ್ಲ).

❖

೬. **ಆರೈದು ನಡೆವವನು ಆರೈದು ನುಡಿವವನು**
ಆರೈದು ಅಡಿಯನಿಡುವವನು ಲೋಕಕ್ಕೆ
ಆರಾಧ್ಯನಕ್ಕು ಸರ್ವಜ್ಞ.

ಯಾವುದೇ ಒಂದು ಮಾತನಾಡುವ ಮುನ್ನ ಇಲ್ಲವೇ ಕೆಲಸವನ್ನು ಕಯ್ಗೊಳ್ಳುವ ಮೊದಲು ಚೆನ್ನಾಗಿ ಆಲೋಚಿಸಿ ಮುನ್ನಡೆಯುವವನು ಸಮಾಜದಲ್ಲಿ ಎಲ್ಲರಿಂದ ಒಲವು ನಲಿವು ಮತ್ತು ಮನ್ನಣೆಯನ್ನು ಪಡೆಯುತ್ತಾನೆ ಎಂಬುದನ್ನು ಹೇಳಲಾಗಿದೆ.

(ಆರೈದು=ಆರಯ್+ದು; ಆರಯ್=ಯಾವುದೇ ಒಂದು ಸಂಗತಿಯಿಂದ/ಕೆಲಸದಿಂದ ಉಂಟಾಗಬಹುದಾದ ಒಳಿತು–ಕೆಡುಕುಗಳನ್ನು ಒರೆಹಚ್ಚಿ ನೋಡಿ ಇಲ್ಲವೇ ಸರಿ/ತಪ್ಪುಗಳನ್ನು ತಿಳಿದು ನೋಡಿ ಒಳ್ಳೆಯ ನಿಲುವನ್ನು ತೆಗೆದು ಕೊಳ್ಳುವುದು; ನಡೆವವನು=ಕೆಲಸಗಳನ್ನು ಮಾಡುವವನು;

ನುಡಿವವನು=ಮಾತನಾಡುವವನು; ಅಡಿಯನ್+ಇಡುವವನು; ಅಡಿ=ಹೆಜ್ಜೆ /ಪಾದ; ಅಡಿಯನಿಡುವವನು=ಕೆಲಸದಲ್ಲಿ/ಮಾತಿನಲ್ಲಿ ತೊಡಗುವವನು; ಲೋಕ=ಜಗತ್ತು/ಪ್ರಪಂಚ; ಲೋಕಕ್ಕೆ=ಲೋಕದ ವ್ಯವಹಾರಗಳಲ್ಲಿ; ಆರಾಧ್ಯನ್+ಅಕ್ಕು; ಆರಾಧ್ಯ=ಎಲ್ಲರ ಒಲವಿಗೆ ಪಾತ್ರನಾದ/ಮನ್ನಣೆಯನ್ನು ಪಡೆದ ವ್ಯಕ್ತಿ; ಅಕ್ಕು=ಆಗುವನು).

❖

೭. ಆಳಾಗ ಬಲ್ಲವನು ಆಳುವನು ಅರಸಾಗಿ
ಆಳಾಗಿ ಬಾಳಲರಿಯದವನು ಕಡೆಯಲ್ಲಿ
ಹಾಳಾಗಿ ಹೋಹ ಸರ್ವಜ್ಞ.

ತಾನು ಕಯ್ಗೊಳ್ಳುವ ಯಾವುದೇ ಕೆಲಸವನ್ನು ಒಲವು ನಲಿವಿನಿಂದ ಮಾಡಬಲ್ಲವನು ಮಾತ್ರ ಜೀವನವನ್ನು ಚೆನ್ನಾಗಿ ರೂಪಿಸಿಕೊಳ್ಳುತ್ತಾನೆ ಎಂಬುದನ್ನು ಹೇಳಲಾಗಿದೆ.

(ಆಳ್+ಆಗ; ಬಲ್ಲ+ಅವನು; ಬಲ್ಲ=ತಿಳಿದ; ಆಳ್=ದುಡಿಮೆಯಲ್ಲಿ ಒಲವು ಉಳ್ಳವನು; ಆಳಾಗ ಬಲ್ಲವನು=ಮಯ್ ಮನಗಳನ್ನು ಇಡಿಯಾಗಿ ತೊಡಗಿಸಿ ಕೊಂಡು ಕೆಲಸವನ್ನು ಮಾಡುವವನು; ಅರಸು+ಆಗಿ; ಅರಸು=ರಾಜ/ದೊರೆ; ಆಳುವನು ಅರಸಾಗಿ=ಸಮಾಜದಲ್ಲಿ ಹೆಚ್ಚಿನ ಮನ್ನಣೆಯನ್ನು ಪಡೆದು ಎಲ್ಲರ ನಡೆನುಡಿಗಳನ್ನು ನಿಯಂತ್ರಿಸುವನು; ಬಾಳಲ್+ಅರಿಯದವನು; ಅರಿ=ತಿಳಿ; ಅರಿಯದವನು=ತಿಳಿಯದವನು;

ಆಳಾಗಿ ಬಾಳಲು ಅರಿಯದವನು=ದುಡಿಮೆಯ ಮೂಲಕ ಜೀವನವನ್ನು ಒಳ್ಳೆಯ ರೀತಿಯಲ್ಲಿ ರೂಪಿಸಿಕೊಳ್ಳಬೇಕೆಂಬ ಬಯಕೆಯಾಗಲಿ/ಗುರಿಯಾಗಲಿ ಇಲ್ಲದವನು; ಕಡೆಯಲ್ಲಿ=ಬದುಕಿನಲ್ಲಿ/ಕೊನೆಯಲ್ಲಿ/ಜೀವನದ ಹಾದಿಯಲ್ಲಿ; ಹಾಳ್+ಆಗಿ; ಹಾಳಾಗಿ=ನಾಶವಾಗಿ; ಹೋಹ= ಹೋಗುವನು).

❖

೮. ಇಚ್ಚೆಯನರಿದಿತ್ತ ನುಚ್ಚೊಂದು ಮಾಣಿಕ್ಯ
ಇಚ್ಚೆಯು ತೀದ ಬಳಿಕಿತ್ತ ಮಾಣಿಕ್ಯ
ನುಚ್ಚಿನಿಂ ಕಷ್ಟ ಸರ್ವಜ್ಞ.

ಇತರರು ಸಂಕಟದಲ್ಲಿ/ಆಪತ್ತಿನಲ್ಲಿ/ನೋವಿನಲ್ಲಿ ಬೇಯುತ್ತಿರುವಾಗ, ಅವರ ಅಗತ್ಯವನ್ನು ಅರಿತು ನೀಡುವ ನೆರವಿನ ಬೆಲೆಯು ಬಲು ದೊಡ್ಡದೆಂಬುದನ್ನು ಹೇಳಲಾಗಿದೆ.

(ಇಚ್ಚೆಯನ್+ಅರಿದು+ಇತ್ತ; ಇಚ್ಚೆ=ಆಸೆ/ಬಯಕೆ/ಬೇಡಿಕೆ; ಅರಿದು=ತಿಳಿದು; ಇತ್ತ=ನೀಡಿದ/ಕೊಟ್ಟ; ನುಚ್ಚು+ಒಂದು; ನುಚ್ಚು=ಅಕ್ಕಿ ರಾಗಿ ಜೋಳದ ತರಿ/ಪುಡಿ/ ಸಣ್ಣ ಕಣ; ಮಾಣಿಕ್ಯ=ಬೆಲೆಬಾಳುವ ಹರಳು/ನವರತ್ನಗಳಲ್ಲಿ ಒಂದು;

ಇಚ್ಚೆಯನರಿದು= ಮತ್ತೊಬ್ಬರಿಗೆ ಬಂದಿರುವ ಸಂಕಟ/ನೋವು/ಬೇಡಿಕೆಯನ್ನು ತಿಳಿದುಕೊಂಡು; ಇತ್ತ ನುಚ್ಚು=ನೀಡಿದ ಸಣ್ಣ/ತುಸು/ಚಿಕ್ಕ ನೆರವು; ಒಂದು ಮಾಣಿಕ್ಯ =ಅಗತ್ಯವಿದ್ದಾಗ ದೊರೆತ ನೆರವು ಮಾಣಿಕ್ಯದಂತೆ ಬೆಲೆಯುಳ್ಳದ್ದು;

ತೀದ=ತೀರ್+ದ; ತೀರ್=ಮುಗಿದು ಹೋಗು/ಕೊನೆಗೊಳ್ಳು/ಇಲ್ಲವಾಗು; ತೀದ=ಮುಗಿದುಹೋದ ಮೇಲೆ; ಬಳಿಕ+ಇತ್ತ; ಬಳಿಕ=ಅನಂತರ;

ಇಚ್ಚೆಯು ತೀರ್ದ ಬಳಿಕ=ಸಂಕಟ/ನೋವು/ಆಪತ್ತಿನ ಕಾಲದಲ್ಲಿ ನೆರವನ್ನು ನೀಡದೆ ಅದು ಕಳೆದ ನಂತರ; ನುಚ್ಚಿನಿಂ=ನುಚ್ಚಿಗಿಂತ; ಕಷ್ಟ=ಕಡೆ/ಕೀಳು).

❖

೯. ಇಟ್ಟಿಯಲಿ ಇರಿದೇರು ನೆಟ್ಟನೊಂದಾಗಿಕ್ಕು
ಕೆಟ್ಟ ನಾಲಿಗೆಯಲಿರಿದೇರು ದಿನದಿನ
ಕಟ್ಟಟ್ಟಿಯೆ ಸುಡುಗು ಸರ್ವಜ್ಞ.

ಹರಿತವಾದ ಹತಾರದ ಇರಿತದಿಂದ ನಮಗೆ ಉಂಟಾದ ಗಾಯಕ್ಕಿಂತಲೂ ಇತರರು ನಮ್ಮ ಬಗ್ಗೆ ಆಡಿದ ಕೆಟ್ಟಮಾತು ಹೆಚ್ಚಿನ ನೋವನ್ನುಂಟುಮಾಡುತ್ತದೆ ಎಂಬುದನ್ನು ಹೇಳಲಾಗಿದೆ.

(ಇಟ್ಟಿಯಲಿ=ಇಟ್ಟಿಯಿಂದ; ಇಟ್ಟಿ=ಈಟಿ/ಹರಿತವಾದ ಮೊನೆಯುಳ್ಳ ಹತಾರ; ಇರಿದ+ಏರು; ಇರಿ=ತಿವಿ/ಚುಚ್ಚು; ಏರು=ಗಾಯ/ಹುಣ್ಣು; ನೆಟ್ಟನೆ+ ಒಂದು+ಆಗಿ+ ಇಕ್ಕು; ನೆಟ್ಟನೆ=ಸರಿಯಾಗಿ/ಚೆನ್ನಾಗಿ;

ನೆಟ್ಟನೊಂದಾಗಿಕ್ಕು=ಕೆಲವಾರು ದಿನಗಳಲ್ಲಿ ಮೊದಲಿನಂತಾಗುತ್ತದೆ/ ಆಗಿದ್ದ ಗಾಯ ಮಾಯುತ್ತದೆ; ನಾಲಿಗೆಯಲಿ+ಇರಿದ+ ಏರು; ಕೆಟ್ಟನಾಲಿಗೆ=ಯಾವುದೇ ಒಬ್ಬ ವ್ಯಕ್ತಿಯ/ಸಂಗತಿಯ ಬಗ್ಗೆ ಸದಾಕಾಲ ಹೊಲಸು ಮಾತುಗಳನ್ನೇ ಆಡುವುದು/ಕೇಡಾಗಲಿ ಎಂದು ಶಪಿಸುವುದು;

ನಾಲಿಗೆಯಲಿರಿದೇರು=ಮಾತುಗಳ ಮೂಲಕ ನೀಡಿದ ಪೆಟ್ಟು/ಮಾನಸಿಕ ಯಾತನೆ; ದಿನದಿನ=ಪ್ರತಿನಿತ್ಯವೂ/ಯಾವಾಗಲೂ/ಸದಾ ಕಾಲ; ಕಟ್ಟು+ಅಟ್ಟಿ; ಕಟ್ಟು= ಜತೆಗೂಡಿ/ಆವರಿಸಿ; ಅಟ್ಟಿ=ಅಂಟಿಕೊಂಡು/ಬೆನ್ನು ಹತ್ತಿ; ಕಟ್ಟಟ್ಟಿ= ಹಿಂಬಾಲಿಸಿ/ ಬೆನ್ನಟ್ಟಿ/ಪದೇಪದೇ ನೆನಪಾಗುತ್ತ; ಸುಡು+ಗು; ಸುಡು= ಬೆಂಕಿಯಲ್ಲಿ ಬೇಯಿಸು/ ಸುಟ್ಟುಹಾಕು/ಬೇಗೆಯನ್ನುಂಟುಮಾಡು; ಸುಡುಗು=ನೋಯಿಸುತ್ತಿರುತ್ತದೆ/ ಬೇಯಿಸುತ್ತಿರುತ್ತದೆ).

❖

೧೦. ಇದ್ದಲ್ಲಿ ಸಲುವ ಹೋಗಿದ್ದಲ್ಲಿಯೂ ಸಲುವ
ವಿದ್ಯವ ಬಲ್ಲ ಕಡುಜಾಣ ಗಿರಿಯ ಮೇ
ಲಿದ್ದರೂ ಸಲುವ ಸರ್ವಜ್ಞ.

ಒಳ್ಳೆಯ ಅರಿವನ್ನು ಪಡೆದುಕೊಂಡು ಚೆನ್ನಾಗಿ ಕೆಲಸವನ್ನು ಮಾಡುವ ಕುಶಲತೆಯುಳ್ಳ ವ್ಯಕ್ತಿಯು ಎಲ್ಲಾ ಕಡೆಗಳಲ್ಲಿಯೂ ಮನ್ನಣೆಗೆ ಪಾತ್ರನಾಗುತ್ತಾನೆ ಎಂಬುದನ್ನು ಹೇಳಲಾಗಿದೆ.

(ಇದ್ದ+ಅಲ್ಲಿ; ಇದ್ದ=ಇರುವ; ಇದ್ದಲ್ಲಿ=ಇರುವ ಜಾಗ/ಊರು/ನೆಲೆಯಲ್ಲಿ; ಸಲುವ=ಎಲ್ಲರಿಂದಲೂ ಮನ್ನಣೆಯನ್ನು ಪಡೆಯುತ್ತಾನೆ/ಎಲ್ಲರಿಗೂ ಬೇಕಾದವನಾಗುತ್ತಾನೆ; ಹೋಗಿ+ಇದ್ದ+ಅಲ್ಲಿಯೂ; **ಹೋಗಿದ್ದಲ್ಲಿಯೂ**=ಇರುವ ಎಡೆಯಿಂದ ಮತ್ತೊಂದು ಕಡೆಗೆ ಹೋದರೂ;

ವಿದ್ಯೆ=ಯಾವುದೇ ಒಂದು ಸಂಗತಿಯಲ್ಲಿ ಒಳ್ಳೆಯ ತಿಳುವಳಿಕೆ ಮತ್ತು ಕೆಲಸ ಮಾಡುವ ಕುಶಲತೆ; ಬಲ್ಲ=ತಿಳಿದಿರುವ/ಹೊಂದಿರುವ; ಕಡು=ಹೆಚ್ಚಿನ/ಬಹಳ; ಜಾಣ=ಚತುರ/ವಿವೇಕಿ; ಗಿರಿ=ಬೆಟ್ಟ/ಪರ್ವತ; ಮೇಲೆ+ಇದ್ದರೂ;

ಗಿರಿಯ ಮೇಲಿದ್ದರೂ=ಜಗತ್ತಿನಲ್ಲಿ ಯಾವ ಎಡೆಯಲ್ಲೇ ಇದ್ದರೂ/ಎಲ್ಲಿಗೆ ಹೋದರೂ).

❖

೧೧. ಇದ್ದುದನು ಬಚ್ಚಿಟ್ಟು ಹೊದ್ದದನು ಬಯಸುವನು
ಇದ್ದುಣ್ಣದವನ ಬಾಯಲ್ಲಿ ಮಣ್ಣಿನ
ಮುದ್ದೆ ಕಂಡಯ್ಯ ಸರ್ವಜ್ಞ.

ತನ್ನ ಬಳಿ ಇರುವ ಸಂಪತ್ತನ್ನು ಬಳಸಿಕೊಳ್ಳದೆ ಬಚ್ಚಿಟ್ಟು ಬಾಳ್ವೆ ಮಾಡುವವನಿಗೆ ಉಂಟಾಗುವ ಕೆಟ್ಟಗತಿಯನ್ನು ಹೇಳಲಾಗಿದೆ.

(ಇದ್ದುದನು=ಇರುವುದನ್ನು; ಬಚ್ಚಿಟ್ಟು=ಅಡಗಿಸಿಟ್ಟು/ಯಾರಿಗೂ ಕಾಣದಂತೆ ಮರೆಯಾಗಿಸಿ; ಹೊದ್ದು=ದೊರಕು/ಸಿಗು; ಹೊದ್ದದನು=ದೊರೆಯದಿರುವುದನ್ನು/ಸಿಕ್ಕದಿರುವುದನ್ನು; ಬಯಸುವನು=ಇಚ್ಚಿಸುವನು/ಹಂಬಲಿಸುವನು; ಇದ್ದು+ಉಣ್ಣದ+ಅವನ; ಇದ್ದುಣ್ಣದವನು=ತನ್ನ ಬಳಿ ಇರುವ ಸಂಪತ್ತಿನಿಂದ ಒಲವು ನಲಿವು ನೆಮ್ಮದಿಯ ಬಾಳ್ವೆಯನ್ನು ನಡೆಸದವನು; ಬಾಯ್+ಅಲ್ಲಿ; ಮಣ್ಣಿನ ಮುದ್ದೆ=ಮಣ್ಣಿನ ಹೆಂಟೆ/ಉಂಡೆ;

ಬಾಯಲ್ಲಿ ಮಣ್ಣಿನ ಮುದ್ದೆ=ಸಾವನ್ನಪ್ಪಿದ ವ್ಯಕ್ತಿಯ ಹೆಣವನ್ನು ಗುಂಡಿಯಲ್ಲಿಟ್ಟು ಮಣ್ಣು ಮುಚ್ಚತೊಡಗಿದಾಗ ಹೆಣದ ಬಾಯಲ್ಲಿ ಮಣ್ಣು ತುಂಬಿಕೊಳ್ಳುವುದು/ಜೀವನದಲ್ಲಿ ಉಂಡು ತಿಂದು ನಕ್ಕು ನಲಿದು ಆನಂದವನ್ನು ಪಡೆಯದೆ ಸಾವನ್ನಪ್ಪಿದವನು ಎಂಬ ತಿರುಳಿನಲ್ಲಿ ಈ ಪದಕಂತೆಯು ಬಳಕೆಯಾಗಿದೆ; ಕಂಡ+ಅಯ್ಯ; ಕಂಡ=ತಿಳಿದು ನೋಡು/ಕಾಣು; ಅಯ್ಯ=ಇತರರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ).

❖

೧೨. ಇದ್ದೂರ ಹಗೆ ಹೊಲ್ಲ ಬಿದ್ದ ಮಾಳಿಗೆ ಹೊಲ್ಲ
ತಿದ್ದದ ಎತ್ತ ಕೊಳ ಹೊಲ್ಲ ಮನೆಯೊಳಗೆ
ಗುದ್ದಾಟ ಹೊಲ್ಲ ಸರ್ವಜ್ಞ.

ನೆಮ್ಮದಿಯಿಂದ ಬಾಳ್ವೆಮಾಡಲು ಯಾವ ಬಗೆಯ ಎಚ್ಚರದ ನಡೆನುಡಿಗಳನ್ನು ಹೊಂದಿರಬೇಕು ಎಂಬುದನ್ನು ಹೇಳಲಾಗಿದೆ.

(ಇದ್ದ+ಊರ; ಇದ್ದ=ಇರುವ/ಈಗ ವಾಸ ಮಾಡುತ್ತಿರುವ; ಊರ=ಊರಿನ; ಹಗೆ=ಶತ್ರು; ಹೊಲ್ಲ=ಬೇಡ; **ಇದ್ದೂರ ಹಗೆ ಹೊಲ್ಲ**=ನಾವು ಬಾಳುತ್ತಿರುವ ಪರಿಸರದಲ್ಲಿರುವ ವ್ಯಕ್ತಿಗಳ ಜತೆಯಲ್ಲಿ ಹಗೆತನವನ್ನು ಕಟ್ಟಿಕೊಳ್ಳಬಾರದು; ಮಾಳಿಗೆ =ಮಣ್ಣಿನ/ಹುಲ್ಲಿನ ಹೊದಿಕೆ–ಮನೆಯ ಚಾವಣಿ; ಬಿದ್ದ ಮಾಳಿಗೆ=ಮುರಿದು ಬಿದ್ದಿರುವ/ಹಾಳಾಗಿರುವ ಮನೆ; ತಿದ್ದು=ಸರಿಪಡಿಸು/ಪಳಗಿಸು/ಹತೋಟಿಯಲ್ಲಿಡು; ಎತ್ತು+ಅ; ಎತ್ತು=ಬೇಸಾಯ ಮಾಡಲು ಬಳಸುವ ಪ್ರಾಣಿಯಾದ ದನ; ಎತ್ತ=ಎತ್ತನ್ನು; ಕೊಳ್=ಪಡೆ/ಹೊಂದು/ತೆಗೆದುಕೊ;

ತಿದ್ದದ ಎತ್ತ ಕೊಳ ಹೊಲ್ಲ=ಪಳಗಿಸಿ ದುಡಿಸಿಕೊಳ್ಳಲಾಗದ ಎತ್ತನ್ನು ಕೊಂಡು ಕೊಳ್ಳಬಾರದು; ಮನೆ+ಒಳಗೆ; ಗುದ್ದು+ಆಟ; ಗುದ್ದು=ಮುಂಗಯ್ ಇಂದ ಹೊಡೆ/ಬಡಿ/ ಪೆಟ್ಟು ನೀಡು;

ಮನೆಯೊಳಗೆ ಗುದ್ದಾಟ=ಕುಟುಂಬದಲ್ಲಿನ ವ್ಯಕ್ತಿಗಳು ಪರಸ್ಪರ ಒಲವು ನಲಿವು ನಂಬಿಕೆಗಳನ್ನು ಕಳೆದುಕೊಂಡು ಜಗಳವಾಡುವುದು).

❖

೧೩. ಉತ್ತಮ ವಿದ್ಯವನೋದಿ ಮತ್ತೆ ಅನುಭವಗಂಡು
ಚಿತ್ತದ ಕಳವಳವ ನಿಲಿಸದ ಮನುಜನು
ಕತ್ತೆ ಕಂಡಯ್ಯ ಸರ್ವಜ್ಞ.

ಒಂದಲ್ಲ ಒಂದು ಬಗೆಯ ಆತಂಕದಿಂದ ಯಾವಾಗಲೂ ನರಳುತ್ತಿರುವ ವಿದ್ಯಾವಂತನ ವ್ಯಕ್ತಿತ್ವದ ಮಿತಿಯನ್ನು ಹೇಳಲಾಗಿದೆ.

(ವಿದ್ಯವನ್+ಓದಿ; ಉತ್ತಮ ವಿದ್ಯೆ=ಮಾನವನ ನಡೆನುಡಿಯಲ್ಲಿ ಮತ್ತು ಸಮಾಜದ ಆಗುಹೋಗುಗಳಲ್ಲಿ ಯಾವುದು ಸರಿ/ತಪ್ಪು; ಯಾವುದು ಒಳ್ಳೆಯದು/ ಕೆಟ್ಟುದ್ದು; ಯಾವುದನ್ನು ಮಾಡಬೇಕು/ಮಾಡಬಾರದು ಎಂಬ ವಿವೇಕವನ್ನು ನೀಡುವ ತಿಳುವಳಿಕೆ; ಮತ್ತೆ=ಇದರೊಡನೆ; ಅನುಭವ+ಕಂಡು; ಅನುಭವ= ನಿತ್ಯಜೀವನದಲ್ಲಿನ ಆಗುಹೋಗುಗಳಿಂದ ಪಡೆಯುವ ನೋವುನಲಿವು; ಕಂಡು=ನೋಡಿ/ತಿಳಿದು; ಚಿತ್ತ=ಮನಸ್ಸು; ಕಳವಳ=ಸಂಕಟ/ವೇದನೆ/ಬೇಗುದಿ;

ಚಿತ್ತದ ಕಳವಳ=ನಾನಾ ಬಗೆಯ ಆತಂಕ/ಒತ್ತಡ/ಹೆದರಿಕೆಯಿಂದ ಮನಸ್ಸು ಸದಾಕಾಲ ಪರಿತಪಿಸುತ್ತಿರುವುದು; ನಿಲಿಸದ=ನಿವಾರಿಸಿಕೊಳ್ಳದ /ಹತೋಟಿಯಲ್ಲಿ ಇಡಲಾಗದ; ಮನುಜ=ವ್ಯಕ್ತಿ; ಕತ್ತೆ=ಜೀವನವನ್ನು ಸರಿಯಾಗಿ ರೂಪಿಸಿಕೊಳ್ಳ ಲಾಗದೆ ನೆಮ್ಮದಿಗೇಡಿತನದಿಂದ ತೊಳಲಾಡುವ ಬಗೆಯನ್ನು ಸೂಚಿಸುವುದಕ್ಕೆ ಕತ್ತೆ ಎಂಬ ಪ್ರಾಣಿಯನ್ನು ಒಂದು ರೂಪಕವಾಗಿ ಬಳಸಲಾಗಿದೆ/ವ್ಯಕ್ತಿಯ ದಡ್ಡತನವನ್ನು ಸೂಚಿಸಲು 'ಕತ್ತೆ' ಎಂಬ ಪದವನ್ನು ಬಯ್ಗುಳವಾಗಿಯು ಬಳಸ ಲಾಗುತ್ತದೆ; ಕಂಡ+ಅಯ್ಯ; ಕಂಡ=ತಿಳಿದುನೋಡು/ಕಾಣು; ಅಯ್ಯ=ಇತರರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ).

❖

೧೪. ಉಳ್ಳಲ್ಲಿ ಉಣಲೊಲ್ಲ ಉಳ್ಳಲ್ಲಿ ಉಡಲೊಲ್ಲ
ಉಳ್ಳಲ್ಲಿ ದಾನಗೊಡಲೊಲ್ಲದವನೊಡವೆ
ಕಳ್ಳನಿಗೆ ನೃಪಗೆ ಸರ್ವಜ್ಞ.

ಸಿರಿಸಂಪದಗಳು ಇರುವಾಗ ನಲಿವು ನೆಮ್ಮದಿಯ ಬದುಕನ್ನು ನಡೆಸದೆ, ಇತರರಿಗೂ ನೆರವಾಗದೆ, ಎಲ್ಲವನ್ನೂ ಕೂಡಿಟ್ಟಿಕೊಂಡಿರುವವನ ಸಂಪತ್ತು ಇಂದಲ್ಲ ನಾಳೆ ಅನ್ಯರ ಪಾಲಾಗುತ್ತದೆ ಎಂಬ ಎಚ್ಚರಿಕೆಯನ್ನು ನೀಡಲಾಗಿದೆ.

(ಉಳ್ಳ+ಅಲ್ಲಿ; ಉಳ್=ಇರು; ಉಳ್ಳಲ್ಲಿ=ಇರುವಾಗ/ಜೀವನಕ್ಕೆ ಅಗತ್ಯವಾದ ಎಲ್ಲಾ ಬಗೆಯ ಅನುಕೂಲಗಳು ಇರುವಾಗ; ಉಣಲ್+ಒಲ್ಲ; ಉಣಲು=ತಿನ್ನಲು; ಒಲ್+ಅ=ಒಲ್ಲ; ಒಲ್=ಬಯಸು/ಇಚ್ಚಿಸು/ಆಸೆಪಡು; ಒಲ್ಲ=ಬಯಸುವುದಿಲ್ಲ; **ಉಣಲೊಲ್ಲ**=ತನ್ನ ಬಳಿ ಇರುವ ಸಂಪತ್ತಿನಿಂದ ಯಾವುದೇ ಬಗೆಯ ಒಲವು ನಲಿವಿನ ಜೀವನವನ್ನು ನಡೆಸದೆ ಗಳಿಸಿದ ಸಂಪತ್ತೆಲ್ಲವನ್ನೂ ಕೂಡಿಡುವುದರಲ್ಲೇ ಮಗ್ನನಾಗಿರುತ್ತಾನೆ;

ಉಡಲ್+ಒಲ್ಲ; ಉಡು=ಒಳ್ಳೆಯ ಬಟ್ಟೆ ಬರೆಗಳನ್ನು ಹಾಕಿ ಕೊಳ್ಳುವುದು; ದಾನ+ಕೊಡಲ್+ಒಲ್ಲದವನ+ಒಡವೆ; ದಾನ=ಒಡವೆ ವಸ್ತುಗಳನ್ನು ಇತರರಿಗೆ ಬಿಟ್ಟಿಯಾಗಿ ನೀಡುವುದು/ಬಡತನ ಹಸಿವಿನಿಂದ ನರಳುತ್ತಿರುವವರಿಗೆ ನೆರವಾಗುವಂತೆ ವಸ್ತುಗಳನ್ನು ನೀಡುವುದು; ಅವನ=ಈ ರೀತಿ ಕೂಡಿಟ್ಟವನ/ಜಿಪುಣನ; ಒಡವೆ=ಆಸ್ತಿಪಾಸ್ತಿ/ಹಣ/ಚಿನ್ನ ಬೆಳ್ಳಿ ತೊಡುಗೆ; ಕಳ್ಳನಿಗೆ=ಕಳ್ಳನ ಪಾಲು; ನೃಪಗೆ=ದೊರೆಯ ಪಾಲು/ದೊರೆಯು ಮುಟ್ಟುಗೋಲು ಹಾಕಿಕೊಳ್ಳುತ್ತಾನೆ).

❖

೧೫. ಉಳ್ಳಾತ ನುಡಿದರೆ ಎಳ್ಳ ಮೇಲೆ ಜೇನಿಟ್ಟಂತೆ
ಇಲ್ಲದ ಬಡವ ನುಡಿದರೆ ಬಾಯಿ ತುಂಬ
ಹೊಳ್ಳ ಹೊಯ್ದಂತೆ ಸರ್ವಜ್ಞ.

ಸಮಾಜದಲ್ಲಿ ಸಿರಿವಂತರ ಮಾತಿಗೆ ಮೆಚ್ಚುಗೆಯನ್ನು / ಬಡವರ ಮಾತಿಗೆ ತಿರಸ್ಕಾರವನ್ನು ತೋರಿಸುವ ಬಗೆಯನ್ನು ಹೇಳಲಾಗಿದೆ.

(ಉಳ್ಳ+ಆತ; ಉಳ್=ಇರು; ಆತ=ಅವನು; ಉಳ್ಳಾತ=ಸಿರಿಸಂಪದಗಳನ್ನು ಹೊಂದಿರುವವನು/ಆಸ್ತಿಪಾಸ್ತಿ ಹಣಕಾಸುಳ್ಳವನು; ನುಡಿದರೆ=ಮಾತನಾಡಿದರೆ; ಎಳ್ಳು+ಅ; ಎಳ್ಳು=ಜಿಡ್ಡಿನ ಅಂಶವುಳ್ಳ ಕಾಳು; ಎಳ್ಳ=ಎಳ್ಳಿನ; ಜೇನು+ಇಟ್ಟ+ಅಂತೆ; ಜೇನು=ಹೂವುಗಳ ಮಕರಂದವನ್ನು ಹೀರಿಕೊಂಡು ಜೇನುಹುಳುಗಳು ತಯಾರಿಸಿದ ತುಪ್ಪ;

ಎಳ್ಳ ಮೇಲೆ ಜೇನಿಟ್ಟಂತೆ=ಎಳ್ಳು ಮತ್ತು ಜೇನುತುಪ್ಪವನ್ನು ಜತೆಗೂಡಿಸಿಕೊಂಡು ತಿಂದಾಗ, ಅದರ ರುಚಿ ಹೆಚ್ಚಾಗುವಂತೆ ಸಿರಿವಂತರಾಡುವ ಮಾತು ಇಂಪಾಗಿರುತ್ತವೆ; ಇಲ್ಲದ=ಸಿರಿವಂತಿಕೆಯಿಲ್ಲದ/ದಟ್ಟದರಿದ್ರನಾದ; ಬಡವ=ಆಸ್ತಿಪಾಸ್ತಿ/ಹಣಕಾಸು ಇಲ್ಲದವನು; ಹೊಳ್ಳು+ಅ; ಹೊಳ್ಳು=ಜಳ್ಳು/ಪೊಳ್ಳು/ಒಳಗೆ ತಿರುಳಿಲ್ಲದ ಕಾಳು/ತವಡು; ಹೊಯ್+ದ+ಅಂತೆ; ಹೊಯ್=ಹಾಕು/ಸುರಿ;

ಬಾಯಿ ತುಂಬ ಹೊಳ್ಳ ಹೊಯ್ದಂತೆ=ಒಳಗೆ ತಿರುಳಿಲ್ಲದ ಕಾಳನ್ನು/ಹೊಟ್ಟನ್ನು ಬಾಯಿಗೆ ಹಾಕಿಕೊಂಡು ಅಗಿದು ಬೇಸರದಿಂದ ಹೊರಕ್ಕೆ ಉಗಿಯುವಂತೆ ಬಡವರ ಮಾತನ್ನು ಕಡೆಗಣಿಸುತ್ತಾರೆ).

❖

೧೬. ಎದ್ದೆದ್ದು ಮಾತಾಡದಿರು ಎದ್ದೆದ್ದು ನಿಲ್ಲದಿರು
ಇದ್ದ ಮಾನಸರ ಜರಿಯದಿರು ಓಲಗದೊ
ಳಿದ್ದನಿಸು ಹೊತ್ತು ಸರ್ವಜ್ಞ.

ಜನಸಮುದಾಯದ ಕೂಟ/ಗೊಟ್ಟಿಯ ಮಾತುಕತೆಗಳಲ್ಲಿ ಪಾಲ್ಗೊಂಡಾಗ ವ್ಯಕ್ತಿಯ ಸಾಮಾಜಿಕ ನಡೆನುಡಿಗಳು ಹೇಗಿರಬಾರದೆಂಬುದನ್ನು ಹೇಳಲಾಗಿದೆ.

(ಎದ್ದು+ಎದ್ದು; ಏಳ್+ದ್+ಉ=ಏಳ್ದು–ಎದ್ದು; ಮಾತು+ಆಡದೆ+ಇರು; ನಿಲ್ಲದೆ+ಇರು; ಇದ್ದ=ಇರುವ; ಮಾನಸ=ಮಾನವ; ಮಾನಸರ= ವ್ಯಕ್ತಿಗಳನ್ನು/ ಜನರನ್ನು; ಜರಿಯದೆ+ಇರು; ಜರಿ=ನಿಂದಿಸು/ತೆಗಳು/ಅಲ್ಲಗಳೆ; ಓಲಗದ+ಒಳು+ ಇದ್ದ+ಅನಿಸು; ಓಲಗ=ಸಭೆ/ಸಮಾರಂಭ/ಕೂಟ/ಗೊಟ್ಟಿ;

ಒಳು=ಅಲ್ಲಿ; ಅನಿಸು= ಅಷ್ಟು; ಹೊತ್ತು=ಕಾಲ/ಸಮಯ/ವೇಳೆ;

ಇದ್ದ ಮಾನಸರ ಜರಿಯದಿರು=ಓಲಗದಲ್ಲಿ ನೆರೆದಿರುವವರನ್ನು ನಿಂದಿಸಬೇಡ/ ಕಡೆಗಣಿಸಿ ನುಡಿಯ ಬೇಡ/ಅಲ್ಲಗಳೆಯಬೇಡ).

❖

೧೭. **ಒಡಲ ಕಟ್ಟಿಯೆ ತಾನು ಒಡವೆಯ ಗಳಿಸಿದರೆ**
ಎಡೆಯಲಿ ಸಾಯಲದ ಕೊಳದೆ ವಿತ್ತವ
ಒಡನೆ ಹೂಳುವರೆ ಸರ್ವಜ್ಞ.

ಅತಿ ಜಿಪುಣತನದಿಂದ ಬಾಳುವವನ ಸಂಪತ್ತಿಗೆ ಒದಗುವ ಗತಿಯನ್ನು ಹೇಳಲಾಗಿದೆ.

(ಒಡಲ್+ಅ; ಒಡಲು=ಹೊಟ್ಟೆ; ಒಡಲ=ಹೊಟ್ಟೆಯನ್ನು; **ಒಡಲ ಕಟ್ಟಿ**=ಈ ಪದಕಂತೆಯು ಒಂದು ನುಡಿಗಟ್ಟಾಗಿ ಬಳಕೆಯಾಗಿದೆ. ಗಳಿಸಿದ/ಇರುವ ಸಂಪತ್ತನ್ನು ಬಳಸಿಕೊಂಡು ಸರಿಯಾಗಿ ಉಣ್ಣದೆ ಉಡದೆ ಜಿಪುಣತನ ದಿಂದಿರುವುದು/ನಲಿವನ್ನು ಹೊಂದದಿರುವುದು; ಇದನ್ನು ಜನಪದರು 'ಹೊಟ್ಟೆ ಬಟ್ಟೆ ಕಟ್ಟಿ ಬಾಳುವುದು' ಎನ್ನುತ್ತಾರೆ; ತಾನು= ಯಾವುದೇ ಒಬ್ಬ ವ್ಯಕ್ತಿ; ಒಡವೆ= ಆಸ್ತಿಪಾಸ್ತಿ ಹಣಕಾಸು ಚಿನ್ನಬೆಳ್ಳಿ ಮುಂತಾದ ಬೆಲೆಬಾಳುವ ವಸ್ತುಗಳು; ಗಳಿಸು= ಸಂಪಾದಿಸು; ಎಡೆ=ನಡುವೆ/ಇದ್ದಕ್ಕಿದ್ದಂತೆ; ಸಾಯಲು+ಅದ;

ಸಾಯಲು=ಸಾವನ್ನಪ್ಪಲು/ಮರಣ ಹೊಂದಲು; ಅದ=ಅದನ್ನು; ಕೊಳ್+ಅದೆ; ಕೊಳ್=ಪಡೆಯುವುದು/ಹೊಂದುವುದು; ಕೊಳದೆ=ಪಡೆಯದೆ/ಹೊಂದದೆ; **ಎಡೆಯಲಿ ಸಾಯಲದ ಕೊಳ್**=ಕೂಡಿಟ್ಟವನು ತುಂಬು ವಯಸ್ಸಾಗುವ ಮುನ್ನವೇ ಸಾವನ್ನಪ್ಪಿದರೆ, ಅವನ ಒಡವೆಯನ್ನು ಅದಕ್ಕೆ ಹಕ್ಕುದಾರರಾದವರು ವಶಪಡಿಸಿ ಕೊಳ್ಳುತ್ತಾರೆ; ವಿತ್ತ=ಸಂಪಾದಿಸಿದ ಒಡವೆ/ಸಂಪತ್ತು; ಒಡನೆ=ಜತೆಯಲ್ಲಿ; ಹೂಳು= ಗುಂಡಿಯಲ್ಲಿ ಹಾಕಿ ಮಣ್ಣಿನಿಂದ ಮುಚ್ಚುವುದು; ಹೂಳುವರೆ=ಹೂಳುತ್ತಾರೆಯೇ).

❖

೧೮. ಒಡಲ ದಂಡಿಸಿ ಮುಕ್ತಿ ಪಡೆವೆನೆಂಬವನೆಗ್ಗ
ಬಡಿಗೆಯಿಂ ಹುತ್ತ ಹೊಡೆಯಲೊಳಗಿಹ ಸರ್ಪ
ಮಡಿವುದೇ ಹೇಳ ಸರ್ವಜ್ಞ.

ದೇಹವನ್ನು ಬಹುಬಗೆಯ ಯಾತನೆಗೆ ಗುರಿಪಡಿಸುವುದರಿಂದ ಮುಕ್ತಿಯು ದೊರೆಯುತ್ತದೆಯೆಂದು ನಂಬುವುದು/ತಿಳಿಯುವುದು/ಅಂದುಕೊಳ್ಳುವುದು ಸರಿಯಲ್ಲವೆಂದು ಹೇಳಲಾಗಿದೆ.

(ಒಡಲ್+ಅ; ಒಡಲು=ಹೊಟ್ಟೆ/ದೇಹ/ಮಯ್; ದಂಡಿಸು=ನೋವಿಗೆ/ಯಾತನೆಗೆ/ಸಂಕಟಕ್ಕೆ ಗುರಿಮಾಡುವುದು; **ಒಡಲ ದಂಡಿಸಿ**=ಅನ್ನನೀರನ್ನು ತೊರೆದು ಉಪವಾಸ ಮಾಡುವುದು/ಒಂಟಿಕಾಲಲ್ಲಿ ನಿಂತು ದೇವರ ಹೆಸರನ್ನು ಜಪಿಸುತ್ತಿರುವುದು/ದೇಗುಲದ ಸುತ್ತ ಹೆಜ್ಜೆಹೆಜ್ಜೆಗೂ ದಿಂಡುರುಳುವುದು/ಒದ್ದೆ ಬಟ್ಟೆಯಲ್ಲಿ ಉರುಳುಸೇವೆ ಮಾಡುವುದು/ಬಾಯಿಬೀಗ ಹಾಕಿಸಿಕೊಳ್ಳುವುದು/ಬೆನ್ನಿನ ಹುರಿಗೆ ಕಬ್ಬಿಣದ ಕೊಕ್ಕೆಯನ್ನು ಚುಚ್ಚಿಸಿಕೊಂಡು ಸಿಡಿಯಾಡುವುದು/ದೇಹಕ್ಕೆ ನೋವುಂಟುಮಾಡುವ ನೂರಾರು ಬಗೆಯ ಆಚರಣೆಗಳಲ್ಲಿ ತೊಡಗುವುದು;

ಮುಕ್ತಿ=ಹುಟ್ಟುಬದುಕು ಸಾವುಗಳ ಚಕ್ರದಿಂದ ಜೀವವು ಬಿಡುಗಡೆಯನ್ನು ಹೊಂದುವುದು ಎಂಬ ನಂಬಿಕೆ; ಪಡೆವೆನ್+ಎಂಬವನ್+ಎಗ್ಗ; ಪಡೆವೆನ್=ಹೊಂದುತ್ತೇನೆ/ಗಳಿಸುತ್ತೇನೆ; ಎಂಬವನ್=ಎಂದುಕೊಳ್ಳುವವನು; ಎಗ್ಗ=ದಡ್ಡ/ತಿಳಿಗೇಡಿ; ಬಡಿಗೆ+ಇಂ; ಬಡಿಗೆ=ಕೋಲು/ದೊಣ್ಣೆ; ಇಂ=ಇಂದ; ಹುತ್ತ=ಮಣ್ಣಿನ ಕೊಳವೆಗಳಿಂದ ಕೂಡಿರುವ ಬಿಲ. ಇದರಲ್ಲಿ ಹಾವುಗಳು ಸೇರಿಕೊಂಡಿರುತ್ತವೆ; ಹೊಡೆಯಲ್+ಒಳಗೆ+ಇಹ; ಹೊಡೆ=ಬಡಿ/ಪೆಟ್ಟುಹಾಕು; ಇಹ=ಇರುವ; ಸರ್ಪ=ಹಾವು; ಮಡಿ=ಸಾಯು/ಮರಣಹೊಂದು; ಹೇಳ=ಹೇಳು/ತಿಳಿದು ನೋಡು).

❖

೧೯. ಒಮ್ಮನದೆ ಬಿತ್ತಕ್ಕು ಇಮ್ಮನದೆ ಜಳ್ಳಕ್ಕು
ಒಮ್ಮನದೆ ಮೋಕ್ಷಪದವಕ್ಕು ಜ್ಞಾನಿ ತಾ
ನಿಮ್ಮನದೆ ಕೆಡುಗು ಸರ್ವಜ್ಞ.

ಚಂಚಲತೆಯಿಲ್ಲದ ಒಂದೇ ಮನಸ್ಸಿನಿಂದ ಇಲ್ಲವೇ ಚಂಚಲಗೊಂಡ ಇಬ್ಬಗೆಯ ಮನಸ್ಸಿನಿಂದ ಉಂಟಾಗುವ ಪರಿಣಾಮಗಳನ್ನು ಹೇಳಲಾಗಿದೆ.

(ಒಮ್ಮನ=ಒರ್+ಮನ; ಒಮ್ಮನದೆ=ಚಂಚಲತೆಯಿಲ್ಲದೆ ಅಂದರೆ ಅತ್ತಿತ್ತ ತುಯ್ದಾಡದೆ ಮನಸ್ಸಿನಲ್ಲಿ ತಳೆಯುವ ಒಂದೇ ನಿಲುವಿನಿಂದ; ಬಿತ್ತು+ಅಕ್ಕು; ಬಿತ್ತು=ಬೀಜ/ತಿರುಳಿನಿಂದ ಕೂಡಿದ ಗಟ್ಟಿ ಕಾಳು; ಅಕ್ಕು=ಆಗುವುದು;

ಒಮ್ಮನದೆ ಬಿತ್ತಕ್ಕು=ಬೀಜವು ಮೊಳಕೆಯೊಡೆದು ಸಸಿಯಾಗಿ ಗಿಡವಾಗಿ ಮರವಾಗಿ ಬೆಳೆದು ಹೂಹಣ್ಣುಗಳನ್ನು ನೀಡುವಂತೆ ಒಂದೇ ಮನಸ್ಸಿನಿಂದ ಕಯ್ಗೊಂಡ ಯಾವುದೇ ಕೆಲಸ ಚೆನ್ನಾಗಿ ಆಗುತ್ತದೆ; ಇಮ್ಮನ=ಇರ್+ಮನ; ಇಮ್ಮನ=ಮಾಡುವುದೋ/ಬೇಡವೋಎಂಬ ತೊಳಲಾಟದಿಂದ ಕೂಡಿದ ಚಂಚಲ ಮನಸ್ಸು; ಜಳ್ಳು+ಅಕ್ಕು; ಜಳ್ಳು=ಒಳಗಡೆ ತಿರುಳಿಲ್ಲದ ಬೀಜ;

ಇಮ್ಮನದೆ ಜಳ್ಳಕ್ಕು=ಚಂಚಲವಾದ ಮನಸ್ಸಿನಿಂದ ಕಯ್ಗೊಂಡ ಯಾವುದೇ ಕೆಲಸ ಕೆಡುತ್ತದೆ; ಮೋಕ್ಷ ಪದವು+ಅಕ್ಕು; ಮೋಕ್ಷ= ಮಾನವಜೀವಿಯು ಹುಟ್ಟು ಬದುಕು ಸಾವುಗಳೆಂಬ ಚಕ್ರದಿಂದ ಬಿಡುಗಡೆಯನ್ನು/ಮುಕ್ತಿಯನ್ನು ಹೊಂದುತ್ತದೆ ಎಂಬ ನಂಬಿಕೆ; ಪದ=ನೆಲೆ/ಜಾಗ; ಜ್ಞಾನಿ=ಅರಿವುಳ್ಳವನು/ತಿಳುವಳಿಕೆಯುಳ್ಳವನು; ತಾನು+ ಇಮ್ಮನದೆ; ತಾನು=ಅವನು;

ಜ್ಞಾನಿ ತಾ ಇಮ್ಮನದೆ ಕೆಡುಗು=ಅರಿವಿದ್ದವನು ಕೂಡ ಒಮ್ಮೊಮ್ಮೆ ಚಂಚಲಮನಕ್ಕೆ ಒಳಗಾದಾಗ ಹಾಳಾಗುತ್ತಾನೆ; ಕೆಡು+ಗು; ಕೆಡು= ನಾಶವಾಗು/ ಇಲ್ಲವಾಗು/ಹಾಳಾಗು; ಕೆಡುಗು=ನಾಶವಾಗುವುದು/ಹಾಳಾಗುವುದು).

❖

೨೦. ಒಲೆಗುಂಡನೊಬ್ಬನು ಮೆಲಬಹುದೆಂದರೆ
ಮೆಲಬಹುದೆಂದು ಎನಬೇಕು ಮೂರ್ಖರನು
ಗೆಲಬಾರದಯ್ಯ ಸರ್ವಜ್ಞ.

ತಿಳಿಗೇಡಿಗಳ ಜತೆಯಲ್ಲಿ ಮಾತಿಗೆ ಮಾತು ಬೆಳೆಸಬಾರದೆಂಬ ಎಚ್ಚರಿಕೆಯನ್ನು ನೀಡಲಾಗಿದೆ.

(ಒಲೆಗುಂಡನು+ಒಬ್ಬನು; ಒಲೆ=ಅಡುಗೆಯನ್ನು ಮಾಡುವಾಗ ಬೆಂಕಿಯನ್ನು ಉರಿಸುವುದಕ್ಕಾಗಿ ಬಳಸುವ ಸಲಕರಣೆ; ಗುಂಡು= ದಪ್ಪವಾಗಿರುವ ಕಲ್ಲು; ಒಲೆ ಗುಂಡು=ಬಯಲು ಜಾಗದಲ್ಲಿ ಅಡುಗೆಯನ್ನು ಮಾಡಲು ಒಲೆಯನ್ನು ಒಡ್ಡಿದಾಗ ಪಾತ್ರೆಗಳನ್ನು ಇಡುವುದಕ್ಕಾಗಿ ಜೋಡಿಸುವ ದಪ್ಪನೆಯ ಕಲ್ಲುಗಳು; ಒಬ್ಬನು= ಯಾವುದೇ ವ್ಯಕ್ತಿ; ಮೆಲಬಹುದು+ಎಂದರೆ;

ಮೆಲ್=ತಿನ್ನು; ಬಹುದು=ಬರುವುದು/ಆಗುವುದು; ಎಂದರೆ=ಎಂದು ಹೇಳಿದರೆ; ಮೆಲಬಹುದು+ಎಂದು ಎನಬೇಕು=ಅವನ ಮಾತಿಗೆ ಎದುರಾಡದೆ, ಅವನು ಹೇಳುತ್ತಿರುವುದನ್ನೇ ಸರಿಯೆಂದು ಒಪ್ಪಿಕೊಳ್ಳಬೇಕು; ಮೂರ್ಖ=ತಿಳಿಗೇಡಿ/ ಅರಿವಿಲ್ಲವದವನು; ಗೆಲಬಾರದು+ಅಯ್ಯ; ಗೆಲಬಾರದು=ಗೆಲ್ಲಲು ಆಗುವುದಿಲ್ಲ/ ಸರಿತಪ್ಪುಗಳನ್ನು ತಿಳಿಸಿ ಅರಿವನ್ನು ಮೂಡಿಸಲಾಗುವುದಿಲ್ಲ/ತಿಳಿಗೇಡಿತನವನ್ನು ಹೋಗಲಾಡಿಸಲು ಆಗುವುದಿಲ್ಲ).

❖

೨೧. ಒಳ್ಳಿದರ ಒಡನಿರ್ದು ಕಳ್ಳ ಒಳ್ಳಿದನಕ್ಕು
ಒಳ್ಳಿದ ಕಳ್ಳನೊಡನಾಡೆ ಅವ ಶುದ್ಧ
ಕಳ್ಳನೇ ಅಕ್ಕು ಸರ್ವಜ್ಞ.

ಒಳ್ಳೆಯವರ ಇಲ್ಲವೇ ಕೆಟ್ಟವರ ಒಡನಾಟದಿಂದ ವ್ಯಕ್ತಿತ್ವ ರೂಪುಗೊಳ್ಳುವ ಬಗೆಯನ್ನು ಹೇಳಲಾಗಿದೆ.

(ಒಳ್ಳಿದರ=ಒಳ್ಳೆಯ ನಡೆನುಡಿಯುಳ್ಳವರ; ಒಡನೆ+ಇರ್ದು; ಒಡನೆ=ಜತೆಯಲ್ಲಿ/ ಒಡನಾಟದಲ್ಲಿ/ಸಹವಾಸದಲ್ಲಿ; ಇರ್ದು=ಇದ್ದು; ಒಡನೆ+ಇರ್ದು=ಜತೆಯಲ್ಲಿ ವ್ಯವಹರಿಸುತ್ತಾ; ಕಳ್ಳ=ಇತರರ ಒಡವೆ ವಸ್ತುಗಳನ್ನು ಅಪಹರಿಸುವವನು/ ಲಪಟಾಯಿಸುವವನು;

ಒಳ್ಳಿದನ್+ಅಕ್ಕು; ಒಳ್ಳಿದನ್=ಒಳ್ಳೆಯ ವ್ಯಕ್ತಿ; ಅಕ್ಕು=ಆಗುತ್ತಾನೆ; ಕಳ್ಳನ+ ಒಡನೆ+ಆಡೆ; ಆಡೆ=ಆಡಿದರೆ/ವ್ಯವಹರಿಸಿದರೆ/ಸಂಗ ಮಾಡಿದರೆ; ಅವ=ಅವನು/ ಆ ಒಳ್ಳೆಯ ವ್ಯಕ್ತಿಯು; ಶುದ್ಧ ಕಳ್ಳ=ಕಳ್ಳತನವನ್ನೇ ಕಸುಬನ್ನಾಗಿ ಮಾಡಿಕೊಂಡಿರುವ ವ್ಯಕ್ತಿ).

❖

೨೨. ಒಳ್ಳೆನಿಲ್ಲದ ಊರು ಕಳ್ಳರ ಸಂಗವು
ಸುಳ್ಳನ ಮಾತು ಇವು ಮೂರು ಕೆಸರೊಳಗೆ
ಮುಳ್ಳು ತುಳಿದಂತೆ ಸರ್ವಜ್ಞ.

ಒಳ್ಳೆಯ ನಡೆನುಡಿಯಿಲ್ಲದ ಜನರ ನಡುವೆ ಬಾಳ್ವೆ ಮಾಡುವುದು ತುಂಬಾ ನೋವಿನ ಸಂಗತಿಯೆಂಬುದನ್ನು ಹೇಳಲಾಗಿದೆ.

(ಒಳ್ಳೆನು+ಇಲ್ಲದ; ಒಳ್ಳೆನು=ಒಳ್ಳೆಯವನು/ಇತರರ ನೋವು ನಲಿವುಗಳನ್ನು ಹಂಚಿಕೊಳ್ಳುವವನು; **ಒಳ್ಳೆನಿಲ್ಲದ ಊರು**=ಒಳ್ಳೆಯ ನಡೆನುಡಿಗಳಿಲ್ಲದ/ ನೆರೆಹೊರೆಯವರ ನೋವು ನಲಿವುಗಳನ್ನು ಹಂಚಿಕೊಳ್ಳದ ಜನರು ನೆಲೆಸಿರುವ ಊರು; ಸಂಗ=ಒಡನಾಟ/ವ್ಯವಹಾರ; **ಕಳ್ಳರ ಸಂಗ**=ಜನರನ್ನು ಮತ್ತು ಸಮಾಜ ವನ್ನು ವಂಚಿಸಿ ಆಸ್ತಿಪಾಸ್ತಿ ಹಣಒಡವೆಗಳನ್ನು ಲಪಟಾಯಿಸುವ ಮೋಸಗಾರರ/ ಲಂಚಕೋರರ ಜತೆಯಲ್ಲಿಯೇ ದಿನಬೆಳಗಾದರೆ ವ್ಯವಹರಿಸುವುದು/ ಒಡನಾಡುವುದು;

ಸುಳ್ಳು+ಅ; ಸುಳ್ಳು=ನಿಜವಲ್ಲದ ಸಂಗತಿಗಳ ಹೇಳಿಕೆ; ಸುಳ್ಳ=ಯಾವಾಗಲೂ ಸುಳ್ಳನ್ನೇ ಆಡುವವನು; ಕೆಸರ+ಒಳಗೆ; ಕೆಸರು=ಮಣ್ಣು ಮತ್ತು ನೀರು ಕಲೆತು ಕೊಂಡು ಮೆದುವಾಗಿರುವ ನೆಲ; ಮುಳ್ಳು=ಮೊನಚಾದ ತುದಿಯುಳ್ಳ ವಸ್ತು; ತುಳಿದ+ಅಂತೆ; ಅಂತೆ=ಹಾಗೆ;

ಕೆಸರೊಳಗೆ ಮುಳ್ಳು ತುಳಿದಂತೆ=ಕೆಸರೊಳಗೆ ಮುಳ್ಳು ತುಳಿದಾಗ, ಮುಳ್ಳು ಚುಚ್ಚಿಕೊಂಡಿರುವ ಮಣ್ಣು ಮೆತ್ತಿದ ಪಾದದ ಜಾಗಕ್ಕೆ ಅತ್ತ ಕಯ್ಯನ್ನು ಹಾಕಿ ಮುಳ್ಳನ್ನು ತೆಗೆಯಲಾಗದೆ, ಇತ್ತ ಪಾದವನ್ನು ಕೆಳಕ್ಕೆ ಊರಿ ಹೆಜ್ಜೆಯಿಡಲಾಗದೆ ನೋವನ್ನು ತಿನ್ನುತ್ತಿರಬೇಕಾಗುತ್ತದೆ).

❖

೨೩. ಓದಿ ಬೂದಿಯ ಪೂಸಿ ತೋದ ಕಾವಿಯ ಹೊದೆದು
ಹೋದಾತ ಯೋಗಿಯೆನಬೇಡ ಇಂದ್ರಿಯವ
ಕಾದಾತ ಯೋಗಿ ಸರ್ವಜ್ಞ.

ಉಟ್ಟಿರುವ ಉಡುಗೆ ಇಲ್ಲವೇ ತೊಟ್ಟಿರುವ ತೊಡುಗೆಗಳಿಂದ ಯಾವುದೇ ವ್ಯಕ್ತಿಯ ವ್ಯಕ್ತಿತ್ವವನ್ನು ನಿರ್ಣಯಿಸಬಾರದೆಂಬ ಎಚ್ಚರಿಕೆಯನ್ನು ನೀಡಲಾಗಿದೆ.

(ಓದಿ=ಅಕ್ಕರವನ್ನು ಕಲಿತು; ಬೂದಿಯ ಪೂಸಿ=ಹಣೆ-ಎದೆ-ಮಯ್ ತುಂಬಾ ವಿಭೂತಿಯನ್ನು ಲೇಪಿಸಿಕೊಂಡು; ಪೂಸಿ=ಬಳಿದುಕೊಂಡು; ಕಾವಿಯ ಹೊದೆದು=ಕಾವಿ ಬಟ್ಟೆಯನ್ನು ತೊಟ್ಟು; ತೋಯ್+ದ; ತೋಯ್=ತೇವವಾಗು/ನೆನೆ/ಹಸಿಯಾಗು; ತೋದ=ಒದ್ದೆಯಾಗಿರುವ; ಕಾವಿ=ಕೆಂಪುಬಣ್ಣ; ಹೊದೆದು=ಉಟ್ಟುಕೊಂಡು/ಮಯ್ ಮೇಲೆ ಹಾಕಿಕೊಂಡು; ಹೋದ+ಆತ= ಹೋದವನು/ಸಿಂಗಾರಗೊಂಡವನು; ಆತ=ಅವನು; ಯೋಗಿ+ಎನಬೇಡ;

ಯೋಗಿ=ಆಸೆಗಳನ್ನು/ಬಯಕೆಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವವನು; ಇಂದ್ರಿಯ= ನೋಟ-ಶಬ್ದ-ಕಂಪು-ರುಚಿ-ಮುಟ್ಟುವಿಕೆಯಿಂದ ಉಂಟಾಗುವ ಅರಿವನ್ನು ಪಡೆಯಲು ನೆರವಾಗುವ ಅಂಗಗಳು;

ಇಂದ್ರಿಯವ ಕಾದಾತ=ಕಣ್ಣು-ಕಿವಿ-ಮೂಗು-ನಾಲಗೆ-ತೊಗಲಿನಿಂದ ಉಂಟಾಗುವ ಒಳಮಿಡಿತಗಳನ್ನು ಹತೋಟಿಯಲ್ಲಿಟ್ಟುಕೊಂಡು ಒಳ್ಳೆಯ ನಡೆನುಡಿಗಳಿಂದ ಬಾಳುವವನು; ಕಾಯ್+ದ್+ಆತ; ಕಾಯ್+ದ; ಕಾದ=ಕಾಯ್ದುಕೊಂಡ/ಎಚ್ಚರದಿಂದ ಕಾಪಾಡಿಕೊಂಡ).

❖

೨೪. ಕಂಡುದ ನುಡಿಯೆ ಭೂಮಂಡಲ ಮುನಿವುದು
ಕೊಂಡಾಡುತಿಚ್ಚೆಯ ನುಡಿದರೆ ಜಗವೆಲ್ಲ
ಮುಂಡಾಡುತಿಕ್ಕು ಸರ್ವಜ್ಞ.

ಜನಸಮುದಾಯದ ವ್ಯವಹಾರದಲ್ಲಿ ದಿಟದ ಮಾತಿಗೆ ಇಲ್ಲವೇ ಸುಳ್ಳುಮಾತಿಗೆ ದೊರೆಯುವ ಬೆಲೆಯನ್ನು ಹೇಳಲಾಗಿದೆ.

(ಕಂಡುದ=ಕಂಡಿದ್ದನ್ನು/ನೋಡಿದುದನ್ನು/ತಿಳಿದಿರುವುದನ್ನು; ನುಡಿಯೆ=ಹೇಳಲು; **ಕಂಡುದ ನುಡಿಯೆ**=ಯಾವುದೇ ವ್ಯಕ್ತಿಯ ನಡೆನುಡಿಗಳಲ್ಲಿ ಇಲ್ಲವೇ ಸಾಮಾಜಿಕ ಸಂಗತಿಯ ಆಗುಹೋಗುಗಳಲ್ಲಿ ನಾವು ಕಂಡ ತಪ್ಪನ್ನು/ಕೆಡುಕನ್ನು ಗುರುತಿಸಿ ವಾಸ್ತವವಾಗಿರುವುದನ್ನು ಹೇಳಿದರೆ; ಭೂ=ಜಗತ್ತು/ಲೋಕ; ಮಂಡಲ =ಪ್ರದೇಶ; ಭೂಮಂಡಲ= ಜನಸಮುದಾಯ/ಸಮಾಜ; ಮುನಿ=ಕೋಪಗೊಳ್ಳು/ಸಿಟ್ಟಾಗು/ಕೆರಳು; ಕೊಂಡಾಡುತ+ಇಚ್ಚೆಯ; ಕೊಂಡಾಡು=ಹೊಗಳು/ಬಣ್ಣಿಸು; ಇಚ್ಚೆ=ಆಸೆ/ಬಯಕೆ;

ಕೊಂಡಾಡುತ ಇಚ್ಚೆಯ ನುಡಿದರೆ=ಇತರರ ತಪ್ಪುಗಳನ್ನು/ಕೆಡುಕಿನ ನಡೆನುಡಿಗಳನ್ನು ಮರೆಮಾಚಿ, ಅವರು ಮೆಚ್ಚುವಂತಹ ಅವರಲ್ಲಿ ಇಲ್ಲದ/ಅವರಿಗೆ ಸಲ್ಲದ ನುಡಿಗಳನ್ನಾಡಿದರೆ; ಜಗವು+ಎಲ್ಲ; ಜಗ=ಲೋಕ/ಪ್ರಪಂಚ/ಜನಸಮುದಾಯ; ಮುಂಡಾಡುತ+ಇಕ್ಕು; ಮುಂಡಾಡು=ಮುತ್ತಿಡು/ಒಲವಿನಿಂದ ತಬ್ಬಿಕೊಳ್ಳುವುದು/ಆಲಂಗಿಸಿಕೊಳ್ಳುವುದು; ಇಕ್ಕು=ಇರುವುದು; ಮುಂಡಾಡುತಿಕ್ಕು=ಮೆಚ್ಚುಗೆಯಿಂದ ಓಲಯಿಸುವುದು).

❖

೨೫. ಕಡೆದ ಕಲ್ಲದು ನುಣ್ಪು ಒಡೆದರೆ ದೈವವೇ
ಜಡರ ಮಾತುಗಳು ಹುಸಿ ನೋಡು ದಯಚಿತ್ತ
ದೆಡೆಯಲ್ಲಿ ದೈವ ಸರ್ವಜ್ಞ.

ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನುಂಟುಮಾಡುವ ಒಲವು, ಕರುಣೆ ಮತ್ತು ಕಾಳಜಿಯಿಂದ ಕೂಡಿದ ನಡೆನುಡಿಯಲ್ಲಿ ದೇವರ ಇರುವಿಕೆಯನ್ನು ಕಾಣಲಾಗಿದೆ.

(ಕಡೆ=ಕೆತ್ತು/ರೂಪಿಸು/ಬಿಡಿಸು; ಕಲ್ಲು+ಅದು; ಕಡೆದ ಕಲ್ಲು=ಉಳಿ ಮತ್ತು ಸುತ್ತಿಗೆಯ ಪೆಟ್ಟಿನಿಂದ ಆಕಾರವೊಂದನ್ನು ತಳೆದ ಕಲ್ಲು/ಕಂಡರಣೆಗೊಂಡ ಕಲ್ಲು; ನುಣ್ಪು=ನಯಗೊಳ್ಳುವುದು/ಒರಟಾಗಿದ್ದುದು ನಯಗೊಂಡು ಅಂದವಾಗುವುದು; ಒಡೆ=ಸೀಳು/ಬಿರಿ/ಕಾಣಿಸಿಕೊಳ್ಳುವುದು;

ನುಣ್ಪು ಒಡೆದರೆ=ಶಿಲ್ಪಿಯ ಉಳಿಯ ಪೆಟ್ಟಿನಿಂದ ಕಲ್ಲು ಕಲೆಯಾಗಿ ರೂಪುಗೊಂಡರೆ/ಶಿಲೆಯು ಶಿಲ್ಪವಾಗಿ ರೂಪು ಗೊಂಡರೆ; ದೈವ=ದೇವರು; ದೈವವೇ=ದೇವರಾಗುತ್ತದೆಯೇ; ಜಡರು= ತಿಳಿಗೇಡಿಗಳು/ಆಲಸಿಗಳು;

ಜಡರ ಮಾತುಗಳು=ದೇವರ ಇರುವಿಕೆಯನ್ನು ಸರಿಯಾಗಿ ಅರಿಯದವರ ನುಡಿಗಳು; ಹುಸಿ=ಸುಳ್ಳು; ದಯಚಿತ್ತದ+ ಎಡೆಯಲ್ಲಿ; ದಯ=ಕರುಣೆ/ಅನುಕಂಪ/ ಕನಿಕರ/ಇತರರ ನೋವಿಗೆ ಮಿಡಿದು ನೆರವನ್ನು ನೀಡುವಿಕೆ; ಚಿತ್ತ=ಮನಸ್ಸು; ಎಡೆ=ಜಾಗ/ನೆಲೆ;

ದಯಚಿತ್ತದೆಡೆಯಲ್ಲಿ ದೈವ=ಕರುಣೆ ತುಂಬಿದ ನಡೆನುಡಿಯಿರುವ ಎಡೆಯಲ್ಲಿ/ ತನ್ನನ್ನು ಒಳಗೊಂಡಂತೆ ಎಲ್ಲರಿಗೂ ಒಳಿತಾಗುವಂತೆ ಒಲವು ಕರುಣೆಯಿಂದ ನಡೆದುಕೊಳ್ಳುವ ಸನ್ನಿವೇಶಗಳಲ್ಲಿ ದೇವರು ನೆಲೆಸಿರುತ್ತಾನೆ).

❖

೨೬. ಕಣ್ಣು ನಾಲಗೆ ಮನವು ತನ್ನವೆಂದೆನಬೇಡ
ಅನ್ಯರು ಕೊಂದರೆನಬೇಡ ಇವು ಮೂರು
ತನ್ನನೇ ಕೊಲುಗು ಸರ್ವಜ್ಞ.

ನೋಡುವ ನೋಟ, ಆಡುವ ಮಾತು ಮತ್ತು ಮನದ ಒಳಮಿಡಿತಗಳನ್ನು ಹತೋಟಿಯಲ್ಲಿಟ್ಟುಕೊಳ್ಳದಿದ್ದರೆ ಉಂಟಾಗುವ ಹಾನಿಯನ್ನು ಹೇಳಲಾಗಿದೆ.

(ಮನ=ಮನಸ್ಸು; ತನ್ನವು+ಎಂದು+ಎನಬೇಡ; ತನ್ನವು=ನನಗೆ ಸೇರಿದವು/ ನನ್ನ ಹಿಡಿತದಲ್ಲಿರುವುವು; ಎನಬೇಡ=ಎಂದುಕೊಳ್ಳಬೇಡ/ತಿಳಿಯಬೇಡ;

ಕಣ್ಣು ನಾಲಗೆ ಮನವು ತನ್ನವೆಂದೆನಬೇಡ=ತಾನು ಹುಟ್ಟಿಬೆಳೆದು ಬಾಳುತ್ತಿರುವ ಪರಿಸರದಲ್ಲಿನ ವಸ್ತು/ಜೀವಿ/ಆಗುಹೋಗುಗಳ ಕಾರಣದಿಂದಾಗಿ ವ್ಯಕ್ತಿಯು ನೂರೆಂಟು ಬಗೆಯ ಆಸೆ/ತವಕ/ತಲ್ಲಣ/ಕೋಪ/ತಾಪ/ಹತಾಶೆಗಳಿಗೆ ಒಳಗಾಗಿ ಒಳಿತುಕೆಡುಕಿನ ಕೆಲಸಗಳಲ್ಲಿ ತೊಡಗುತ್ತಾನೆ.

'ಪರಿಸರದ ಮಗು ಮಾನವ' ಎಂಬ ಮಾತಿನಂತೆ ಸಮಾಜದ ರಚನೆ, ಸಂಪ್ರದಾಯ ಮತ್ತು ನೀತಿನಿಯಮಗಳು ಮಾನವನ ನಡೆನುಡಿಗಳನ್ನು ರೂಪಿಸುತ್ತವೆ/ಹತೋಟಿಯಲ್ಲಿಡುತ್ತವೆ. ಆದುದರಿಂದ ವ್ಯಕ್ತಿಯು ತನ್ನ ನಡೆನುಡಿ ಗಳಿಗೆ ಕಾರಣವಾಗುವ ಸಾಮಾಜಿಕ ಸಂಗತಿಗಳ ಬಗ್ಗೆ ತುಂಬಾ ಎಚ್ಚರದಿಂದ ಇರಬೇಕು ಎನ್ನುವ ಇಂಗಿತ ಈ ಮಾತುಗಳಲ್ಲಿದೆ; ಅನ್ಯರು=ಇತರರು/ಬೇರೆಯವರು; ಕೊಂದರು+ಎನಬೇಡ; ತನ್ನನೇ=ಒಳ್ಳೆಯ ರೀತಿಯಲ್ಲಿ ನಡೆನುಡಿಗಳನ್ನು ರೂಪಿಸಿ ಕೊಳ್ಳದಿರುವ ವ್ಯಕ್ತಿಯನ್ನೇ; ಕೊಲುಗು=ಕೊಲ್ಲುತ್ತವೆ).

❖

೨೭. ಕಲ್ಲು ಕಾಷ್ಠವು ಬೆತ್ತದಲ್ಲಿ ಇಹನೇ ಶಿವನು
ಎಲ್ಲಿಯ ಮಾತು ಹುಸಿ ಬೇಡ ನಿಷ್ಠೆ ಇ
ದ್ದಲ್ಲಿಹನಭವ ಸರ್ವಜ್ಞ.

ಶಿವನ ಪ್ರತಿರೂಪವು ಜಡವಸ್ತುಗಳಲ್ಲಿ ಇರುವುದಿಲ್ಲ. ಮಾನವರ ಒಳ್ಳೆಯ ನಡೆನುಡಿಗಳು ಇರುವ ಕಡೆಯಲ್ಲಿ ಶಿವನು ನೆಲೆಸಿರುತ್ತಾನೆ ಎಂಬುದನ್ನು ಹೇಳಲಾಗಿದೆ.

(ಕಲ್ಲು=ಶಿಲೆ; ಕಾಷ್ಠ=ಮರದ ತುಂಡು/ಕಟ್ಟಿಗೆ; ಬೆತ್ತ=ಬಿದಿರಿನ ಕೋಲು; ಇಹನೇ= ಇರುವನೇ; ಶಿವ=ದೇವರೆಂದು ನಂಬಿರುವ ಶಿವನು; ಎಲ್ಲಿಯ ಮಾತು=ಅಂತಹ ಮಾತುಗಳಲ್ಲಿ ಯಾವುದೇ ತಿರುಳಿಲ್ಲ/ ಆ ನುಡಿಗಳು ನಿಜವಲ್ಲ; ಹುಸಿ=ಸುಳ್ಳು;

ಹುಸಿ ಬೇಡ=ಸುಳ್ಳನ್ನೇ/ಇಲ್ಲದ್ದನ್ನೇ ನಿಜವೆಂದು ನಂಬುವುದು ಬೇಡ; ನಿಷ್ಠೆ= ಸಹ ಮಾನವರಿಗೆ ಸಮಾಜಕ್ಕೆ ಒಳಿತನ್ನು ಉಂಟುಮಾಡುವ ನಡೆನುಡಿಗಳಲ್ಲಿ ನಂಬಿಕೆ; ಇದ್ದಲ್ಲಿ+ಇಹನು+ಅಭವ; ಇದ್ದಲ್ಲಿ=ಇರುವಲ್ಲಿ; ಇಹನು=ಇರುವನು; ಭವ=ಹುಟ್ಟು; ಅಭವ=ಶಿವ; ಅಭವ=ದೇವರಾದ ಶಿವನು ಹುಟ್ಟುಸಾವುಗಳ ಸುಳಿಗೆ ಸಿಲುಕದವನು ಎಂಬುದು ಜನಮನದ ನಂಬಿಕೆ).

❖

೨೮. ಕಿರಿಯಂದಿನ ಪಾಪವರಿತಲ್ಲಿ ಹೋಯಿತ್ತು
ಅರಿತರಿತು ಮಾಡಿದನ ಪಾಪ ವಜ್ರದ
ಸರಿಯಂತೆಯಿಕ್ಕು ಸರ್ವಜ್ಞ.

ಅರಿಯದೆ ಮಾಡಿದ ಇಲ್ಲವೆ ಅರಿತು ಮಾಡಿದ ಪಾಪದ ನಡುವಣ ವ್ಯತ್ಯಾಸಗಳನ್ನು ಹೇಳಲಾಗಿದೆ.

(ಕಿರಿ+ಅಂದಿನ; ಕಿರಿ=ಚಿಕ್ಕ/ಎಳೆಯ; ಅಂದಿನ=ಆ ಸಮಯ/ಕಾಲದ; ಪಾಪ+ಅರಿತ+ಅಲ್ಲಿ; ಪಾಪ=ಇತರರಿಗೆ ಮತ್ತು ಸಮಾಜಕ್ಕೆ ಎಸಗಿದ ಕೇಡು/ಕೊಟ್ಟ ನೋವು/ಮಾಡಿದ ವಂಚನೆ; ಅರಿ=ತಿಳಿ;

ಕಿರಿಯಂದಿನ ಪಾಪವರಿತಲ್ಲಿ ಹೋಯಿತ್ತು=ಚಿಕ್ಕಂದಿನಲ್ಲಿ ಮಾಡಿದ ಕೆಟ್ಟಕೆಲಸಗಳನ್ನು ದೊಡ್ಡವರಾದ ಮೇಲೆ ಅರಿತುಕೊಂಡು, ನನ್ನಿಂದ ಇಂತಹ ಕೆಟ್ಟದ್ದು ಆಗಿದೆಯಲ್ಲಾ ಎಂದು ಸಂಕಟಪಟ್ಟು, ಮತ್ತೆ ಕೆಟ್ಟದ್ದನ್ನು ಯಾರಿಗೂ ಮಾಡಬಾರದೆಂಬ ನಿಲುವನ್ನು ತಳೆದು, ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳುವುದು; ಅರಿತು+ಅರಿತು;

ಅರಿತರಿತು=ತಿಳಿದೂ ತಿಳಿದೂ/ಚೆನ್ನಾಗಿ ಗೊತ್ತಿದ್ದು; ಮಾಡಿದನ= ಮಾಡಿದವನ; ವಜ್ರ=ಗಡುಸಾದುದು/ಗಟ್ಟಿಯಾಗಿರುವುದು; ಸರಿ=ಗಂಜಿ/ಅಂಬಲಿ/ ಜಿಗುಟಾದ ವಸ್ತು/ಅಂಟು; ವಜ್ರದ ಸರಿ=ಒಂದು ಬಗೆಯ ಅಂಟು. ಇದನ್ನು ಮರದ ಪಟ್ಟಿಗಳ ಸಂದುಗಳಿಗೆ ಬಳಿದು ಅನಂತರ ಅವನ್ನು ಜತೆಗೂಡಿಸಿದಾಗ, ಅವು ಗಟ್ಟಿಯಾಗಿ ಅಂಟಿಕೊಳ್ಳುತ್ತಿದ್ದವು; ಇಕ್ಕು=ಇರುವುದು;

ಅರಿತರಿತು ಮಾಡಿದನ ಪಾಪ ವಜ್ರದ ಸರಿಯಂತೆಯಿಕ್ಕು=ಉದ್ದೇಶಪೂರ್ವಕವಾಗಿ ಮಾಡಿದವನ ಪಾಪವು ಎಂದೆಂದಿಗೂ ಬಿಡದೆ ಅಂಟಿಕೊಂಡಿರುವುದು. ಅಂದರೆ ಆತ ನೀಚ/ಕೇಡಿ/ವಂಚಕನಾಗಿಯೇ ಬಾಳುತ್ತಿರುತ್ತಾನೆ).

❖

೨೯. ಕೇಡನೊಬ್ಬಗೆ ಬಯಸೆ ಕೇಡು ತಪ್ಪದು ತನಗೆ
ಕೂಡಿ ಕೆಂಡವನು ತೆಗೆದೊಡೆ ತನ್ನ ಕೈ
ಕೂಡೆ ಬೇವಂತೆ ಸರ್ವಜ್ಞ.

"ಬೇರೆಯವರಿಗೆ ಬರಬಾರದ ನೋವು ಸಂಕಟಗಳು ಬಂದು, ಅವರ ಜೀವನದಲ್ಲಿ ಹಾನಿಯುಂಟಾಗಲಿ" ಎಂದು ನಾವು ಮನದಲ್ಲಿ ಇತರರಿಗೆ ಕೇಡನ್ನು ಬಯಸುವುದಾಗಲಿ /ಕೆಟ್ಟ ಕೆಲಸಗಳನ್ನು ಮಾಡುವುದಾಗಲಿ ಒಳ್ಳೆಯದಲ್ಲವೆಂಬ ಎಚ್ಚರಿಕೆಯನ್ನು ನೀಡಲಾಗಿದೆ.

(ಕೇಡನು+ಒಬ್ಬಗೆ; ಕೇಡು=ಹಾನಿ/ನಾಶ/ಅಪಾಯ; ಒಬ್ಬಗೆ= ಬೇರೆಯವನಿಗೆ; ಬಯಸೆ=ಆಗಲೆಂದು ಇಚ್ಚಿಸಿದರೆ; ತನಗೆ=ಬಯಸಿದ ವ್ಯಕ್ತಿಗೆ; ಕೇಡು ತಪ್ಪದು ತನಗೆ=ಮತ್ತೊಬ್ಬನಿಗೆ ಸಾವು ನೋವುಗಳು ಉಂಟಾಗಲೆಂದು ಬಯಸಿದವನಿಗೂ ಒಂದಲ್ಲ ಒಂದು ಬಗೆಯ ಹಾನಿಯುಂಟಾಗುತ್ತದೆ; ಕೆಂಡ=ಬೆಂಕಿಯ ಉಂಡೆ; ತೆಗೆದೊಡೆ=ತೆಗೆದರೆ;

ಕೂಡಿ ಕೆಂಡವನು ತೆಗೆದೊಡೆ=ಉರಿಯುತ್ತಿರುವ ಬೆಂಕಿಯ ಉಂಡೆಯನ್ನು ಮತ್ತೊಬ್ಬನ ಮೇಲೆ ಎಸೆಯಲೆಂದು ಒಬ್ಬ ವ್ಯಕ್ತಿಯು ತನ್ನ ಕಯ್ಯಲ್ಲಿ ತೆಗೆದುಕೊಂಡಾಗ; ಕೂಡೆ=ಜತೆಜತೆಯಲ್ಲೇ/ಆ ಗಳಿಗೆಯಲ್ಲೇ; ಬೇವ+ಅಂತೆ= ಸುಡುವ+ಹಾಗೆ; ಬೇವ=ಬೆಯ್ಯುವ;

ತನ್ನ ಕೈ ಕೂಡೆ ಬೇವಂತೆ=ಈ ಹೋಲಿಕೆಯ ಮೂಲಕ ಮತ್ತೊಬ್ಬನಿಗೆ ಕೆಟ್ಟದ್ದನ್ನು ಮಾಡಲು ಹಾತೊರೆಯುವ ವ್ಯಕ್ತಿಗೂ ನೋವು/ಸಂಕಟ/ಹಾನಿ ತಟ್ಟುತ್ತದೆ ಎಂಬುದನ್ನು ಹೇಳಲಾಗಿದೆ).

❖

೩೦. ಕೇಳುವವರಿದ್ದಿಹರೆ ಹೇಳುವುದು ಬುದ್ಧಿಯನು
ಕೋಳದಲಿ ಬಿದ್ದು ಬಳಲುವಗೆ ಬುದ್ಧಿಯನು
ಹೇಳುವನೆಗ್ಗ ಸರ್ವಜ್ಞ.

ನಮ್ಮ ಮಾತುಗಳನ್ನು ಮನವಿಟ್ಟು ಆಲಿಸುವವರಿಗೆ ತಿಳುವಳಿಕೆಯನ್ನು ಹೇಳಬೇಕೆ ಹೊರತು, ಎಲ್ಲರಿಗೂ ಹೇಳಲು ಹೋಗುವುದು ಸರಿಯಲ್ಲವೆಂಬ ಎಚ್ಚರಿಕೆಯನ್ನು ನೀಡಲಾಗಿದೆ.

(ಕೇಳುವವರು+ಇದ್ದು+ಇಹರೆ=ನಾವು ಆಡಿದ ಮಾತುಗಳಿಗೆ ಬೆಲೆ ಕೊಟ್ಟು ತಮ್ಮ ತಪ್ಪನ್ನು ತಿದ್ದಿ ಸರಿಪಡಿಸಿಕೊಂಡು ನಡೆಯುವವರು ಇದ್ದರೆ; ಇಹರೆ=ಇದ್ದರೆ; ಬುದ್ಧಿ=ತಿಳುವಳಿಕೆ/ಅರಿವು; ಕೋಳ=ಬೇಡಿ/ಸಂಕೋಲೆ; ಬಳಲು=ಸಂಕಟಪಡು/ದಣಿ/ಆಯಾಸಗೊಳ್ಳು;

ಕೋಳದಲಿ ಬಿದ್ದು ಬಳಲುವಗೆ=ಕಳ್ಳತನ ಕೊಲೆ ಸುಲಿಗೆ ಮುಂತಾದ ತಪ್ಪುಗಳನ್ನು ಮಾಡಿ ಸೆರೆವಾಸದಲ್ಲಿ ನರಳುತ್ತಿರುವವನಿಗೆ; ಹೇಳುವನು+ಎಗ್ಗ; ಎಗ್ಗ=ದಡ್ಡ/ತಿಳಿಗೇಡಿ/ಅರಿವಿಲ್ಲದವನು).

❖

೩೧. ಕೊಟ್ಟುಂಬ ಕಾಲದಲಿ ಕೊಟ್ಟುಣ್ಣಲೊಲ್ಲದವ
ಹುಟ್ಟಿಯ ಮೇಲೆ ಜೇನಿಟ್ಟು ಪರರಿಗೆ
ಕೊಟ್ಟು ಹೋಹಂತೆ ಸರ್ವಜ್ಞ.

ಸಿರಿಸಂಪದಗಳು ಇರುವಾಗ ನಲಿವು ನೆಮ್ಮದಿಯನ್ನು ಪಡೆಯದೆ, ಇತರರಿಗೂ ನೆರವಾಗದೆ, ಎಲ್ಲವನ್ನೂ ಕೂಡಿಟ್ಟುಕೊಂಡಿರುವವನ ಸಂಪತ್ತು ಹೇಗೆ ಬೇರೆಯವರ ಪಾಲಾಗುತ್ತದೆ ಎಂಬುದನ್ನು ರೂಪಕವೊಂದರ ಹೇಳಲಾಗಿದೆ.

(ಕೊಟ್ಟು+ಉಂಬ; ಕೊಟ್ಟು=ದಾನ ಮಾಡಿ/ಇತರರಿಗೂ ನೆರವು ನೀಡಿ; ಉಂಬ =ಉಣ್ಣುವ/ಜೀವನದಲ್ಲಿ ನಲಿವು ನೆಮ್ಮದಿಗಳನ್ನು ಪಡೆಯುವ; ಕಾಲದಲಿ= ಸಮಯದಲ್ಲಿ; ಕೊಟ್ಟು+ಉಣ್ಣಲು+ಒಲ್ಲದವ; ಒಲ್ಲದವ=ಬಯಸದವನು; ಹುಟ್ಟಿ= ಜೇನುಗೂಡು; ಜೇನು+ಇಟ್ಟು;

ಹುಟ್ಟಿಯ ಮೇಲೆ ಜೇನಿಟ್ಟು=ಜೇನು ಹುಳುಗಳು ಮರದ ರೆಂಬೆಕೊಂಬೆಗಳಲ್ಲಿ/ ಕಲ್ಲಿನ ಪೊಟರೆಗಳಲ್ಲಿ ಗೂಡನ್ನು ಕಟ್ಟಿ ಹೂಗಳ ಮಕರಂದವನ್ನು ಹೀರಿತಂದು ಸಿಹಿಜೇನನ್ನು ತಯಾರಿಸುತ್ತವೆ;

ಪರರಿಗೆ=ಇತರರಿಗೆ; ಹೋಹ+ಅಂತೆ=ಹೋಗುವಂತೆ; ಹೋಹ=ಹೋಗುವ; ಅಂತೆ=ಹಾಗೆ;

ಪರರಿಗೆ ಕೊಟ್ಟು ಹೋಹಂತೆ=ಜೇನಿನ ಹುಳುಗಳು ತಾವು ತಯಾರಿಸಿದ ಜೇನನ್ನು ಸವಿಯುವುದಕ್ಕೆ ಮುನ್ನವೇ, ಇತರ ವ್ಯಕ್ತಿಗಳು ಜೇನು ಹುಳುಗಳನ್ನು ಚದುರಿಸಿ, ಜೇನುಹುಟ್ಟನ್ನು ಬಿಚ್ಚಿ, ಸಿಹಿಯಾದ ಜೇನನ್ನು ತಾವು ಸವಿಯುತ್ತಾರೆ/ಈ ರೀತಿ ಸಿಹಿಯಾದ ಜೇನು ಇತರರ ಪಾಲಾಗುವಂತೆ.)

❖

೩೨. ಕೊಟ್ಟುದು ತನಗೆ ಬಯಿಚಿಟ್ಟುದು ಪರರಿಗೆ
ಕೊಟ್ಟುದು ಕೆಟ್ಟಿತೆನಬೇಡವದು ಮುಂದೆ
ಕಟ್ಟಿದ ಬುತ್ತಿ ಸರ್ವಜ್ಞ.

ಇತರರ ಸಂಕಟಕ್ಕೆ ಮರುಗಿ ಮಾಡುವ ದಾನವು ಜೀವನದಲ್ಲಿ ನಮಗೆ ಒಳಿತನ್ನು ಉಂಟುಮಾಡುತ್ತದೆಯೆಂಬ ಜನಸಮುದಾಯದ ನಂಬಿಕೆಯನ್ನು ಈ ವಚನದಲ್ಲಿ ಹೇಳಲಾಗಿದೆ.

(ಕೊಟ್ಟುದು=ಇತರರಿಗೆ ನೆರವಾಗಲೆಂದು ನೀಡಿದ ಉಣಿಸು/ವಸ್ತು/ಹಣ; ತನಗೆ=ದಾನಿಗೆ/ದಾನ ಮಾಡಿದವನಿಗೆ; ಕೊಟ್ಟುದು ತನಗೆ=ದಾನ ಮಾಡುವುದರಿಂದ ದಾನಿಗೆ ಒಳಿತಾಗುವುದೆಂಬ ನಂಬಿಕೆ ನಮ್ಮ ಸಮಾಜದಲ್ಲಿದೆ; ಬಯಿಚಿಟ್ಟುದು= ಯಾರಿಗೂ ನೀಡದೆ ಅಡಗಿಸಿ ಇಟ್ಟದ್ದು/ಹಿಂದಿನ ಕಾಲದಲ್ಲಿ ಬೆಲೆಬಾಳುವ ಒಡವೆಗಳನ್ನು ಮತ್ತು ಚಿನ್ನಬೆಳ್ಳಿಯ ನಾಣ್ಯಗಳನ್ನು ನೆಲದೊಳಗೆ/ಮರದ ಪೊಟರೆ/ಇನ್ನಿತರ ಕಡೆಗಳಲ್ಲಿ ಬಚ್ಚಿಡುತ್ತಿದ್ದರು; ಪರರಿಗೆ=ಇತರರ ಪಾಲಾಗುತ್ತದೆ/ವಶವಾಗುತ್ತದೆ;

ಕೆಟ್ಟಿತು+ಎನಬೇಡ+ಅದು; ಅದು=ಮಾಡಿದ ದಾನ; ಕೆಟ್ಟಿತು= ಹಾಳಾಯಿತು/ ನಾಶವಾಯಿತು/ಉಪಯೋಗವಿಲ್ಲದಂತಾಯಿತು; ಎನಬೇಡ=ಅಂದುಕೊಳ್ಳಬೇಡ; ಮುಂದೆ=ಮುಂದಿನ ಜೀವನದ ಆಗುಹೋಗು ಗಳಲ್ಲಿ; ಕಟ್ಟಿದ ಬುತ್ತಿ=ದೂರದ ಊರಿಗೆ ಹೋಗುವವರು ಹಾದಿಯ ನಡುವೆ ತಂಗಿದಾಗ ಉಣಲೆಂದು ಜತೆಯಲ್ಲಿ ತೆಗೆದುಕೊಂಡು ಹೋಗುತ್ತಿದ್ದ ತಿನಸು/ಉಣಿಸಿನ ಗಂಟು;

ಕಟ್ಟಿದ ಬುತ್ತಿ–ಈ ಪದಕಂತೆಯು ಇಲ್ಲಿ ಒಂದು ನುಡಿಗಟ್ಟಾಗಿ ಬಳಕೆಯಾಗಿದೆ. ಇತರರ ಹಸಿವು/ಸಂಕಟ/ನೋವಿಗೆ ಮಿಡಿದು ನಾವು ಮಾಡಿದ ದಾನವು ಮುಂದೊಂದು ದಿನ ನಮಗೆ ಸಂಕಟ ಬಂದಾಗ ನಮ್ಮನ್ನು ಕಾಪಾಡುತ್ತದೆ. ಅಂದರೆ ಮತ್ತೊಬ್ಬರು ನಮಗೆ ನೆರವನ್ನು ನೀಡುತ್ತಾರೆ ಎಂಬ ನಂಬಿಕೆಯು ಜನಮನದಲ್ಲಿ ನೆಲೆಯೂರಿದೆ)

❖

೩೩. ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೆ ಮೇಲು
ಮೇಟಿಯಿಂ ರಾಟೆ ನಡೆದುದಲ್ಲದೆ ದೇಶ
ದಾಟವೆ ಕೆಡುಗು ಸರ್ವಜ್ಞ.

ಜೀವಿಗಳ ಹಸಿವನ್ನು ತಣಿಸುವುದಕ್ಕಾಗಿ ದವಸಧಾನ್ಯಗಳನ್ನು ಬೆಳೆಯುವ ಬೇಸಾಯದ ವಿದ್ಯೆಯೇ ಮಾನವನ ಎಲ್ಲಾ ಬಗೆಯ ಕಸುಬುಗಳಿಗಿಂತಲೂ ಮೇಲು/ ದೊಡ್ಡದೆಂಬುದನ್ನು ಹೇಳಲಾಗಿದೆ.

(ಕೋಟಿ=ಒಂದು ನೂರು ಲಕ್ಷವನ್ನು ಸೂಚಿಸುವ ಅಂಕಿ; ಕೋಟಿ ವಿದ್ಯೆ= ಬಹುಬಗೆಯ ತಿಳುವಳಿಕೆ/ಕುಶಲತೆ/ ಕಸುಬು; ಮೇಟಿ ವಿದ್ಯೆ=ಬೇಸಾಯವನ್ನು ಮಾಡುವ ಕುಶಲತೆ ಮತ್ತು ಕಸುಬು; ಮೇಟಿ=ರಾಗಿ/ಬತ್ತ/ಜೋಳ ಮುಂತಾದ ಬೆಳೆಗಳನ್ನು ಒಕ್ಕಣೆ ಮಾಡುವಾಗ ಕಣದ ನಟ್ಟನಡುವೆ ನೆಡುವ ಮರದ ದಪ್ಪನೆಯ ಕಂಬ; ರಾಟೆ ನಡೆದುದು+ಅಲ್ಲದೆ; ಮೇಲು=ದೊಡ್ಡದು; ರಾಟೆ=ನೂಲು ತೆಗೆಯುವ ಚರಕ/ಗಾಲಿ/ಚಕ್ರ;

ರಾಟೆ ನಡೆಯುವುದು=ಇದು ಒಂದು ನುಡಿಗಟ್ಟು. ಕೆಲಸಗಳು ಚೆನ್ನಾಗಿ ನಡೆಯುವುದು ಎಂಬ ತಿರುಳಿನಲ್ಲಿ ಬಳಕೆಯಾಗುತ್ತದೆ; ಮೇಟಿ+ಇಂ; ಇಂ=ಇಂದ;

ಮೇಟಿಯಿಂ ರಾಟೆ ನಡೆದುದು=ಬೇಸಾಯದಿಂದಲೇ ದೇಶದ ಸಾಮಾಜಿಕ ಬದುಕು, ಸಂಸ್ಕೃತಿ ಮತ್ತು ನಾಗರಿಕತೆಗಳು ಉಳಿದು ಬೆಳೆದು ಬಾಳುತ್ತಿವೆ; ಅಲ್ಲದೆ= ಬೇಸಾಯ ನಡೆಯದಿದ್ದರೆ; ದೇಶದ+ಆಟವೇ=ದೇಶದ ಎಲ್ಲಾ ಬಗೆಯ ಚಟುವಟಿಕೆಗಳು; ಆಟ=ಚಟುವಟಿಕೆ/ಆಗುಹೋಗು/ಕೆಲಸ; ಕೆಡುಗು= ನಾಶವಾಗುತ್ತವೆ/ಹಾಳಾಗುತ್ತವೆ)

❖

೩೪. ಕೋಟಿ ವಿದ್ಯವನೋದಿ ಪಾಟಿ ಮಾಡಿದರೇನು
ಕೂಟಸ್ಥವಿಲ್ಲದವನೋದು ಗಿಳಿ ಕಲಿತ
ಪಾಠದಂತಿಕ್ಕು ಸರ್ವಜ್ಞ.

ಅಕ್ಕರದ ಮೂಲಕ ವಿದ್ಯೆಯನ್ನು ಪಡೆದ ವ್ಯಕ್ತಿಯು ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡದಿದ್ದರೆ, ಅಂತಹವನ ಓದಿನಿಂದ ಯಾವುದೇ ಪ್ರಯೋಜನವಿಲ್ಲವೆಂಬುದನ್ನು ಹೇಳಲಾಗಿದೆ.

(ಕೋಟಿ=ಒಂದು ನೂರು ಲಕ್ಷವನ್ನು ಸೂಚಿಸುವ ಅಂಕಿ; ವಿದ್ಯವನು+ಓದಿ; ವಿದ್ಯೆ=ತಿಳುವಳಿಕೆ/ಕುಶಲತೆ/ಕಸುಬು; ಕೋಟಿ ವಿದ್ಯವನೋದಿ=ಹೆಚ್ಚಿನ ಪ್ರಮಾಣ ದಲ್ಲಿ ಬಹುತರದ ವಿದ್ಯೆಗಳನ್ನು ಕಲಿತು; ಪಾಟಿ=ಸೊಗಸು/ಸುಂದರ; ಪಾಟಿ ಮಾಡಿದರೆ=ದೊಡ್ಡ ವಿದ್ಯಾವಂತನೆಂಬ ಹೆಸರನ್ನು ಗಳಿಸಿದರೆ; ಮಾಡಿದರೆ +ಏನು; ಕೂಟಸ್ಥ+ಇಲ್ಲದವನ+ಓದು; ಕೂಟಸ್ಥ= ಜನಸಮುದಾಯ/ಸಮಾಜದೊಡನೆ ಕೂಡಿಕೊಂಡಿರುವುದು;

ಕೂಟಸ್ಥವಿಲ್ಲದವನೋದು=ಜನಸಮುದಾಯದ ಜತೆಯಲ್ಲಿ ಒಂದಾಗಿ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡದ ವಿದ್ಯೆ;

ಗಿಳಿ ಕಲಿತ ಪಾಠ=ಇದು ಒಂದು ನುಡಿಗಟ್ಟಾಗಿ ಬಳಕೆಯಾಗಿದೆ. ಕಲಿತಿರು ವುದನ್ನು ಮತ್ತೆ ಮತ್ತೆ ಅದೇ ರೀತಿ ಉಚ್ಚರಿಸುವುದು/ಓದಿನಿಂದ ಯಾವುದೇ ಬಗೆಯ ಅರಿವನ್ನಾಗಲಿ/ಒಳ್ಳೆಯ ನಡೆನುಡಿಗಳನ್ನಾಗಲಿ ಕಲಿಯದಿರುವುದು; ಪಾಠದ+ಅಂತೆ+ಇಕ್ಕು; ಅಂತೆ= ಹಾಗೆ; ಇಕ್ಕು=ಇರುವುದು/ಕಂಡುಬರುವುದು; ಪಾಠ=ಪುಸ್ತಕದಲ್ಲಿನ ಬರಹದ ವಿಚಾರ).

❖

೩೫. ಕೋಡಿಯನು ಕಟ್ಟಿದರೆ ಕೇಡಿಲ್ಲವಾ ಕೆರೆಗೆ
ಮಾಡು ಧರ‍್ಮಗಳ ಮನಮುಟ್ಟಿ ಕಾಲನಿಗೆ
ಈಡಾಗದ ಮುನ್ನ ಸರ‍್ವಜ್ಞ.

ಸಿರಿವಂತಿಕೆಯು ಇದ್ದಾಗ ಹಸಿದವರಿಗೆ/ನೊಂದವರಿಗೆ ನೆರವನ್ನು ನೀಡುವುದರಿಂದ ನಮಗೆ ಒಳಿತಾಗುತ್ತದೆಯೆಂಬುದನ್ನು ಹೇಳಲಾಗಿದೆ.

(ಕೋಡಿ=ಹರಿಯುತ್ತಿರುವ ನೀರಿಗೆ ಅಡ್ಡಗಟ್ಟೆಯನ್ನು ಹಾಕಿ ಕೆರೆಗೆ ಏರಿಯನ್ನು ಕಟ್ಟಿದಾಗ, ಕೆರೆಯು ತುಂಬಿ ತುಳುಕಿ ಹೆಚ್ಚಾದ ನೀರು ಹೊರಕ್ಕೆ ಹರಿದು ಹೋಗಲು ಮಾಡಿರುವ ಜಾಗ; ಕೇಡು+ಇಲ್ಲವು+ಆ; ಕೇಡು=ಹಾನಿ/ತೊಂದರೆ/ಅಪಾಯ; ಕೇಡಿಲ್ಲವಾ ಕೆರೆಗೆ=ಕೆರೆಯಲ್ಲಿ ಹೆಚ್ಚಾದ ನೀರು ಕೋಡಿಯ ಮೂಲಕ ಹೊರಹರಿದು ಏರಿಯು ಒಡೆದು ಹಾಳಾಗದೆ ಆ ಕೆರೆಯು ಉಳಿಯುತ್ತದೆ;

ಧರ‍್ಮ=ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿ; ಮನಮುಟ್ಟಿ=ಒಳ್ಳೆಯ ಉದ್ದೇಶದಿಂದ;

ಮಾಡು ಧರ‍್ಮಗಳ ಮನಮುಟ್ಟಿ=ಒಳ್ಳೆಯ ಉದ್ದೇಶದಿಂದ ಇತರರಿಗೆ ನೆರವನ್ನು ನೀಡುವುದು; ಕಾಲ=ಯಮ/ಸಾವು; ಈಡು+ ಆಗದ; ಈಡು=ಗುರಿ/ವಶ; ಮುನ್ನ=ಮೊದಲು/ಮುಂಚೆ; ಕಾಲನಿಗೆ ಈಡಾಗದ ಮುನ್ನ=ಸಾವು ಬರುವುದಕ್ಕೆ ಮೊದಲು/ಮಯ್ ಮನಗಳಲ್ಲಿ ಕಸುವು ಇರುವಾಗ);

❖

೩೬. ಕ್ಷಣಮಾತ್ರವಾದೊಡಂ ಗುಣಿಗಳೊಡನಾಡುವುದು
ಗುಣಹೀನರುಗಳ ಒಡನಾಡೆ ಬಹುದುಃಖ
ದಣಲೊಳಿರ್ದಂತೆ ಸರ್ವಜ್ಞ.

ಕೆಟ್ಟ ನಡೆನುಡಿಯುಳ್ಳವರ ಒಡನಾಟದಿಂದ ಉಂಟಾಗುವ ಹಾನಿಯ ಬಗ್ಗೆ ಎಚ್ಚರಿಕೆಯನ್ನು ನೀಡಲಾಗಿದೆ.

(ಕ್ಷಣಮಾತ್ರವು+ಆದೊಡಂ; ಕ್ಷಣ=ಗಳಿಗೆ/ಸಮಯ; ಕ್ಷಣಮಾತ್ರ=ತುಸು/ಕೆಲ ಸಮಯ; ಆದೊಡಂ=ಆದರೂ; ಗುಣಿಗಳ+ಒಡನೆ+ಆಡುವುದು; ಗುಣಿ= ಗುಣವುಳ್ಳವನು/ಒಳ್ಳೆಯ ನಡೆನುಡಿಯುಳ್ಳ ವ್ಯಕ್ತಿ; ಒಡನೆ=ಜತೆಯಲ್ಲಿ/ಸಂಗಡ; ಆಡುವುದು=ವ್ಯವಹರಿಸುವುದು/ನೆಂಟನ್ನು ಹೊಂದುವುದು; ಗುಣ=ಒಳ್ಳೆಯ ನಡೆನುಡಿ; ಹೀನ=ಇಲ್ಲದ/ಕೆಟ್ಟ/ಕೀಳು;

ಗುಣಹೀನ=ಒಳ್ಳೆಯ ನಡೆನುಡಿಯಿಲ್ಲದ ವ್ಯಕ್ತಿ; ಒಡನೆ+ಆಡೆ; ಆಡೆ=ಆಡಿದರೆ/ ವ್ಯವಹರಿಸಿದರೆ; ಬಹುದುಃಖದ+ ಅಣಲ್+ ಒಳ್+ ಇರ್ದ+ಅಂತೆ; ಬಹು=ಹೆಚ್ಚು/ ತುಂಬ/ಅನೇಕ; ದುಃಖ=ಸಂಕಟ/ನೋವು/ಯಾತನೆ; ಅಣಲು=ಬಾಯಿಯ ಒಳಗಡೆ/ಬಾಯಲ್ಲಿ/ದವಡೆ; ಒಳ್=ಅಲ್ಲಿ/ಒಳಗೆ; ಇರ್ದ=ಇದ್ದ; ಅಂತೆ=ಹಾಗೆ;

ಬಹುದುಃಖದಣಲ್=ಯಾವಾಗಲೂ ಒಂದಲ್ಲ ಒಂದು ಬಗೆಯಸಂಕಟ/ ಯಾತನೆ/ಅಪಮಾನ/ನೋವು ಉಂಟಾಗುತ್ತಿರುವ ನೆಲೆ/ಜಾಗ/ಎಡೆ ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ).

❖

೩೭. **ಗುಡಿಯ ಬೋದಿಗೆ ಕಲ್ಲು ನಡುವೆ ರಂಗ ತಾ ಕಲ್ಲು**
ಹೊಡವಡಿಸಿ ಕೊಂಬಡದು ಕಲ್ಲು ಲಿಂಗವಿ
ದ್ದೆಡೆಯನಾರರಿಗು ಸರ್ವಜ್ಞ.

ಕಲ್ಲದೇಗುಲದಲ್ಲಿ ದೇವರು ಇರುವ ಎಡೆಯನ್ನು ತಿಳಿಯಲಾಗದ ಬಗೆಯನ್ನು ಹೇಳಲಾಗಿದೆ.

(ಗುಡಿ=ದೇಗುಲ/ದೇವರ ಮಂದಿರ; ಬೋದಿಗೆ=ಕಂಬದ ಮೇಲೆ ತೊಲೆಯನ್ನು ಇಡಲು ಬಳಸುವ ವಸ್ತು; ನಡುವೆ=ಗರ್ಭಗುಡಿಯ ಮುಂದಿನ ಜಾಗ; ರಂಗ=ದೇವರ ಮುಂದೆ ನಾಟ್ಯ ಸಂಗೀತ ಮುಂತಾದ ಕಲೆಗಳನ್ನು ತೋರಿಸಲು ಮಾಡಿರುವ ವೇದಿಕೆ/ಜಾಗ; ತಾ=ಅದು; ಹೊಡವಡು=ಹೊಡೆ+ಪಡು; ಹೊಡೆ= ಹೊಟ್ಟೆ/ಒಡಲು; ಪಡು=ಮಲಗು/ಒರಗು;

ಹೊಡವಡು=ಇಡೀ ಮಯ್ಯನ್ನು ನೆಲದ ಮೇಲೊಡ್ಡಿ ತಲೆಬಾಗಿ ನಮಿಸುವುದು; ಕೊಂಬಡೆ+ಅದು; ಕೊಂಬಡೆ=ಕೊಳ್ಳುವುದೆಂದರೆ; ಕೊಂಬ=ಕೊಳುವ;

ಹೊಡವಡಿಸಿ ಕೊಂಬಡದು ಕಲ್ಲು=ದಿಂಡುರುಳಿ ನಮಸ್ಕರಿಸಿಕೊಳ್ಳುತ್ತಿರುವ ದೇವರ ವಿಗ್ರಹವೂ ಕಲ್ಲು;

ಲಿಂಗ+ಇದ್ದ+ಎಡೆಯನ್+ಆರ್+ಅರಿಗು; ಲಿಂಗ= ದೇವರಾದ ಶಿವ; ಇದ್ದ=ಇರುವ; ಎಡೆ=ಜಾಗ/ನೆಲೆ; ಅನ್=ಅನ್ನು; ಆರ್= ಯಾರು; ಅರಿ=ತಿಳಿ; ಆರರಿಗು=ಯಾರು ತಾನೆ ತಿಳಿದಿದ್ದಾರೆ).

❖

೩೮. ಜಡೆಯ ಕಟ್ಟಲುಬಹುದು ಕಡವಸವನುಡಬಹುದು
ಬಿಡದೆ ದೇಗುಲದೊಳಿರಬಹುದು ಕರಣಗಳ
ತಡೆದು ನಿಲಬಾರದು ಸರ್ವಜ್ಞ.

ಹೊರ ಮಯ್ಯನ್ನು ಹತೋಟಿಯಲ್ಲಿ ಇಟ್ಟುಕೊಂಡಿರುವಂತೆ ತೋರಿಸಿಕೊಳ್ಳ ಬಹುದೇ ಹೊರತು, ಒಳ ಮನಸ್ಸು ಮಾತ್ರ ಬಯಕೆಗಳ ಒಳಮಿಡಿತದಿಂದ ತಲ್ಲಣಿಸುತ್ತಿರುತ್ತದೆ ಎಂಬುದನ್ನು ಹೇಳಲಾಗಿದೆ.

(**ಜಡೆ ಕಟ್ಟುವುದು**=ಹೆಂಡತಿಮಕ್ಕಳ ನೆಂಟನ್ನು ತೊರೆದು ಇಲ್ಲವೇ ಮದುವೆಯನ್ನೇ ಆಗದೆ ಸಂನ್ಯಾಸವನ್ನು ಪಡೆಯುವುದು/ತಮ್ಮ ತಲೆಯ ಜುಟ್ಟನ್ನು ಮೇಲಕ್ಕೆ ಎತ್ತಿಕಟ್ಟಿಕೊಳ್ಳುವುದು ರಿಸಿಮುನಿಗಳ/ವಿರಾಗಿಗಳ ಸಂಪ್ರದಾಯವಾಗಿತ್ತು; ಕಡವಸವನು+ಉಡಬಹುದು; ಕಡವಸ=ಜಿಂಕೆಯ ತೊಗಲು. ಇದನ್ನು ರಿಸಿಮುನಿಗಳು ಮಯ್ಯನ್ನು ಮುಚ್ಚಿಕೊಳ್ಳಲು/ಜಪವನ್ನು ಮಾಡುವಾಗ ಕುಳಿತು ಕೊಳ್ಳಲು ಬಳಸುತ್ತಿದ್ದರು; ಉಡು=ಉಟ್ಟುಕೊಳ್ಳುವುದು/ಸುತ್ತಿಕೊಳ್ಳುವುದು; ಬಿಡದೆ=ಯಾವಾಗಲೂ/ಸದಾ ಕಾಲ;

ದೇಗುಲದೊಳು+ಇರಬಹುದು; ದೇಗುಲ=ದೇವ+ಕುಲ; ಕುಲ=ಮನೆ/ ಮಂದಿರ/ನೆಲೆ; ದೇಗುಲ=ದೇವರ ವಿಗ್ರಹವಿರುವ ಮಂದಿರ; ಕರಣಗಳು=ಕಣ್ಣು–ಕಿವಿ–ಮೂಗು–ನಾಲಗೆ–ತೊಗಲು ಎಂಬ ಅಯ್ದು ಬಗೆಯ ಅಂಗಗಳು; ತಡೆ= ಹತೋಟಿಯಲ್ಲಿಡು/ಹದ್ದು ಬಸ್ತಿನಲ್ಲಿಡು; ನಿಲಬಾರ=ನಿಲ್ಲಿಸಲು ಬಾರದು/ ಆಗುವುದಿಲ್ಲ;

ಕರಣಗಳ ತಡೆದು ನಿಲಬಾರದು=ಮನದಲ್ಲಿ ಬಯಕೆಗಳ ಒಳಮಿಡಿತಗಳು ಉಂಟಾಗಲು/ಕೆರಳಲು ಕಾರಣವಾಗುವ ಅಯ್ದು ಇಂದ್ರಿಯ ಗಳನ್ನು ಹತೋಟಿಯಲ್ಲಿಡಲಾಗದು).

❖

೩೯. ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ
ಜಾತಿ ವಿಜಾತಿಯೆನಬೇಡ ಶಿವನೊಲಿ
ದಾತನೇ ಜಾತ ಸರ್ವಜ್ಞ.

ಮೇಲು–ಕೀಳೆಂಬ ಜಾತಿ ಮೆಟ್ಟಲುಗಳಿಂದ ಕೂಡಿರುವ ಸಮಾಜದಲ್ಲಿ "ಜಾತಿ ಎನ್ನುವುದು ಮಾನವರೇ ಕಟ್ಟಿಕೊಂಡಿರುವ ಒಂದು ಸಾಮಾಜಿಕ ಒಕ್ಕೂಟ. ಆದುದರಿಂದ ಜಾತಿ ಎಂಬುದು ಮಾನವನ ದೇಹದಲ್ಲಿಲ್ಲ; ಮನದಲ್ಲಿ ನೆಲೆಸಿದೆ. ಜಾತಿಯ ಕಾರಣಕ್ಕಾಗಿ ಯಾವುದೇ ವ್ಯಕ್ತಿಯನ್ನು ಮೆಚ್ಚಿಕೊಳ್ಳಬಾರದು ಇಲ್ಲವೆ ಕಡೆಗಣಿಸ ಬಾರದು. ವ್ಯಕ್ತಿಯಲ್ಲಿರುವ ಒಳ್ಳೆಯ ನಡೆನುಡಿಗಳನ್ನು ಮಾತ್ರ ಗುರುತಿಸಬೇಕು." ಎಂಬ ಅರಿವನ್ನು ಮೂಡಿಸಲು ರೂಪಕವೊಂದರ ಮೂಲಕ ಹೇಳಲಾಗಿದೆ. ಬೆಳಗುತ್ತಿರುವ ಜ್ಯೋತಿಯು ಇಲ್ಲಿ ರೂಪಕವಾಗಿದೆ.

(ಹೀನ=ಕೀಳಾದವನು; ಜಾತಿಹೀನ=ಸಾಮಾಜಿಕ ರಚನೆಯಲ್ಲಿ ಕೆಳಜಾತಿಯವನೆಂದು ಜನಸಮುದಾಯದ ಕಡೆಗಣಿಸುವಿಕೆಗೆ ಗುರಿಯಾದವನು; ಜ್ಯೋತಿ= ಉರಿಯುತ್ತಿರುವ ಹಣತೆಯಿಂದ ಹೊರಹೊಮ್ಮುತ್ತಿರುವ ಬೆಳಕಿನ ಕಿರಣಗಳು; ಜ್ಯೋತಿ ಹೀನವೇ= ಎಲ್ಲೆಡೆಯಲ್ಲಿಯು ಬೆಳಗುತ್ತಿರುವ ಜ್ಯೋತಿಯ ಕಿರಣಗಳಲ್ಲಿ ಮೇಲು ಕೀಳೆಂಬುದಿಲ್ಲ; ವಿಜಾತಿಯು+ಎನಬೇಡ; ವಿಜಾತಿ=ಬೇರೆ ಜಾತಿ;

ಜಾತಿ ವಿಜಾತಿ ಎನಬೇಡ=ತನ್ನ ಜಾತಿಯು ಮೇಲು ಮತ್ತೊಬ್ಬನ ಜಾತಿಯು ಕೀಳು ಎಂಬ ಒಳಮಿಡಿತದಿಂದ ವ್ಯಕ್ತಿಗಳನ್ನು ನೋಡಬೇಡ; ಶಿವನ+ಒಲಿದ+ಆತನೇ; ಶಿವನ=ಶಿವನನ್ನು; ಒಲಿದ=ಮೆಚ್ಚಿದ/ನಂಬಿರುವ/ಪೂಜಿಸುವ; **ಶಿವನೊಲಿದಾತನೇ**= ಒಳ್ಳೆಯ ನಡೆನುಡಿಗಳನ್ನೇ ಶಿವನೆಂದು ನಂಬಿರುವ ವ್ಯಕಿಯೇ; ಜಾತ= ಹುಟ್ಟಿದವನು/ ಒಳ್ಳೆಯ ವ್ಯಕ್ತಿ).

❖

೪೦. ತನ್ನ ದೋಷವ ನೂರ ಬೆನ್ನ ಹಿಂದಕೆ ಇರಿಸಿ
ಅನ್ಯನೊಂದಕ್ಕೆ ಹುಲಿಯಪ್ಪ ಮಾನವನು
ಕುನ್ನಿಯಲ್ಲೇನು ಸರ್ವಜ್ಞ.

ತನ್ನ ನಡೆನುಡಿಯಲ್ಲಿನ ನೂರಾರು ತಪ್ಪುಗಳನ್ನು ಮರೆಮಾಚಿಕೊಂಡು, ಮತ್ತೊಬ್ಬರು ಮಾಡುವ ಒಂದು ತಪ್ಪನ್ನೇ ದೊಡ್ಡದಾಗಿ ಎತ್ತಿಹಿಡಿದು ಅಬ್ಬರಿಸುವಂತಹ ವ್ಯಕ್ತಿಯ ನೀಚತನದ ವರ್ತನೆಯನ್ನು ಹೇಳಲಾಗಿದೆ.

(ದೋಷ=ಕೆಟ್ಟ ನಡೆನುಡಿ; **ತನ್ನ ದೋಷವ ನೂರ**=ವ್ಯಕ್ತಿಯೊಬ್ಬನು ತಾನು ಮಾಡಿರುವ ಹಲವಾರು ಬಗೆಯ ತಪ್ಪುಗಳನ್ನು; ನೂರು=ಒಂದು ಅಂಕಿ/ಬಗೆ ಬಗೆಯ/ಲೆಕ್ಕವಿಲ್ಲದಷ್ಟು; **ಬೆನ್ನ ಹಿಂದಕೆ** ಇರಿಸಿ=ಕಡೆಗಣಿಸಿ/ಮರೆಮಾಚಿ/**ಮುಚ್ಚಿಟ್ಟು ಕೊಂಡು;**

ಅನ್ಯನ+ಒಂದಕ್ಕೆ; ಅನ್ಯ=ಬೇರೆ/ಇತರ; ಅನ್ಯನ=ಮತ್ತೊಬ್ಬನ; ಹುಲಿಯು+ ಅಪ್ಪ=ಹುಲಿಯಂತೆ ಅಬ್ಬರಿಸುವ/ಸಿಡಿಮಿಡಿಗೊಳ್ಳುವ/ಕೆರಳುವ/ಕೋಪಗೊಳ್ಳುವ; ಅಪ್ಪ=ಆಗುವ; ಮಾನವನು=ವ್ಯಕ್ತಿಯು;

ಕುನ್ನಿಯು+ಅಲ್ಲೇನು=ನಾಯಿಯಲ್ಲವೇ; ಕುನ್ನಿ=ನಾಯಿ/ನಾಯಿಮರಿ; ಅಲ್ಲೇನು=ಅಲ್ಲವೇನು; 'ಕುನ್ನಿ' ಎಂಬ ಪದ ಬೈಗುಳವಾಗಿ ಬಳಕೆಯಾಗಿದೆ.

❖

೪೧. ತನ್ನ ಮುಖ ಬೆನ್ನುಗಳು ತನ್ನ ಕಣ್ಣಿಗೆ ಮರೆಯು
ತನ್ನ ಗುಣದೋಷಗಳನರಿಯೆ ಇದನರಿದ
ಇನ್ನೊಬ್ಬ ಬೇಕು ಸರ್ವಜ್ಞ.

ನಮ್ಮ ಒಪ್ಪು-ತಪ್ಪುಗಳು ನಮಗೆ ತಿಳಿಯುವುದಿಲ್ಲ; ಇತರರು ನಮ್ಮ ನಡೆನುಡಿಯನ್ನು ಒರೆಹಚ್ಚಿ ನೋಡಿ ಹೇಳುವಂತಾದಾಗ ನಮ್ಮ ವ್ಯಕ್ತಿತ್ವದಲ್ಲಿನ ಒಳಿತು-ಕೆಡುಕಿನ ಸಂಗತಿಗಳು ನಮಗೆ ಮನವರಿಕೆಯಾಗುತ್ತವೆ ಎಂಬುದನ್ನು ಹೇಳಲಾಗಿದೆ.

(ಮರೆ=ಕಾಣುವುದಿಲ್ಲ/ಗೋಚರಿಸುವುದಿಲ್ಲ; ತನ್ನ=ಯಾವುದೇ ಒಬ್ಬ ವ್ಯಕ್ತಿಯ; ಗುಣದೋಷಗಳನು+ಅರಿಯೆ; ಗುಣ=ಒಳ್ಳೆಯ ನಡೆ ನುಡಿ; ದೋಷ=ಕುಂದು/ಕೊರತೆ/ತಪ್ಪು/ಕೆಟ್ಟತನ; ಅರಿಯೆ=ತಿಳಿಯಲು; ಇದನು+ಅರಿದ;

ಇದನ್ನರಿದ=ಇದನ್ನು ತಿಳಿದ; ಇನ್ನೊಬ್ಬ=ಮತ್ತೊಬ್ಬ/ಬೇರೆಯವನು; ಬೇಕು=ಅಗತ್ಯವಿದೆ; ಅರಿ=ತಿಳಿ/ಕಾಣು).

❖

೪೨. ತಪ್ಪ ಸಾಧಿಪ ನೃಪನೊಳಿಪ್ಪವನವನೆಗ್ಗ
ಸರ್ಪನ ಹೆಡೆಯ ನೆಳಲೆಂದು ಸಾರಿದ
ಕಪ್ಪೆಯಂತಕ್ಕು ಸರ್ವಜ್ಞ.

ಮಾಡಿದ ತಪ್ಪನ್ನೇ ಸರಿಯೆಂದು ವಾದಮಾಡುವ ರಾಜನ/ಒಡೆಯನ/ಮೇಲಿನ ಗದ್ದುಗೆಯಲ್ಲಿರುವ ವ್ಯಕ್ತಿಯ ಜತೆಗಿನ ಒಡನಾಟ/ನೆಂಟು/ವ್ಯವಹಾರ ಒಳ್ಳೆಯದಲ್ಲವೆಂಬ ಎಚ್ಚರಿಕೆಯನ್ನು ನೀಡಲಾಗಿದೆ.

(ತಪ್ಪು=ಆಡುವ ಮಾತು/ಮಾಡುವ ಕೆಲಸದಲ್ಲಿ ಸರಿಯಲ್ಲದ್ದು; ಸಾಧಿಪ= ಸರಿಯೆಂದು ವಾದಿಸುವವನು; **ತಪ್ಪ ಸಾಧಿಪ**=ತಾನು ಮಾಡಿದ/ತನ್ನಿಂದಾಗಿರುವ ಕೇಡು/ವಂಚನೆ/ಹಾನಿಯನ್ನು ಸರಿಯೆಂದು ಮೊಂಡುಹಿಡಿದು ಮಾತನಾಡು ವವನು; ನೃಪನೊಳ್+ಇಪ್ಪವನ್+ಅವನ್+ಎಗ್ಗ; ನೃಪ=ದೊರೆ/ಒಡೆಯ/ ಯಜಮಾನ/ಮೇಲಿನ ಗದ್ದುಗೆಯಲ್ಲಿರುವವನು; ಒಳ್=ಬಳಿಯಲ್ಲಿ; ಇಪ್ಪ=ಇರುವ; ಇಪ್ಪವನ್=ಇರುವವನು; ಎಗ್ಗ=ದಡ್ಡ/ತಿಳಿಗೇಡಿ; ಸರ್ಪ=ಹಾವು; ಹೆಡೆ=ಅಗಲಗೊಂಡಾಗ ಕಂಡುಬರುವ ನಾಗರ ಹಾವಿನ ತಲೆಯ ಜಾಗ;

ಸರ್ಪನ ಹೆಡೆ=ತನ್ನ ಉಳಿವಿಗಾಗಿ/ಇತರರನ್ನು ಕಚ್ಚುವುದಕ್ಕೆ ಮೊದಲು ನಾಗರಹಾವು ತನ್ನ ತಲೆಯನ್ನು ಅಗಲಿಸುವುದು/ಬಿಚ್ಚುವುದು; ನೆಳಲು+ಎಂದು= ನೆರಳೆಂದು ತಿಳಿದು/ನಂಬಿ; ಸಾರು=ಸಮೀಪಿಸು/ಹತ್ತಿರಕ್ಕೆ ಹೋಗು; ಕಪ್ಪೆ+ಅಂತೆ+ ಅಕ್ಕು; ಅಂತೆ=ಹಾಗೆ; ಅಕ್ಕು=ಆಗುವುದು;

ಸರ್ಪನ ಹೆಡೆಯ ನೆಳಲು=ಸಾವಿನ ಸಮೀಪದಲ್ಲಿರುವುದು/ಯಾವ ಗಳಿಗೆ ಯಲ್ಲಾದರೂ ಸಾವಿಗೀಡಾಗುವ ತಾಣ/ಜಾಗ ಎಂಬ ತಿರುಳುಳ್ಳ ನುಡಿಗಟ್ಟು).

❖

೪೩. ತೆಂಗಿಗೂ ಹಿರಿಯರಿಗೂ ಹಂಗು ಮಾಡಲು ಬೇಕು
ತೆಂಗಿನ ಮೊದಲ್ಗೆ ನೀರೆರೆಯೆ ಕಡೆಯಲಿ
ಹಿಂಗದೆ ಕೊಡುಗು ಸರ್ವಜ್ಞ.

ಎಳೆಯದಾಗಿರುವ ತೆಂಗಿನ ಸಸಿಯನ್ನು ಮತ್ತು ಮುಪ್ಪಿನಲ್ಲಿರುವ ಹಿರಿಯರನ್ನು ಒಲವು ನಲಿವಿನಿಂದ ಆರಯ್ಕೆ ಮಾಡಬೇಕೆಂಬ ತಿಳುವಳಿಕೆಯನ್ನು ನೀಡಲಾಗಿದೆ.

(ತೆಂಗು=ನೆಟ್ಟ ಸಸಿಯನ್ನು ಅಯ್ದಾರು ವರುಶಗಳ ಕಾಲ ಚೆನ್ನಾಗಿ ನೋಡಿಕೊಂಡರೆ, ಮುಂದೆ ನೂರು ವರುಶಗಳ ಕಾಲ ಬೆಳೆ ಕೊಡುವ ಮರ; ಹಿರಿಯರು=ನಮ್ಮ ಹುಟ್ಟಿಗೆ ಮತ್ತು ಬದುಕು ರೂಪುಗೊಳ್ಳುವುದಕ್ಕೆ ತಮ್ಮ ಮಯ್-ಮನಗಳ ಕಸುವನ್ನೆಲ್ಲಾ ನೀಡಿ, ಈಗ ಮುಪ್ಪಿನಲ್ಲಿರುವ ತಂದೆತಾಯಿ/ನಮ್ಮನ್ನು ಬೆಳೆಸಿದ ವ್ಯಕ್ತಿಗಳು; ಹಂಗು=ನೆರವು/ಸಹಾಯ/ಉಪಚಾರ/ಸೇವೆ;

ಹಂಗು ಮಾಡಲು ಬೇಕು=ತೆಂಗಿನ ಸಸಿಯು ಮರವಾಗಿ ಬೆಳೆಯಲು ಮತ್ತು ಹಿರಿಯರು ಮುಪ್ಪಿನಲ್ಲಿ ನೆಮ್ಮದಿಯಿಂದ ಇರಲು ಬೇಕಾದ ಆರಯ್ಕೆಯನ್ನು ಮಾಡಬೇಕು; ಮೊದಲ್ಗೆ=ಮೊದಲಿನಲ್ಲಿ ಅಂದರೆ ತೆಂಗು ಸಸಿಯಾಗಿದ್ದಾಗ; ನೀರ+ಎರೆಯೆ; ನೀರ=ನೀರನ್ನು; ಎರೆ=ಸುರಿ/ಹಾಕು; ಕಡೆಯಲಿ=ಕಡೆಯಲ್ಲಿ/ಅನಂತರ; ಹಿಂಗು= ಕಡಿಮೆಯಾಗು/ಹಾಳಾಗು/ಕೆಡು; ಕೊಡುಗು=ಕೊಡುತ್ತದೆ/ನೀಡುತ್ತದೆ;

ಹಿಂಗದೆ ಕೊಡುಗು=ತೆಂಗಿನ ಮರವು ನಿರಂತರವಾಗಿ ಬೆಳೆಯನ್ನು ನೀಡುತ್ತದೆ/ಹಿರಿಯರ ಸೇವೆಯಿಂದ ಮನಸ್ಸಿಗೆ ನೆಮ್ಮದಿಯು ದೊರಕುತ್ತದೆ).

❖

೪೪. ದಂತಪಂಕ್ತಿಗಳೊಳಗೆ ಎಂತಿಕ್ಕು ನಾಲಗೆಯು
ಸಂತತ ಖಳರ ಒಡನಿರ್ದು ಬಾಳುವು
ದಂತೆ ಕಂಡಯ್ಯ ಸರ್ವಜ್ಞ.

ಕೆಟ್ಟವರ ನಡುವೆ ಇರುವಾಗ ಅಪಾಯಕ್ಕೆ ಸಿಲುಕದೆ ಬಾಳುವ ಜಾಣತನದ ನಡೆನುಡಿಗಳನ್ನು ಹೊಂದಿರಬೇಕು ಎಂಬುದನ್ನು ಹೇಳಲಾಗಿದೆ.

(ದಂತ+ಪಂಕ್ತಿಗಳ+ಒಳಗೆ; ದಂತ=ಹಲ್ಲು; ಪಂಕ್ತಿ=ಸಾಲು; ಎಂತು+ಇಕ್ಕು; ಎಂತು=ಹೇಗೆ/ಯಾವ ರೀತಿ; ಇಕ್ಕು=ಇರುವುದು; ಸಂತತ=ಯಾವಾಗಲೂ/ಸದಾಕಾಲ;

ಖಳ=ನೀಚ/ಕೇಡಿ/ಮೋಸಗಾರ; ಒಡನೆ+ಇರ್ದು; ಒಡನೆ=ಜತೆಯಲ್ಲಿ/ಸಹವಾಸದಲ್ಲಿ; ಇರ್ದು=ಇದ್ದು; ಬಾಳುವುದು+ಅಂತೆ; ಅಂತೆ=ಹಾಗೆ; ಕಂಡ+ಅಯ್ಯ=ತಿಳಿದು ನೋಡಯ್ಯ).

❖

೪೫. ಧನಕನಕ ಉಳ್ಳನಕ ದಿನಕರನಂತಿಕ್ಕು
ಧನಕನಕ ಹೋದ ಬೆಳಗಾಗಿ ಹಾಳೂರ
ಶುನಕನಂತಕ್ಕು ಸರ್ವಜ್ಞ.

ಸಂಪತ್ತು ಇದ್ದಾಗ/ಇಲ್ಲವಾದಾಗ ವ್ಯಕ್ತಿಯ ಸಾಮಾಜಿಕ ಅಂತಸ್ತಿನಲ್ಲಿ ಉಂಟಾಗುವ ಏರಿಳಿತಗಳನ್ನು ಎರಡು ಹೋಲಿಕೆಗಳ ಮೂಲಕ ಹೇಳಲಾಗಿದೆ.

(ಧನ=ಹಣ; ಕನಕ=ಚಿನ್ನ/ಬಂಗಾರ; ಉಳ್ಳ+ಅನಕ; ಉಳ್ಳ=ಇರುವ; ಅನಕ= ತನಕ/ವರೆಗೆ; ಉಳ್ಳನಕ=ಇರುವವರೆಗೆ; ದಿನಕರನ+ಅಂತೆ+ಇಕ್ಕು; ದಿನಕರ= ಸೂರ್ಯ/ರವಿ; ಅಂತೆ=ಹಾಗೆ; ಇಕ್ಕು=ಇರುವುದು/ಕಂಡುಬರುವುದು;

ದಿನಕರನಂತೆ ಇಕ್ಕು=ಬೆಳಕಿನ ಕಿರಣಗಳಿಂದ ಕಣ್ಮನಗಳನ್ನು ಸೆಳೆಯುವ ಸೂರ್ಯನಂತೆ ಸಂಪತ್ತುಳ್ಳವನು ಸಮಾಜದಲ್ಲಿ ದೊಡ್ಡ ಅಂತಸ್ತನ್ನು ಹೊಂದಿ ಜನಮನ್ನಣೆಯಿಂದ ಕಂಗೊಳಿಸುತ್ತಾನೆ;

ಧನಕನಕ ಹೋದ=ಇರುವ ಸಂಪತ್ತೆಲ್ಲವೂ ಕಳೆದುಹೋದ ನಂತರ; ಬೆಳಗು+ ಆಗಿ=ಬೆಳಕು ಹರಿದು ಮರುದಿನ ಬರುತ್ತಿದ್ದಂತೆಯೇ; ಹಾಳು+ಊರ= ಪಾಳುಬಿದ್ದ ಊರಿನ; ಶುನಕನ+ಅಂತೆ+ಅಕ್ಕು; ಶುನಕ=ನಾಯಿ;

ಹಾಳೂರ ಶುನಕನಂತೆ=ಪಾಳುಬಿದ್ದ ಊರಿನಲ್ಲಿ ಚೆಲ್ಲಾಡಿರುವ ವಸ್ತುಗಳ ನಡುವೆ ಉಣಿಸನ್ನು ಅರಸುತ್ತಾ ಅಲೆಯುವ ನಾಯಿಯಂತೆ ಸಂಪತ್ತಿಲ್ಲದವನು ಸಾಮಾಜಿಕವಾಗಿ ಎಲ್ಲರ ಕಡೆಗಣನೆಗೆ ಗುರಿಯಾಗಿ ಗತಿಕೇಡಿಯಾಗಿ ಅಲೆಯುತ್ತಿರುತ್ತಾನೆ).

❖

೪೬. ನಡೆವುದೊಂದೆ ಭೂಮಿ ಕುಡಿವುದೊಂದೆ ನೀರು
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ
ನಡುವೆ ಎತ್ತಣದು ಸರ್ವಜ್ಞ.

ಮೇಲು–ಕೀಳೆಂಬ ಜಾತಿ ಮೆಟ್ಟಲುಗಳಿಂದ ಕೂಡಿರುವ ಸಮಾಜದಲ್ಲಿ "ಜಾತಿ ಎನ್ನುವುದು ಮಾನವರೇ ಕಟ್ಟಿಕೊಂಡಿರುವ ಒಂದು ಸಾಮಾಜಿಕ ರಚನೆ. ಆದುದರಿಂದ ಜಾತಿ ಎಂಬುದು ಮಾನವನ ದೇಹದಲ್ಲಿಲ್ಲ; ಮನದಲ್ಲಿ ನೆಲೆಸಿದೆ. ಜಾತಿಯ ಕಾರಣಕ್ಕಾಗಿ ಯಾವುದೇ ವ್ಯಕ್ತಿಯನ್ನು ಮೆಚ್ಚಿಕೊಳ್ಳಬಾರದು ಇಲ್ಲವೆ ಕಡೆಗಣಿಸ ಬಾರದು. ವ್ಯಕ್ತಿಯಲ್ಲಿರುವ ಒಳ್ಳೆಯ ನಡೆನುಡಿಗಳನ್ನು ಮಾತ್ರ ಗುರುತಿಸಬೇಕು." ಎಂಬ ಅರಿವನ್ನು ಮೂಡಿಸಲು ಕಣ್ಣ ಮುಂದಿನ ನಿಸರ್ಗದಲ್ಲಿ ಕಾಣುವ ಮತ್ತು ನಡೆಯುವ ಪ್ರಸಂಗಗಳಿಂದ ಹೇಳಲಾಗಿದೆ.

(ನಡೆವುದು+ಒಂದೆ; ಕುಡಿವುದು+ಒಂದೆ; ಸುಡುವ+ಅಗ್ನಿಯು+ಒಂದೆ; ಅಗ್ನಿ=ಬೆಂಕಿ; ಇರುತ+ಇರಲು; ಇರುತಿರಲು=ಇರುವಾಗ; ಕುಲ=ಜಾತಿ/ವಂಶ; ಗೋತ್ರ=ಪೀಳಿಗೆ/ಮನೆತನ;

ಕುಲಗೋತ್ರ=ಹುಟ್ಟಿದ ಮಗುವಿನ ಕುಟುಂಬದ ಹಿನ್ನೆಲೆಯನ್ನು ತಿಳಿಸುವ ಜಾತಿ–ಉಪಜಾತಿ–ಮತ; ಎತ್ತಣ=ಯಾವ ಕಡೆ/ದಿಕ್ಕು; ಎತ್ತಣದು=ಯಾವ ಕಡೆಯದು).

❖

೪೭. ನರಳುವಗೆ ಕಡುರೋಗ ಮೊರೆವಂಗೆ ರಾಗವು
ಬರೆವಂಗೆ ಓದು ಬರುವಂತೆ ಸಾಧಿಪಂಗೆ
ಬರದುದೊಂದುಂಟೆ ಸರ್ವಜ್ಞ.

ಜೀವನದಲ್ಲಿ ಉಂಟಾಗುವ ಒಳಿತು ಕೆಡುಕು / ಏಳು ಬೀಳುಗಳಿಗೆ ನಮ್ಮ ಮಯ್ ಮನಗಳಲ್ಲಿ ತುಡಿಯುವ ಒಳಮಿಡಿತಗಳೇ ಕಾರಣವೆಂಬುದನ್ನು ಹೇಳಲಾಗಿದೆ.

(ನರಳುವಗೆ=ಮನಸ್ಸಿನಲ್ಲಿ ಯಾವಾಗಲೂ ಒಂದಲ್ಲ ಒಂದು ಬಗೆಯ ಆತಂಕ/ ಸಂಕಟ/ಹೆದರಿಕೆ/ಹಿಂಜರಿಕೆಯಿಂದ ಒದ್ದಾಡುವವನಿಗೆ; ಕಡು=ಹೆಚ್ಚಿನ/ಅತಿಯಾದ /ದೊಡ್ಡದಾದ; ಕಡುರೋಗ=ಕೆಟ್ಟಕಾಯಿಲೆ/ದೊಡ್ಡರೋಗ; ಮೊರೆ=ತುಂಬಿಯಂತೆ ದನಿಮಾಡು/ಜೇಂಕರಿಸು/ಹಾಡಿನ ದನಿಯಲ್ಲಿ ಗುನುಗುನಿಸು; ಮೊರೆವಂಗೆ= ಉಲ್ಲಾಸ/ಆನಂದ/ಲವಲವಿಕೆಯಿಂದ ಗುನುಗುತ್ತಿರುವವನಿಗೆ/ಹಾಡುತ್ತಿರುವವನಿಗೆ; ರಾಗ=ಇಂಪಾದ ದನಿ;

ಬರೆವಂಗೆ=ಬರೆವಣಿಗೆಯನ್ನು ಕಲಿತವನಿಗೆ/ಬರಹದಲ್ಲಿ ತೊಡಗಿದವನಿಗೆ; ಓದು ಬರುವಂತೆ=ವಿದ್ಯೆ ಕರಗತವಾಗುವಂತೆ; ಸಾಧಿಪಂಗೆ=ಕಯ್ಗೊಂಡ ಕೆಲಸವನ್ನು ಮಾಡಿ ಮುಗಿಸುವ ತನಕ ಪಟ್ಟುಹಿಡಿದು ದುಡಿಯುವವನಿಗೆ; **ಬರದುದು+ಒಂದು+ಉಂಟೆ;** ಬರದುದು=ದೊರೆಯದಿರುವುದು; ಒಂದು=ಯಾವುದಾದರೂ; ಉಂಟೆ=ಇದೆಯೇ?;

ಬರದುದೊಂದುಂಟೆ=ದೊರೆಯದಿರುವುದು ಯಾವುದೂ ಇಲ್ಲ ಎಂದರೆ ಬಯಸಿದ್ದೆಲ್ಲವೂ ದೊರೆಯುತ್ತದೆ/ಕಯ್ಗೊಂಡ ಕೆಲಸಗಳೆಲ್ಲವೂ ಈಡೇರುತ್ತವೆ).

❖

೪೮. ನಿತ್ಯ ನೇಮಗಳೇಕೆ ಮತ್ತೆ ಪೂಜೆಗಳೇಕೆ
ನೆತ್ತಿ ಬೋಳೇಕೆ ಜಡೆಯೇಕೆ ಅರಿದು ನೆರೆ
ಸತ್ಯ ಉಳ್ಳವಗೆ ಸರ್ವಜ್ಞ.

ಆಡುವ ಮಾತು ಮತ್ತು ಕಯ್ಗೊಂಡ ಕೆಲಸಗಳಲ್ಲಿ ಇತರರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ಸತ್ಯವಂತನಾದ ವ್ಯಕ್ತಿಗೆ, ದೇವರ ಬಗ್ಗೆ ತನ್ನಲ್ಲಿರುವ ಒಲವನ್ನು ತೋರಿಸಿಕೊಳ್ಳುವಂತಹ ಯಾವುದೇ ಬಗೆಯ ಉಡುಗೆ ತೊಡುಗೆ ಮತ್ತು ಆಚರಣೆಗಳ ಅಗತ್ಯವಿಲ್ಲವೆಂಬುದನ್ನು ಹೇಳಲಾಗಿದೆ.

(ನಿತ್ಯ=ಪ್ರತಿದಿನ; ನೇಮಗಳು+ಏಕೆ; ನೇಮ=ಪೂಜೆ/ಉಪವಾಸ ಮುಂತಾದ ಆಚರಣೆಗಳು; ಪೂಜೆಗಳ್+ಏಕೆ; ನೆತ್ತಿ=ತಲೆಯ ಮೇಲಿನ ಜಾಗ/ಎಡೆ; ಬೋಳು=ತಲೆಯ ಮೇಲೆ ಕೂದಲು ಇಲ್ಲದಿರುವುದು; ಜಡೆ=ಉದ್ದನೆಯ ತಲೆಗೂದಲನ್ನು ಹೆಣೆದು ಕಟ್ಟಿರುವುದು;

ನೆತ್ತಿಬೋಳು=ತಲೆಕೂದಲನ್ನು ದೇವರಿಗೆ ಹರಕೆಯಾಗಿ ನೀಡುವುದು; ಜಡೆ=ದೇವರಲ್ಲಿ ಒಲವು ಉಳ್ಳವನಂತೆ ತೋರಿಸಿಕೊಳ್ಳಲು ಉದ್ದನೆಯ ತಲೆಗೂದಲನ್ನು ತಲೆಯಮೇಲೆ ಎತ್ತಿಕಟ್ಟುವುದು/ಜಪತಪಗಳಲ್ಲಿ ತೊಡಗಿರುವ ಮುನಿಗಳ ಎತ್ತಿಕಟ್ಟಿದ ತಲೆಗೂದಲು;

ಅರಿದು=ತಿಳಿದು; ನೆರೆ=ಚೆನ್ನಾಗಿ/ಕೂಡಿ; ಸತ್ಯ=ನಿಜ/ವಾಸ್ತವ/ದಿಟ; ಉಳ್ಳ+ ಅವಗೆ; ಉಳ್ಳ=ಇರುವ; ಅವಗೆ=ಅವನಿಗೆ; ಉಳ್ಳವಗೆ=ಇರುವವನಿಗೆ; ಸತ್ಯ ಉಳ್ಳವಗೆ =ಸಹ ಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ವ್ಯಕ್ತಿಗೆ).

❖

೪೯. ನುಡಿಸುವುದಸತ್ಯವನು ಕೆಡಿಸುವುದು ಧರ್ಮವನು
ಒಡಲನೆ ಕಟ್ಟಿ ಹಿಡಿಸುವುದು ಲೋಭದ
ಗಡಣ ಕಾಣಯ್ಯ ಸರ್ವಜ್ಞ.

ವ್ಯಕ್ತಿಯ ಮನದಲ್ಲಿ ತುಡಿಯುವ ಅತಿಯಾಸೆ/ಜಿಪುಣತನವು ಎಲ್ಲಾ ಬಗೆಯ ಕೆಟ್ಟಕೆಲಸಗಳನ್ನು ಮಾಡಲು ಕಾರಣವಾಗುತ್ತದೆ ಎಂಬುದನ್ನು ಹೇಳಲಾಗಿದೆ.

(ನುಡಿಸುವುದು+ಅಸತ್ಯವನು; ಅಸತ್ಯ=ನಿಜವಲ್ಲದ್ದು/ದಿಟವಲ್ಲದ್ದು/ಸುಳ್ಳು; ಸತ್ಯ= ನಿಜ/ದಿಟ/ವಾಸ್ತವ; ಕೆಡಿಸುವುದು=ನಾಶಪಡಿಸುವುದು/ಹಾಳು ಮಾಡುವುದು; ಧರ್ಮ=ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟು ಮಾಡುವಂತಹ ನಡೆನುಡಿಗಳು; ಒಡಲು=ಹೊಟ್ಟೆ/ದೇಹ/ಮಯ್;

ಒಡಲನೆ ಕಟ್ಟಿ ಹಿಡಿಸುವುದು=ಗಳಿಸಿದ ಹಣದಿಂದ/ಸಂಪತ್ತಿನಿಂದ ಜೀವನದಲ್ಲಿ ಯಾವುದೇ ಬಗೆಯ ಒಲವು ನಲಿವನ್ನು ಹೊಂದದಿರುವುದು ಅಂದರೆ ಹೊಟ್ಟೆಬಟ್ಟೆ ಕಟ್ಟಿ ಹಣವನ್ನು ಕೂಡಿಡುವುದರಲ್ಲಿಯೇ ತೊಡಗುವುದು; ಲೋಭ=ಅತಿಯಾಸೆ/ ಕೆಟ್ಟ ಆಸೆ/ಜಿಪುಣತನ; ಗಡಣ=ಸಮೂಹ/ಗುಂಪು/ರಾಶಿ; ಲೋಭ ಗಡಣ= ಅತಿಯಾದ ಆಸೆಯ/ಜಿಪುಣತನದ ನಡೆನುಡಿಗಳು; ಕಾಣು+ಅಯ್ಯ=ತಿಳಿದು ನೋಡು).

❖

೫೦. ನೆತ್ತವೂ ಕುತ್ತವೂ ಹತ್ತಿದಡೆ ಅಳವಲ್ಲ
ಕುತ್ತದಿಂ ದೇಹ ಬಡವಕ್ಕು ನೆತ್ತದಿಂ
ಬತ್ತಲೆಯಕ್ಕು ಸರ್ವಜ್ಞ.

ಜೂಜಿನ ಚಟಕ್ಕೆ ಬಲಿಯಾದರೆ, ಎಂತಹ ಕೇಡು ಉಂಟಾಗುತ್ತದೆ ಎಂಬ ಎಚ್ಚರಿಕೆಯನ್ನು ನೀಡಲಾಗಿದೆ.

(ನೆತ್ತ=ಪಗಡೆಯಾಟ/ಜೂಜು/ಸಂಪತ್ತನ್ನು ಒಡ್ಡಿ ಆಡುವ ಯಾವುದೇ ಆಟ; ಕುತ್ತ=ರೋಗ/ಬೇನೆ; ಹತ್ತು=ಅಂಟು/ಸೇರು/ಕೂಡು; ಹತ್ತಿದೊಡೆ=ಅಂಟಿ ಕೊಂಡರೆ /ತಗುಲಿಕೊಂಡರೆ;

ನೆತ್ತ ಹತ್ತಿದೊಡೆ=ಜೂಜಾಡುವುದು ಮಾನಸಿಕ ಚಟವಾದರೆ/ಜೂಜಿನ ಸೆಳೆತಕ್ಕೆ ಒಳಗಾದರೆ; ಕುತ್ತ ಹತ್ತಿದೊಡೆ=ರೋಗ ಅಂಟಿ ಕೊಂಡರೆ/ಬಂದರೆ; ಅಳವು+ಅಲ್ಲ; ಅಳವು=ಕಸುವು/ವಿವೇಕ/ಒಳಿತು ಕೆಡುಕಿನ ಅರಿವು; ಅಳವಲ್ಲ=ಒಳಿತಾಗುವುದಿಲ್ಲ/ ತಡೆದುಕೊಳ್ಳುವ ಶಕ್ತಿಯಿರುವುದಿಲ್ಲ;

ದೇಹ=ಮಯ್/ಶರೀರ; ಕುತ್ತದಿಂ=ಕುತ್ತದಿಂದ; ಬಡವು+ಅಕ್ಕು; ಬಡವು= ಸೊರಗುವಿಕೆ/ಬಲ ಕುಗ್ಗುವಿಕೆ; ಅಕ್ಕು=ಆಗುವುದು; **ದೇಹ ಬಡವಕ್ಕು**=ಮಯ್ಯಿನ ಕಸುವು ಕುಗ್ಗುತ್ತದೆ; ನೆತ್ತದಿಂ=ನೆತ್ತದಿಂದ; ಬತ್ತಲೆ+ಅಕ್ಕು; ಬತ್ತಲೆ=ಬರಿ ಮಯ್/ ಉಡುಗೆ ತೊಡುಗೆಯಿಲ್ಲದ ಮಯ್;

ನೆತ್ತದಿಂ ಬತ್ತಲೆಯಕ್ಕು=ಜೂಜಿನಿಂದಾಗಿ ಮನೆಮಟ ಆಸ್ತಿಪಾಸ್ತಿ ಹಣಕಾಸು ಎಲ್ಲವನ್ನೂ ಕಳೆದುಕೊಂಡು ಬರಿಗಯ್ಯಾಗಿ ಬೀದಿಪಾಲಾಗುವುದು).

❖

೫೧. ನೆಲವನು ಮುಗಿಲನು ಹೊಲಿವರುಂಟೆಂದರೆ
ಹೊಲಿವರು ಹೊಲಿವರೆನಬೇಕು ಅವರೊಡನೆ
ಛಲಬೇಡವೆಂದ ಸರ್ವಜ್ಞ.

ತಿಳಿಗೇಡಿಗಳ ಜತೆಯಲ್ಲಿ ಮಾತಿಗೆ ಮಾತು ಬೆಳಸಬಾರದು ಎಂಬ ಎಚ್ಚರಿಕೆಯನ್ನು ನೀಡಲಾಗಿದೆ.

(ನೆಲವನು=ಭೂಮಿಯನ್ನು; ಮುಗಿಲು=ಆಕಾಶ/ಬಾನು/ಗಗನ; ಹೊಲಿವರು+ ಉಂಟು+ಎಂದರೆ; ಹೊಲಿ=ಹೆಣೆ/ಹೊಲಿಗೆ ಹಾಕು/ಜತೆಗೂಡಿಸು; ಹೊಲಿವರು= ಯಾವುದಾದರೊಂದು ಬಗೆಯ ದಾರದಿಂದ ಹೊಲಿಯುವವರು; ಉಂಟು= ಇದ್ದಾರೆ; ಎಂದರೆ=ಎಂದು ಹೇಳಿದರೆ;

ಹೊಲಿವರು+ಎನಬೇಕು=ಹೊಲಿಯುತ್ತಾರೆ ಎಂದು ಒಪ್ಪಿಕೊಳ್ಳಬೇಕು; ಎನಬೇಕು= ಎನ್ನಬೇಕು/ಒಪ್ಪಿಗೆಯನ್ನು ಸೂಚಿಸಬೇಕು; ಅವರ+ಒಡನೆ; ಅವರೊಡನೆ= ವಿವೇಚನೆಯಿಲ್ಲದೆ/ಅರಿವಿಲ್ಲದೆ/ವಾಸ್ತವದ ತಿಳುವಳಿಕೆ ಇಲ್ಲದೆ ಮಾತನಾಡುವ ಅಂತಹ ವ್ಯಕ್ತಿಗಳೊಡನೆ; ಚಲಬೇಡ+ಎಂದ; ಛಲ=ಸರಿ/ತಪ್ಪುಗಳ ವಾದವಿವಾದ; ಬೇಡ=ಮಾಡಬಾರದು).

❖

೫೨. ಪಾಪವೆಂಬುದಕೆ ತಿಳಿ ಕೋಪವೇ ನೆಲಗಟ್ಟು
ಕೂಪದೊಳು ನೇಣು ಹರಿದಂತೆ ನರಕಕ್ಕೆ
ಕೋಪಿ ತಾನಿಳಿವ ಸರ್ವಜ್ಞ.

ಮನದೊಳಗೆ ಕೆರಳುವ ಕೋಪವನ್ನು ಹತೋಟಿಯಲ್ಲಿಡದಿದ್ದರೆ ಉಂಟಾಗುವ ಹಾನಿಯನ್ನು ಹೇಳಲಾಗಿದೆ.

(ಪಾಪ+ಎಂಬುದಕೆ; ಪಾಪ=ಸಹಮಾನವರಿಗೆ ಮತ್ತು ಸಮಾಜಕ್ಕೆ ಮಾಡುವ ಕೇಡಿನ ಕೆಲಸ; ಎಂಬುದಕೆ=ಎನ್ನುವುದಕ್ಕೆ; ತಿಳಿ=ಅರಿತುಕೊ; ಕೋಪ=ತನ್ನ ಉದ್ದೇಶ ಮತ್ತು ಕೆಲಸಕ್ಕೆ ಅಡ್ಡಿ ಆತಂಕಗಳು ಉಂಟಾದಾಗ ಮಾನವನ ಮನಸ್ಸಿನಲ್ಲಿ ಕೆರಳುವ ಒಳಮಿಡಿತಗಳು/ಸಿಟ್ಟು/ಮುನಿಸು; ನೆಲಗಟ್ಟು=ನೆಲ+ಕಟ್ಟು; ನೆಲಗಟ್ಟು=ತಳಹದಿ/ಅಡಿಪಾಯ;

ಕೋಪವೇ ನೆಲಗಟ್ಟು=ಕೋಪದಿಂದ ಕೆರಳಿ ಮಯ್ ಮನಗಳ ಮೇಲಣ ಹತೋಟಿಯನ್ನು ಕಳೆದುಕೊಂಡು ಆಡುವ ನುಡಿ ಮತ್ತು ಮಾಡುವ ಕೆಲಸಗಳೇ ಪಾಪಕಾರ್ಯಗಳಿಗೆ ಮೂಲಕಾರಣ; ಕೂಪದ+ಒಳು;

ಕೂಪ=ಹಳ್ಳ/ಬಾವಿ/ಗುಳಿ; ಒಳು=ಅಲ್ಲಿ/ಒಳಗೆ; ನೇಣು=ಬಿಂದಿಗೆ/ಕೊಡದ ಕೊರಳನ್ನು ಬಿಗಿದು ಕಟ್ಟಿರುವ ಹಗ್ಗದ ಕುಣಿಕೆ; ಹರಿದ+ಅಂತೆ; ಹರಿದ=ಕಿತ್ತು ಹೋದ/ಕಳಚಿಹೋದ; ಅಂತೆ=ಹಾಗೆ; **ಕೂಪದೊಳು ನೇಣು ಹರಿದಂತೆ**=ಬಾವಿಯಿಂದ ನೀರು ತುಂಬಿದ ಕೊಡವನ್ನು ಮೇಲಕ್ಕೆ ಎಳೆದುಕೊಳ್ಳುವಾಗ, ಕೊಡಕ್ಕೆ ಕಟ್ಟಿರುವ ಕುಣಿಕೆಯು ತುಂಡಾದರೆ, ಕೊಡವು ಬಾವಿಯ ಒಳಕ್ಕೆ ಬಿದ್ದು ಹೋಗುವಂತೆ ಕೋಪದಿಂದ ಪಾಪದ ಕೆಲಸವನ್ನು ಮಾಡುವವನು ಹಾಳಾಗುತ್ತಾನೆ; ನರಕಕ್ಕೆ=ಬಹುಬಗೆಯ ನೋವುಸಂಕಟಗಳ ಯಾತನೆಗೆ; ಕೋಪಿ=ಕೋಪಗೊಂಡು ಕೆಟ್ಟ ಕೆಲಸಗಳನ್ನು ಮಾಡಿದವನು; ತಾನು+ಇಳಿವ=ಅವನು ಗುರಿಯಾಗುತ್ತಾನೆ/ಒಳಗಾಗುತ್ತಾನೆ).

❖

೫೩. ಬಡವನೊಳ್ಳೆಯ ಮಾತ ನುಡಿದರಲ್ಲೆಂಬರು
ಪೊಡವೀಶ ಬಳ್ಳುಗೆಡೆದಡೆ ಹೊಗಳುತ
ಕಡುಜಾಣನೆಂಬರು ಸರ್ವಜ್ಞ.

ವ್ಯಕ್ತಿಯು ಆಡುವ ಮಾತಿಗೆ ದೊರೆಯುವ ತೆಗಳಿಕೆ ಮತ್ತು ಹೊಗಳಿಕೆಯು ಆತನು ಹೊಂದಿರುವ ಸಾಮಾಜಿಕ ಅಂತಸ್ತನ್ನು ಅವಲಂಬಿಸಿರುತ್ತದೆ ಎಂಬುದನ್ನು ಹೇಳಲಾಗಿದೆ.

(ಬಡವ=ಆಸ್ತಿಪಾಸ್ತಿಯಿಲ್ಲದವನು/ಸಂಪತ್ತಿಲ್ಲದವನು/ಹಣಕಾಸು ಇಲ್ಲದವನು; ಬಡವನು+ಒಳ್ಳೆಯ; ಮಾತ=ಮಾತನ್ನು; ನುಡಿದರೆ+ಅಲ್ಲ+ಎಂಬರು; ಎಂಬರು=ಎನ್ನುವರು; ಅಲ್ಲೆಂಬರು=ಸರಿಯೆಂದು ಒಪ್ಪಿಕೊಳ್ಳದೆ ನಿರಾಕರಿಸುತ್ತಾರೆ/ ಸುಳ್ಳು ಎಂದು ತೆಗಳುತ್ತಾರೆ; ಪೊಡವಿ+ಈಶ; ಪೊಡವಿ=ನೆಲ/ಬುವಿ/ರಾಜ್ಯ; ಈಶ=ದೊರೆ/ಒಡೆಯ/ಯಜಮಾನ; ಬಳ್ಳು+ಗೆಡೆದಡೆ; ಬಳ್ಳು=ನರಿ;

ಬಳ್ಳು= ಬಗುಳು /ನಾಯಿ ನರಿಗಳ ಕೂಗುವಿಕೆ/ಅರಚುವಿಕೆ; ಗೆಡೆ=ಬಾಯಿಗೆ ಬಂದಂತೆ ಮಾತನಾಡು/ಹರಟು/ಗಳಹು; ಬಳ್ಳುಗೆಡೆ=ನಾಯಿ ಬೊಗಳುವುದು/ ನರಿಯು ಊಳಿಡುವುದು/ಅರಚುವುದು–ಕೆಟ್ಟ/ಹಗುರವಾದ/ಪ್ರಯೋಜನವಿಲ್ಲದ ಮಾತುಗಳನ್ನು ಆಡುವುದು;

ಬಳ್ಳುಗೆಡೆದಡೆ=ಹರಟಿದರೆ/ಪೊಳ್ಳುನುಡಿಗಳನ್ನಾಡಿದರೆ; ಹೊಗಳು=ಕೊಂಡಾಡು /ಗುಣಗಾನ ಮಾಡು; ಕಡುಜಾಣನು+ಎಂಬರು; ಕಡು=ಬಹಳ/ಹೆಚ್ಚಿನ; ಜಾಣ=ಅರಿವುಳ್ಳವನು/ತಿಳುವಳಿಕೆಯುಳ್ಳವನು).

❖

೫೪. ಬಡವನೊಂದೊಳುನುಡಿಯ ನುಡಿದರೆ ನಿಲ್ಲದು
ಕೊಡೆಯ ನೆಳಲಾತ ನುಡಿದರೆ ನಾಯಕನ
ನುಡಿಯೆಂದು ನಿಲುಹೆ ಸರ್ವಜ್ಞ.

ಬಡವರ ಮಾತುಗಳಿಗೆ ಮತ್ತು ಉಳ್ಳವರ ಮಾತುಗಳಿಗೆ ಸಮಾಜದಲ್ಲಿ ದೊರೆಯುವ ಬೆಲೆಯನ್ನು ಹೇಳಲಾಗಿದೆ.

(ಬಡವನು+ಒಂದು+ಒಳುನುಡಿಯ; ಬಡವ=ಆಸ್ತಿಪಾಸ್ತಿಯಿಲ್ಲದವನು/ ಸಂಪತ್ತಿಲ್ಲದವನು/ಹಣಕಾಸು ಇಲ್ಲದವನು; ಒಳು=ಒಳಿತಾದ/ಚೆನ್ನಾದ; ನುಡಿ= ಮಾತು; ನಿಲ್ಲದು=ಬೆಲೆಯನ್ನು ಪಡೆಯದು/ಒಪ್ಪಿತವಾಗದು; ಕೊಡೆ=ಚತ್ರಿ; ನೆಳಲ+ ಆತ; ನೆಳಲು=ನೆರಳು/ಆಶ್ರಯ/ಬಳಿ/ಆಸರೆ; ಆತ=ಅವನು;

ಕೊಡೆಯ ನೆಳಲು=ದೊರೆ/ಸಿರಿವಂತ/ದೊಡ್ಡ ಗದ್ದುಗೆಯಲ್ಲಿರುವವರ ಸಾಮಾಜಿಕ ಅಂತಸ್ತನ್ನು ಸೂಚಿಸುವ ಒಂದು ಉಪಕರಣವಾಗಿ ಬಿಚ್ಚಿದ ಕೊಡೆಯನ್ನು ತಲೆಯ ಮೇಲೆ ಎತ್ತಿಹಿಡಿಯಲಾಗುತ್ತಿತ್ತು;

ಕೊಡೆಯ ನೆಳಲಾತ=ಸಮಾಜದಲ್ಲಿ ದೊಡ್ಡ ಹುದ್ದೆಯಲ್ಲಿರುವವನು; ನಾಯಕ= ಮುಂದಾಳು/ದೊರೆ/ಸಮುದಾಯವನ್ನು ಮುನ್ನಡೆಸುವವನು; ನುಡಿ+ಎಂದು; ನಿಲುಹು=ನೆಲೆಗೊಳಿಸು/ಇರುವಂತೆ ಮಾಡು; ನಿಲುಹೆ=ನೆಲೆಗೊಳ್ಳುತ್ತದೆ/ಬೆಲೆ ಪಡೆಯುತ್ತದೆ/ಒಪ್ಪಿತವಾಗುತ್ತದೆ).

❖

೫೫. ಬತ್ತಿಯೆಣ್ಣೆಗಳೆರಡು ಹೊತ್ತಿ ಬೆಳಗುವ ತೆರದಿ
ಸತ್ಯ ನೀತಿಗಳು ಬೆಳಗಿಹವು ಜೋಡಗಲೆ
ಕತ್ತಲೀ ಜಗವು ಸರ್ವಜ್ಞ.

ಮಾನವ ಸಮುದಾಯದ ಜೀವನವು ಚೆನ್ನಾಗಿರಬೇಕಾದರೆ ಜನರ ನಡೆನುಡಿಗಳಲ್ಲಿ ಸತ್ಯ ಮತ್ತು ನೀತಿ ಜತೆಗೂಡಿರಬೇಕಾದ ಅಗತ್ಯವನ್ನು ಬೆಳಗುತ್ತಿರುವ ದೀಪವೊಂದರ ರೂಪಕದ ಮೂಲಕ ಹೇಳಲಾಗಿದೆ.

(ಬತ್ತಿ+ಎಣ್ಣೆಗಳು+ಎರಡು; ಬತ್ತಿ=ಹತ್ತಿಯ ಎಳೆಗಳಿಂದ ಮಾಡಿರುವ ವಸ್ತು; ಎಣ್ಣೆ=ಎಳ್ಳು/ಕಡಲೇಕಾಯಿ/ಹಿಪ್ಪೇಕಾಯಿ ಮುಂತಾದ ಕಾಳುಗಳಿಂದ ತೆಗೆದಿರುವ ಜಿಡ್ಡು; ಹೊತ್ತಿ=ಬೆಂಕಿ ತಗುಲಿ ಉರಿಯುತ್ತಾ; ಬೆಳಗು=ಹೊಳೆ/ಪ್ರಕಾಶಿಸು/ ಕಾಂತಿಯನ್ನು ಹರಡು; ಬೆಳಗಿ+ಇಹವು; ಬೆಳಗು=ನಲಿವು–ಒಲವು–ಚಟುವಟಿಕೆ ಗಳಿಂದ ಕೂಡಿದ ಬದುಕಿಗೆ ಸಂಕೇತ; ತೆರ=ರೀತಿ/ಬಗೆ;

ತೆರದಿ=ರೀತಿಯಲ್ಲಿ/ಬಗೆಯಲ್ಲಿ; ಸತ್ಯ=ನಿಜದ ನಡೆನುಡಿ; ನೀತಿ=ತನಗೆ ಒಳಿತನ್ನು ಮಾಡಿಕೊಳ್ಳು ವಂತೆಯೇ ಸಹಮಾನವರಿಗೂ ಒಳಿತನ್ನು ಮಾಡುವ ನಡೆನುಡಿ; ಇಹವು=ಇರುವುವು; ಜೋಡಿ+ಅಗಲೆ; ಜೋಡಿ=ಜೊತೆ/ಎರಡರ ಕೂಡುವಿಕೆ; ಅಗಲು= ದೂರವಾಗು/ಬೇರೆ ಬೇರೆಯಾಗು; ಅಗಲೆ=ದೂರವಾದರೆ/ ಬೇರೆಬೇರೆಯಾದರೆ;

ಕತ್ತಲು ಈ ಜಗವು=ಜಗದ ಜೀವನವು ಕೊಲೆ ಸುಲಿಗೆ ಹಿಂಸೆಯಿಂದ ನರಳುತ್ತದೆ; ಕತ್ತಲೆ=ಬಡತನ–ಅಪಮಾನ–ನೋವಿನಿಂದ ಕೂಡಿದ ಬದುಕಿಗೆ ಸಂಕೇತ).

❖

೫೬. ಬರೆ ಕಂಡು ಕರೆಯದನ ಇರು ಕುಳ್ಳಿರೆನ್ನದನ
ಸರಸ ಸಜ್ಜನಿಕೆಯಿರದವನ ಸಖತನವ
ಬೆರಸಲೇ ಬೇಡ ಸರ್ವಜ್ಞ.

ಒಳ್ಳೆಯ ನಡೆನುಡಿಯಿಲ್ಲದ ಮತ್ತು ಇತರರನ್ನು ತನ್ನಂತೆ ತಿಳಿದು ಒಲವಿನಿಂದ ನಡೆದುಕೊಳ್ಳದ ವ್ಯಕ್ತಿಯೊಡನೆ ಗೆಳೆತನವನ್ನು ಮಾಡಬಾರದೆಂಬ ಎಚ್ಚರಿಕೆಯನ್ನು ನೀಡಲಾಗಿದೆ.

(ಬರೆ=ಬರ್+ಎ; ಬರ್=ಸಮೀಪಿಸು/ಆಗಮಿಸು; ಬರೆ=ತನ್ನ ಬಳಿಗೆ/ಹತ್ತಿರಕ್ಕೆ ವ್ಯಕ್ತಿಯೊಬ್ಬನು ಬಂದಾಗ; ಕಂಡು=ನೋಡಿ/ತಿಳಿದು; ಕರೆಯದನ=ಕರೆಯದವನ; ಕರೆ=ಬರಮಾಡಿಕೊಳ್ಳುವುದು; ಕುಳ್ಳಿರು+ಎನ್ನದನ; ಕುಳ್ಳಿರು=ಕುಳಿತಿಕೊ; ಎನ್ನದನ= ಎನ್ನದವನ;

ಸರಸ=ಒಲವು ನಲಿವನ್ನು ಉಂಟುಮಾಡುವ ನಡೆ ನುಡಿಗಳು; ಸಜ್ಜನಿಕೆಯು+ ಇರದವನ; ಸಜ್ಜನಿಕೆ=ಒಳ್ಳೆಯ ನಡೆನುಡಿ; ಇರದನ= ಇರದವನ; ಸಖ=ಗೆಳೆಯ/ ಮಿತ್ರ/ಸ್ನೇಹಿತ; ಸಖತನ=ಸಂಗ/ಸಹವಾಸ/ಸ್ನೇಹ/ಒಡನಾಟ; ಬೆರಸು=ಕೂಡು/ ಸೇರು; ಬೆರಸಲೇ ಬೇಡ=ಮಾಡಲೇಬೇಡ/ಮಾಡದಿರು).

❖

೫೭. ಬಲ್ಲವರ ಒಡನಾಡೆ ಬೆಲ್ಲವನು ಸವಿದಂತೆ
ಅಲ್ಲದಜ್ಞಾನಿಯೊಡನಾಡೆ ಮೊಳಕೈಗೆ
ಕಲ್ಲು ಹೊಡೆದಂತೆ ಸರ್ವಜ್ಞ.

ತಿಳುವಳಿಕೆಯುಳ್ಳವರ ಜತೆಯಲ್ಲಿ ಗೆಳೆತನ/ನಂಟು/ವ್ಯವಹಾರವನ್ನು ಮಾಡಿದಾಗ ಉಂಟಾಗುವ ಒಲವು ನಲಿವು ಹಾಗೂ ತಿಳುವಳಿಕೆಯಿಲ್ಲದವರ ಜತೆಯಲ್ಲಿ ಮಾಡಿದಾಗ ಉಂಟಾಗುವ ನೋವು/ಸಂಕಟಗಳ ಬಗೆಯನ್ನು ಈ ವಚನದಲ್ಲಿ ಹೇಳಲಾಗಿದೆ.

(ಬಲ್ಲ+ಅವರ; ಬಲ್ಲ=ಬಲ್+ಅ; ಬಲ್=ತಿಳಿ/ಅರಿ; ಬಲ್ಲ=ತಿಳಿದ/ಅರಿತ; ಬಲ್ಲವರ=ತಿಳಿದವರ/ಅರಿತವರ; ಒಡನೆ+ಆಡೆ; ಒಡನೆ=ಜತೆ/ಸಂಗಡ/ಕೂಡ; ಆಡು+ಎ; ಆಡು=ವ್ಯವಹರಿಸು; ಒಡನಾಡೆ=ಗೆಳೆತನ/ನಂಟು/ವ್ಯವಹಾರಗಳನ್ನು ಮಾಡಿದರೆ; ಬೆಲ್ಲ=ಕಬ್ಬಿನ ಹಾಲನ್ನು ಕಾಯಿಸಿ ತಯಾರಿಸಿದ ಸಿಹಿಯಾದ ಉಂಡೆ/ವಸ್ತು;

ಸವಿದ+ಅಂತೆ; ಸವಿ=ತಿನ್ನು/ರುಚಿ ನೋಡು; ಅಂತೆ=ಹಾಗೆ; ಅಲ್ಲದೆ+ಅಜ್ಞಾನಿಯ+ಒಡನೆ+ಆಡೆ; ಅಲ್ಲದೆ=ಹಾಗೆ ಮಾಡದೆ; ಅ+ಜ್ಞಾನಿ; ಜ್ಞಾನಿ=ತಿಳುವಳಿಕೆ/ಅರಿವು ಉಳ್ಳವನು; ಅಜ್ಞಾನಿ=ತಿಳುವಳಿಕೆಯಿಲ್ಲದವನು/ಅರಿವಿಲ್ಲದವನು; ಮೊಳಕೈ=ಕಯ್ಯಿ ಮತ್ತು ತೋಳನ್ನು ಜತೆಗೂಡಿಸಿರುವ ಕೀಲಿನ ಎಡೆ/ಜಾಗ; ಹೊಡೆದ+ಅಂತೆ; ಹೊಡೆ=ಬಡಿ/ಅಪ್ಪಳಿಸು).

❖

೫೮. ಬಲ್ಲಿದ ನುಡಿದರೆ ಬೆಲ್ಲವ ಮೆದ್ದಂತೆ
ಇಲ್ಲದ ಬಡವ ನುಡಿದರೆ ಬಾಯೊಳಗೆ
ಜಳ್ಳು ಬಿದ್ದಂತೆ ಸರ್ವಜ್ಞ.

ಸಮಾಜದಲ್ಲಿ ಸಿರಿವಂತರ ಮಾತಿಗೆ ಮೆಚ್ಚುಗೆಯನ್ನು/ಬಡವರ ಮಾತಿಗೆ ತಿರಸ್ಕಾರವನ್ನು ತೋರಿಸುವ ಬಗೆಯನ್ನು ಹೇಳಲಾಗಿದೆ.

(ಬಲ್ಲಿದ=ಹಣ ಆಸ್ತಿ ಗದ್ದುಗೆಯಿಂದ ಸಾಮಾಜಿಕವಾಗಿ ದೊಡ್ಡ ಅಂತಸ್ತನ್ನು ಪಡೆದವನು/ಉಳ್ಳವನು; ನುಡಿದರೆ=ಮಾತನಾಡಿದರೆ/ಏನನ್ನೂ ಹೇಳಿದರೂ;

ಬೆಲ್ಲ=ಕಬ್ಬಿನ ಹಾಲನ್ನು ಕಾಯಿಸಿ ತಯಾರಿಸಿದ ಸಿಹಿಯಾದ ಉಂಡೆ/ವಸ್ತು; ಬೆಲ್ಲವ=ಬೆಲ್ಲವನ್ನು; ಮೆದ್ದ+ಅಂತೆ=ತಿಂದ ಹಾಗೆ; ಮೆದ್ದ=ತಿಂದ; ಅಂತೆ=ಹಾಗೇ; **ಮೆಲ್ಲು**=ತಿನ್ನು;

ಇಲ್ಲದ=ಯಾವುದೇ ಸಂಪತ್ತನ್ನು ಹೊಂದಿರದ/ಗತಿಗೇಡಿಯಾದ; ಬಡವ=ಸಂಪತ್ತಿಲ್ಲದವನು/ಹಣಕಾಸು ಇಲ್ಲದವನು; ಬಾಯ್+ಒಳಗೆ; ಜಳ್ಳು=ಒಳಗೆ ತಿರುಳಿಲ್ಲದ ಕಾಳು; ಬಿದ್ದ+ಅಂತೆ=ಬಿದ್ದ ಹಾಗೆ)

❖

೫೯. ಮಂದಿಯನಾಳುವಡೆ ಅಂದಣವನೇರುವಡೆ
ಸಂಧಿಸಿ ಭೋಗಪಡೆವಡೆ ಧರ‍್ಮವ
ಕುಂದದೆ ಮಾಡು ಸರ‍್ವಜ್ಞ.

ಸಂಪತ್ತು, ಗದ್ದುಗೆ ಮತ್ತು ಒಲವು ನಲಿವಿನ ಬದುಕು ದೊರಕಿದಾಗ ಸಹಮಾನವರ ಮತ್ತು ಸಮಾಜದ ಒಳಿತಿಗೆ ನೆರವಾಗುವ ಕೆಲಸದಲ್ಲಿ ತೊಡಗಬೇಕೆಂಬುದನ್ನು ಹೇಳಲಾಗಿದೆ.

(ಮಂದಿಯನು+ಆಳುವಡೆ; ಮಂದಿ=ಜನಸಮುದಾಯ/ಗುಂಪು; ಆಳುವಡೆ=ಗದ್ದುಗೆಯಲ್ಲಿ ಕುಳಿತು ಸಮಾಜದ ನಡೆನುಡಿಯಲ್ಲಿ ಕಂಡುಬರುವ ಕೆಡುಕನ್ನು ತೊಲಗಿಸಿ, ಒಳಿತನ್ನು ಕಾಪಿಡುವ ಹೊಣೆಗಾರಿಕೆ ದೊರಕಿದರೆ;

ಅಂದಣವನು+ಏರುವಡೆ; ಅಂದಣ=ಪಲ್ಲಕ್ಕಿ/ಮೇನೆ; ಏರು=ಹತ್ತು; **ಅಂದಣವನೇರುವಡೆ**=ಸಿರಿವಂತಿಕೆ ಬಂದು ಸಮಾಜದಲ್ಲಿ ಒಳ್ಳೆಯ ಅಂತಸ್ತು/ಗದ್ದುಗೆ ದೊರೆತರೆ; ಸಂಧಿಸಿ=ಜತೆಗೂಡಿ; ಭೋಗ=ಆಸ್ತಿಪಾಸ್ತಿ ಹಣಕಾಸು ಗದ್ದುಗೆಗಳು ದೊರೆತಾಗ ಉಂಟಾಗುವ ಹಿಗ್ಗು/ಆನಂದ; ಪಡೆವಡೆ=ದೊರಕಿದರೆ/ಹೊಂದಿದರೆ;

ಧರ‍್ಮ=ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನುಂಟುಮಾಡುವ ನಡೆನುಡಿಗಳು; ಕುಂದು=ಕೊರತೆ/ಹಾನಿ; ಕುಂದದೆ ಮಾಡು=ಕಯ್ ಬಿಡದೆ/ಮರೆಯದೆ/ಕೊರತೆ ಬಾರದಂತೆ ಮಾಡು).

❖

೬೦. ಮಾತಿಂದ ನಗೆನುಡಿಯು ಮಾತಿಂದ ಕೊಲೆ ಹಗೆಯು
ಮಾತಿಂದೆ ಸರ್ವರಿಗೆಯುಪಚಾರ ಲೋಕಕ್ಕೆ
ಮಾತೆ ಮಾಣಿಕವು ಸರ್ವಜ್ಞ.

ನಾವು ಆಡುವ ಮಾತುಗಳ ಬಗ್ಗೆ ಹೆಚ್ಚಿನ ಹೊಣೆಗಾರಿಕೆಯಿಂದ ಇರಬೇಕೆಂಬುದನ್ನು ಹೇಳಲಾಗಿದೆ.

(ಮಾತು+ಇಂದ; ನಗೆನುಡಿ=ನಾವಾಡುವ ಮಾತುಗಳು ಒಳ್ಳೆಯ ಉದ್ದೇಶದಿಂದ ಕೂಡಿದ್ದರೆ, ಅವು ನಮಗೆ ಮತ್ತು ಕೇಳುಗರಿಗೆ ಆನಂದ ಮತ್ತು ಉಲ್ಲಾಸವನ್ನು ನೀಡುತ್ತವೆ;

ಕೊಲೆ ಹಗೆ=ಆಡಿದ ಮಾತುಗಳ ಹಿಂದೆ ಕೆಟ್ಟ ಉದ್ದೇಶವಿದ್ದರೆ, ಅವು ನಮ್ಮ ಮತ್ತು ಇತರರ ನಡುವೆ ಮನಸ್ತಾಪ/ಮುನಿಸು/ಅಸೂಯೆ ಇಲ್ಲವೇ ಹಗೆತನವನ್ನು ಬೆಳೆಸಿ ಸಾವುನೋವುಗಳಿಗೆ ಕಾರಣವಾಗುತ್ತವೆ;

ಮಾತಿಂದೆ=ಮಾತುಗಳಿಂದಲೇ; ಸರ್ವರಿಗೆ+ಉಪಚಾರ; ಸರ್ವರಿಗೆ=ಎಲ್ಲರಿಗೂ ಅಂದರೆ ಮಾತನ್ನಾಡುವವರಿಗೆ/ಕೇಳುವವರಿಗೆ/ಸುತ್ತಮುತ್ತಲಿನವರಿಗೆ; ಉಪಚಾರ =ಒಳಿತು; ಲೋಕಕ್ಕೆ=ಮಾನವರ ಬಾಳಿನ ಎಲ್ಲಾ ಬಗೆಯ ವ್ಯವಹಾರಗಳಿಗೆ/ಜನ ಸಮುದಾಯದ ಉಳಿವು ಬೆಳವಣಿಗೆಗೆ; ಮಾತೆ=ಮಾತುಗಳೇ; ಮಾಣಿಕ=ರತ್ನ/ ಬೆಲೆಬಾಳುವ ಹರಳು/ತುಂಬಾ ಬೆಲೆಯುಳ್ಳದ್ದು).

❖

೬೧. ಮಾತು ಬಂದಲ್ಲಿ ತಾ ಸೋತು ಬರುವುದು ಲೇಸು
ಮಾತಿಂಗೆ ಮಾತ ಮಥನಿಸೆ ವಿಧಿ ಬಂದು
ಆತುಕೊಂಡಿಹುದು ಸರ್ವಜ್ಞ.

ಇತರರೊಡನೆ ಹೊಂದಾಣಿಕೆಯುಂಟಾಗದೆ ಮಾತಿಗೆ ಮಾತು ಬೆಳೆದಾಗ, ಕೋಪತಾಪಗಳಿಂದ ಕುದಿಯುತ್ತ, ಮತ್ತೆ ಮತ್ತೆ ಮಾತನ್ನು ಮುಂದುವರಿಸಿಕೊಂಡು ಹೋದರೆ, ಅದು ಹಾನಿಗೆ ಎಡೆಮಾಡಿಕೊಡುತ್ತದೆ ಎಂಬ ಎಚ್ಚರಿಕೆಯನ್ನು ನೀಡಲಾಗಿದೆ.

(ಮಾತು ಬಂದಲ್ಲಿ=ಇಬ್ಬರು/ಅನೇಕರ ನಡುವೆ ಒಂದು ಸಂಗತಿಯ ಬಗ್ಗೆ ಬೇರೆ ಬೇರೆ ನಿಲುವುಗಳು ಹೊರಹೊಮ್ಮಿ ವಾದವಿವಾದ ಶುರುವಾದಾಗ; ತಾ=ಮಾತಿನಿಂದ ಉಂಟಾಗುವ ಒಳಿತು/ಕೆಡುಕಿನ ಪರಿಣಾಮಗಳನ್ನು ಅರಿತ ವ್ಯಕ್ತಿಯು; ತಾ=ತಾನು; ಸೋತು ಬರುವುದು=ವಾದವನ್ನು ಮುಂದುವರಿಸದೆ ಹಿಂದಕ್ಕೆ ಸರಿಯುವುದು; ಲೇಸು=ಒಳ್ಳೆಯದು; ಮಾತಿಂಗೆ=ಮಾತಿಗೆ;

ಮಾತ=ಮಾತನ್ನು; ಮಥನ=ಕಡೆಯುವಿಕೆ/ತಿಕ್ಕಾಟ/ಕಡೆಗೋಲಿನಿಂದ ಮೊಸರನ್ನು ಕಡೆಯುವುದು;

ಮಾತಿಂಗೆ ಮಾತ ಮಥನಿಸೆ=ಒಂದು ಮಾತಿಗೆ ಎದುರಾಗಿ ಮತ್ತೊಂದು ಮಾತನ್ನು ಆಡತೊಡಗಿದರೆ; ವಿಧಿ=ವ್ಯಕ್ತಿಯ ಜೀವನದ ಏಳುಬೀಳುಗಳನ್ನು ದೇವರು/ಅಗೋಚರ ಶಕ್ತಿಯು ನಿರ್ಣಯಿಸುತ್ತದೆ ಎಂಬ ಜನರ ನಂಬಿಕೆ; ವಿಧಿ ಬಂದು=ಯಾವುದಾದರೊಂದು ಬಗೆಯ ಹಾನಿ/ನೋವು/ತೊಂದರೆಯು ಉಂಟಾಗಿ; ಆತುಕೊಂಡು+ಇಹುದು; ಆತುಕೊಂಡು= ಸುತ್ತಿಕೊಂಡು/ ಆವರಿಸಿಕೊಂಡು; ಇಹುದು=ಇರುವುದು).

❖

೬೨. ಮಾತ ಬಲ್ಲಾಂತಗೆ ಮಾತೊಂದು ಮಾಣಿಕವು
ಮಾತುಗಳನರಿಯದಧಮಂಗೆ ಮಾಣಿಕವು
ತೂತಾದ ಪರಿಯು ಸರ್ವಜ್ಞ.

ಮಾತನಾಡುವುದು ಒಂದು ಬಗೆಯ ಕಲೆ ಹಾಗೂ ಯಾರೊಬ್ಬರ ಮನಸ್ಸಿಗೂ ನೋವುಂಟುಮಾಡಬಾರದೆಂಬ ಎಚ್ಚರಿಕೆಯಿಂದ ಕೂಡಿರುವ ಸಾಮಾಜಿಕ ವರ್ತನೆ ಎಂಬುದನ್ನು ಹೇಳಲಾಗಿದೆ.

(ಮಾತ=ಮಾತನ್ನು; ಬಲ್ಲ+ಆತಂಗೆ; ಬಲ್ಲ=ತಿಳಿದ/ಅರಿತ; ಆತಂಗೆ=ಅವನಿಗೆ/ ಅಂತಹ ವ್ಯಕ್ತಿಗೆ; ಬಲ್ಲಾತಂಗೆ=ತಿಳಿದವನಿಗೆ/ಅರಿತವನಿಗೆ;

ಮಾತ ಬಲ್ಲಾತ=ಯಾವ ಎಡೆಯಲ್ಲಿ, ಯಾವ ಸಮಯದಲ್ಲಿ, ಯಾರೊಡನೆ, ಹೇಗೆ ಮಾತನಾಡಬೇಕು ಇಲ್ಲವೇ ಮಾತನಾಡಬಾರದು ಎಂಬ ಅರಿವು ಮತ್ತು ಎಚ್ಚರವನ್ನು ಹೊಂದಿರು ವವನು; ಮಾತು+ಒಂದು;

ಮಾಣಿಕ=ರತ್ನ/ಬೆಲೆಬಾಳುವ ಹರಳು/ತುಂಬಾ ಬೆಲೆಯುಳ್ಳ ವಸ್ತು; ಮಾತು ಗಳನು+ಅರಿಯದ+ಅಧಮಂಗೆ; ಅರಿಯದ=ತಿಳಿಯದ; ಅಧಮ=ಕೆಟ್ಟ/ನೀಚ ವ್ಯಕ್ತಿ; ತೂತು+ಆದ=ಗುಳಿಬಿದ್ದ/ಬಿರುಕುಬಿಟ್ಟ; ಪರಿ=ರೀತಿ).

❖

೬೩. ಮೀಪೊಡೆ ಪೋಪೊಡೆ ಪಾಪವೇನದು ಕೆಸರೆ
ಮೀಪೊಡೆ ಮೈಯ ಮಲ ಪೋಪುದಾ ಪಾಪ
ಲೇಪವಾಗಿಕ್ಕು ಸರ್ವಜ್ಞ.

ದೇಗುಲಗಳ ಬಳಿ ಹರಿಯುವ ತೊರೆಗಳಲ್ಲಿ ಮುಳುಗೇಳುವುದರಿಂದ ಮಯ್ಯಿಗೆ ಅಂಟಿಕೊಂಡಿರುವ ಕೊಳೆ ಹೋಗುತ್ತದೆಯೇ ಹೊರತು, ಮಾಡಿದ ಪಾಪ ಹೋಗುವುದಿಲ್ಲ. ಮಾಡಿದ ಪಾಪ ಹೋಗಬೇಕಾದರೆ ಮತ್ತೆ ಅಂತಹ ಪಾಪವನ್ನು ಮಾಡದೆ, ಒಳ್ಳೆಯ ನಡೆನುಡಿಗಳಿಂದ ಬಾಳಿದಾಗ ಮಾತ್ರ ಪಾಪ ತೊಲಗುತ್ತದೆ ಎಂಬುದನ್ನು ಹೇಳಲಾಗಿದೆ.

(ಮೀಪೊಡೆ=ಜಳಕ/ಸ್ನಾನ ಮಾಡುವುದರಿಂದ/ಮಯ್ ತೊಳೆದುಕೊಳ್ಳುವುದರಿಂದ; ಮೀಯು=ಜಳಕ/ಸ್ನಾನ; ಪೋಪೊಡೆ=ಹೋಗುವುದಾದರೆ; ಪೋ=ಹೋಗು; ಪೋಪ=ಹೋಗುವ; ಪಾಪವೇನ್+ಅದು; ಪಾಪ= ಸಹಮಾನವರಿಗೆ ಮತ್ತು ಸಮಾಜಕ್ಕೆ ಮಾಡಿದ ಮೋಸ/ಕೇಡು;

ಕೆಸರು=ನೀರಿನಿಂದ ಮುದ್ದೆಯಾಗಿರುವ ಮಣ್ಣು; ಪಾಪವೇನದು ಕೆಸರೆ= ಪಾಪವೆಂಬುದು ನೀರಿನಿಂದ ತೊಳೆದ ಮಾತ್ರಕ್ಕೆ ಹೋಗುವ ಕೆಸರಲ್ಲ; ಮೈ=ದೇಹ/ಶರೀರ; ಮೈಯ=ದೇಹದ/ಶರೀರದ/ಮಯ್ಯಿನ; ಮಲ=ಕೊಳೆ; ಪೋಪುದು+ಆ; ಪೋಪುದು=ಹೋಗುವುದು; ಆ ಪಾಪ=ಜೀವನದಲ್ಲಿ ಮಾಡಿರುವ ಪಾಪ; ಲೇಪವು+ಆಗಿ+ ಇಕ್ಕು; ಲೇಪ= ಬಳಿದುಕೊಂಡು; ಇಕ್ಕು=ಇರುವುದು).

❖

೬೪. **ಮುದ್ದೆಗಳು ಇಲ್ಲದೆ ನಿದ್ರೆಗಳು ಬಾರವು**
ಮುದ್ದು ಮಾತುಗಳು ಸೊಗಸವು ಒಡಲಿಗೆ
ಮುದ್ದೆ ತಪ್ಪಿದರೆ ಸರ್ವಜ್ಞ.

ಹಸಿವನ್ನು ನೀಗಿಸಿ ಜೀವದ ಉಳಿವಿಗೆ ಕಾರಣವಾಗುವ ಕೂಳಿನ ಮಹಿಮೆಯನ್ನು ಕೊಂಡಾಡಲಾಗಿದೆ.

(ಮುದ್ದೆ=ರಾಗಿ/ಜೋಳ/ನವಣೆ ಇಲ್ಲವೇ ಇನ್ನಿತರ ದವಸಧಾನ್ಯಗಳ ಹಿಟ್ಟನ್ನು ನೀರಿನಲ್ಲಿ ಹದವಾಗಿ ಬೇಯಿಸಿ ಓನಿಸಿ ಕಟ್ಟಿರುವ ಉಂಡೆ; ನಿದ್ರೆಗಳು ಬಾರವು=ನೆಮ್ಮದಿಯಿಂದ ಮಲಗಲು ಆಗುವುದಿಲ್ಲ/ಕಣ್ಣಿಗೆ ನಿದ್ದೆ ಹತ್ತುವುದಿಲ್ಲ; ಬಾರವು=ಬರುವುದಿಲ್ಲ;

ಮುದ್ದು=ಒಲವು/ನಲಿವು/ಚೆಲುವು; ಸೊಗಸು=ಇಂಪು/ಹಿತ/ಹಿಗ್ಗು/ಮುದ; **ಮುದ್ದುಮಾತುಗಳು ಸೊಗಸವು**=ಇತರರು ಆಡುವ ಒಲವು ನಲಿವಿನ ಮಾತುಗಳು ಯಾವುದೇ ಬಗೆಯ ಆನಂದವನ್ನು ನೀಡುವುದಿಲ್ಲ; ಒಡಲು=ಹೊಟ್ಟೆ/ದೇಹ/ಮಯ್; ತಪ್ಪು=ದೊರೆಯದಿರು/ಸಿಕ್ಕದಿರು; ತಪ್ಪಿದರೆ=ದೊರೆಯದಿದ್ದರೆ/ಸಿಕ್ಕದಿದ್ದರೆ).

❖

೬೫. ಮೂರ್ಖಂಗೆ ಬುದ್ಧಿಯನು ನೂರ್ಕಾಲ ಹೇಳಿದರೆ
ಗೋರ್ಕಲ್ಲ ಮೇಲೆ ಮಳೆಗರೆದರಾ ಕಲ್ಲು
ನೀರ್ಕೊಳ್ಳಬಹುದೆ ಸರ್ವಜ್ಞ.

ಅರಿವನ್ನು ಹೊಂದಲು ಮನಸ್ಸಿಲ್ಲದ/ಪ್ರಯತ್ನಿಸದ ವ್ಯಕ್ತಿಗೆ ತಿಳುವಳಿಕೆಯನ್ನು ಹೇಳುವುದರಿಂದ ಯಾವ ಪ್ರಯೋಜನವೂ ಇಲ್ಲವೆಂಬುದನ್ನು ಹೇಳಲಾಗಿದೆ.

(ಮೂರ್ಖ=ತಿಳಿಗೇಡಿ/ಸರಿ–ತಪ್ಪುಗಳ ಅರಿವಿಲ್ಲದವನು; ಬುದ್ಧಿ= ತಿಳುವಳಿಕೆ/ಅರಿವು; ನೂರ್+ಕಾಲ; ಕಾಲ=ಸಮಯ; ನೂರ್ಕಾಲ =ಅನೇಕ ಬಾರಿ/ಹಲವು ಸಲ; ಗೋರ್ಕಲ್ಲು=ಗಡುಸಾದ/ಗಟ್ಟಿಯಾದ ಕಲ್ಲು; ಮಳೆ+ಕರೆದರೆ+ಆ; ಕರೆ=ಸುರಿ/ಬೀಳು;

ಮಳೆಗರೆದರೆ=ಮಳೆಯ ನೀರು ಬಿದ್ದರೆ/ಸುರಿದರೆ; ನೀರ್+ಕೊಳ್ಳಬಹುದೆ; ಕೊಳ್=ಪಡೆಯುವುದು/ಹೊಂದುವುದು; ಬಹುದು=ಉಂಟಾಗು/ಒದಗು/ಸೇರು/ಕೂಡು;

ಆ ಕಲ್ಲು ನೀರ್ಕೊಳ್ಳಬಹುದೆ=ತನ್ನ ಮೇಲೆ ಸುರಿದ ಮಳೆನೀರನ್ನು ಹೀರಿಕೊಳ್ಳದ ಕಲ್ಲಿನಂತೆ ತಿಳಿಗೇಡಿಯಾದವನು ಇತರರು ಹೇಳುವ ತಿಳುವಳಿಕೆಯ ಮಾತನ್ನು ಅರಿತುಕೊಳ್ಳುವುದಿಲ್ಲ ಎಂಬ ತಿರುಳಿನಲ್ಲಿ ಈ ರೂಪಕವು ಬಳಕೆಯಾಗಿದೆ).

❖

೬೬. ಮೆಲ್ಲನೇ ಹರಿವ ನೀರು ಕಲ್ಲಭೇದಿಸುತಿಕ್ಕು
ಸೊಲ್ಲರಿತು ನುಡಿವರೊಳುನುಡಿಯು ಲೋಕವ
ಗೆಲ್ಲದೆಂತಿಕ್ಕು ಸರ್ವಜ್ಞ.

ಕೋಪತಾಪವಿಲ್ಲದೆ/ಆವೇಶವಿಲ್ಲದೆ ಒಳ್ಳೆಯ ಉದ್ದೇಶದಿಂದ ಆಡುವ ಮಾತು, ಕೇಳುವವರ ಮನಸ್ಸಿಗೆ ಅರಿವನ್ನು ನೀಡಿ ಒಳಿತಿನ ಕಡೆಗೆ ಒಲಿಯುವಂತೆ ಮಾಡುತ್ತದೆ ಎಂಬುದನ್ನು ಹೇಳಲಾಗಿದೆ.

(ಮೆಲ್ಲನೇ ಹರಿವ ನೀರು=ಯಾವುದೇ ಎಡೆಯಲ್ಲಿ ಯಾವಾಗಲೂ ನೀರು ಜೋರಿಲ್ಲದೆ/ವೇಗವಿಲ್ಲದೆ ಹರಿಯುತ್ತಿರುವುದು; ಕಲ್ಲ ಭೇದಿಸುತ+ಇಕ್ಕು; ಕಲ್ಲ=ಕಲ್ಲನ್ನು/ಬಂಡೆಯನ್ನು; ಭೇದಿಸು=ಅಲುಗಿಸು/ಸಡಿಲಗೊಳಿಸು/ಪುಸಿಗೊಳಿಸು; ಕಲ್ಲ ಭೇದಿಸು =ಹರಿಯುವ ನೀರಿಗೆ ಅಡ್ಡಲಾಗಿರುವ ಬಂಡೆಯ ಸುತ್ತಲಿನ ಮಣ್ಣನ್ನು ಕೊರೆದು ಪುಸಿಗೊಳಿಸಿ ಬಂಡೆಯನ್ನೇ ಅಲುಗುವಂತೆ ಮಾಡುವುದು; ಇಕ್ಕು=ಇರುವುದು;

ಸೊಲ್ಲ+ಅರಿತು; ಸೊಲ್ಲು=ಮಾತು/ನುಡಿ; ಅರಿತು=ತಿಳಿದು; ಸೊಲ್ಲರಿತು= ಯಾವ ಬಗೆಯ ಮಾತನ್ನು ಆಡಬೇಕು/ಆಡಬಾರದು ಎಂಬ ಎಚ್ಚರಿಕೆಯಿಂದ/ ಹೊಣೆಗಾರಿಕೆಯಿಂದ; ನುಡಿವರ+ಒಳುನುಡಿಯು; ನುಡಿವರ=ಮಾತನಾಡು ವವರ; ಒಳುನುಡಿ=ಒಳ್ಳೆಯ ಮಾತು/ಕೇಳಿದವರ ಮನದಲ್ಲಿ ಅರಿವು ಮತ್ತು ಆನಂದವನ್ನು ಮೂಡಿಸುವಂತಹ ಮಾತುಗಳು; ಲೋಕ=ಜಗತ್ತು/ಸಮಾಜ/ ಸಮುದಾಯ/ಜನಮನ; ಗೆಲ್ಲದೆ+ಎಂತು+ಇಕ್ಕು; ಎಂತು=ಯಾವ ರೀತಿ/ಬಗೆ; ಎಂತಿಕ್ಕು=ಹೇಗೆ ತಾನೇ ಇರುವುದು; ಗೆಲ್ಲು=ಜಯವನ್ನು/ಮೆಚ್ಚುಗೆಯನ್ನು ಪಡೆ; ಲೋಕವ ಗೆಲ್ಲು=ಒಳಿತನ್ನುಂಟುಮಾಡುವ ಮಾತು ಎಲ್ಲರ ಮನಸ್ಸಿಗೂ ಮುದವನ್ನು ನೀಡಿ ಮೆಚ್ಚುಗೆಯನ್ನು ಪಡೆಯುತ್ತದೆ).

❖

೬೭. ಯಾತರ ಹೂವಾದರು ನಾತರೆ ಸಾಲದೆ
ಜಾತಿ ವಿಜಾತಿಯೆನಬೇಡ ಶಿವನೊಲಿ
ದಾತನೇ ಜಾತ ಸರ್ವಜ್ಞ.

ಮೇಲು-ಕೀಳೆಂಬ ಜಾತಿ ಮೆಟ್ಟಲುಗಳಿಂದ ಕೂಡಿರುವ ಸಮಾಜದಲ್ಲಿ "ಜಾತಿ ಎನ್ನುವುದು ಮಾನವರೇ ಕಟ್ಟಿಕೊಂಡಿರುವ ಒಂದು ಸಾಮಾಜಿಕ ಒಕ್ಕೂಟ. ಆದುದರಿಂದ ಜಾತಿ ಎಂಬುದು ಮಾನವನ ದೇಹದಲ್ಲಿಲ್ಲ; ಮನದಲ್ಲಿ ನೆಲೆಸಿದೆ. ಜಾತಿಯ ಕಾರಣಕ್ಕಾಗಿ ಯಾವುದೇ ವ್ಯಕ್ತಿಯನ್ನು ಮೆಚ್ಚಿಕೊಳ್ಳಬಾರದು ಇಲ್ಲವೆ ಕಡೆಗಣಿಸಬಾರದು. ವ್ಯಕ್ತಿಯಲ್ಲಿರುವ ಒಳ್ಳೆಯ ನಡೆನುಡಿಗಳನ್ನು ಮಾತ್ರ ಗುರುತಿಸಬೇಕು" ಎಂಬ ಅರಿವನ್ನು ಮೂಡಿಸಲು ರೂಪಕವೊಂದರ ಮೂಲಕ ಹೇಳಲಾಗಿದೆ. ಒಂದಲ್ಲ ಒಂದು ಬಗೆಯ ಕಂಪಿನಿಂದ ಕೂಡಿರುವ ಹೂವು ಇಲ್ಲಿ ರೂಪಕವಾಗಿದೆ.

(ಯಾತರ=ಯಾವುದೇ ಬಗೆಯ; ಹೂವು+ಆದರು; ನಾತ=ಕಂಪು/ವಾಸನೆ/ ಪರಿಮಳ; ನಾತರೆ=ಕಂಪಿನಿಂದ ಕೂಡಿದ್ದರೆ; ಸಾಲದೆ= ಸಾಕಲ್ಲವೇ;

ಯಾತರ ಹೂವಾದರೂ ನಾತರೆ ಸಾಲದೆ=ಯಾವುದೇ ಹೂವಿನ ಆಕಾರ/ ಬಣ್ಣಗಳು ಹೇಗಿದ್ದರೇನು? ಒಟ್ಟಿನಲ್ಲಿ ಆ ಹೂವಿನಿಂದ ಒಳ್ಳೆಯ ಕಂಪು/ಪರಿಮಳ/ ಸುವಾಸನೆ ಹೊರಹೊಮ್ಮುತ್ತಿರಬೇಕು. ಅಂತೆಯೇ ಮಾನವನ ಆಕಾರ/ಬಣ್ಣ/ ದೇಹದ ಕಸುವು ಹೇಗಿದ್ದರೇನು ಅವನು ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ವ್ಯಕ್ತಿಯಾಗಿದ್ದರೆ ಸಾಕು ಎಂಬ ತಿರುಳಿನಲ್ಲಿ ಬಳಕೆಯಾಗಿರುವ ರೂಪಕ;

ಜಾತಿ ವಿಜಾತಿಯೆನಬೇಡ=ಮೇಲುಜಾತಿ/ಕೀಳುಜಾತಿ ಎಂಬ ತಾರತಮ್ಯವನ್ನು ಮಾಡಬೇಡ; ಶಿವನ+ಒಲಿದ+ಆತನೆ=ಒಳ್ಳೆಯ ನಡೆನುಡಿಗಳನ್ನೇ ಶಿವನೆಂದು ನಂಬಿರುವ ವ್ಯಕಿಯೇ; ಜಾತ=ಹುಟ್ಟಿದವನು/ ಒಳ್ಳೆಯ ವ್ಯಕ್ತಿ).

❖

೬೮. ರಸಿಕರಾಡುವ ಮಾತು ಶಶಿ ಉದಯವಾದಂತೆ
ರಸಿಕರಲ್ಲದವರ ಬಿರುನುಡಿಯು ಕಿವಿಯೊಳು ಕೂ
ರ್ದಸಿಯ ಬಲಿದಂತೆ ಸರ್ವಜ್ಞ.

ಕೇಳುಗರ ಮನದಲ್ಲಿ ಅರಿವು ಹಾಗೂ ಆನಂದವನ್ನು ಮೂಡುವಂತೆ ಇಲ್ಲವೇ ಆತಂಕ ಹಾಗೂ ಕಳವಳವನ್ನು ಉಂಟುಮಾಡಿ ನೋಯಿಸುವಂತೆ ಆಡುವ ಮಾತುಗಳಿಂದ ಉಂಟಾಗುವ ಪರಿಣಾಮಗಳನ್ನು ಹೇಳಲಾಗಿದೆ.

(ರಸಿಕರು+ಆಡುವ; ರಸಿಕ=ಒಳಿತು ಕೆಡುಕುಗಳನ್ನು ಅರಿತವನು/ ಯಾವುದೇ ಸಂಗತಿಗಳಲ್ಲಿ ಒಳ್ಳೆಯದನ್ನು ಮತ್ತು ಚೆಲುವನ್ನು ಗುರುತಿಸಿ ತಾನೂ ಸವಿದು ಇತರರಿಗೂ ಹೇಳುವವನು; ಶಶಿ=ಚಂದ್ರ; **ಉದಯವು+ಆದಂತೆ**= ಬೆಳುದಿಂಗಳನ್ನು ಚೆಲ್ಲುತ್ತಾ ಮೂಡಿಬರುವಂತೆ;

ರಸಿಕರು+ಅಲ್ಲದವರ; ರಸಿಕರಲ್ಲದವರು=ಒಳ್ಳೆಯದನ್ನು/ಚೆಲುವಾದುದನ್ನು ಮೆಚ್ಚದೆ, ಎಲ್ಲವನ್ನೂ/ಎಲ್ಲರನ್ನೂ ತೆಗಳುವವರು; ಬಿರು=ಒರಟು/ಗಡುಸು; ಬಿರುನುಡಿ=ಕೇಳುಗರ ಮನವನ್ನು ನೋಯಿಸುವಂತಹ ಮಾತುಗಳು; ಕಿವಿ+ಒಳು; ಕಿವಿಯೊಳು=ಕಿವಿಯಲ್ಲಿ/ಕಿವಿಯ ಒಳಕ್ಕೆ ಕೂರ್ದಸಿ=ಕೂರ್+ದಸಿ;

ಕೂರ್=ಹರಿತವಾದ/ಮೊನಚಾದ/ಚೂಪಾದ; ದಸಿ=ಶೂಲ/ಚೂಪಾದ ತುದಿಯುಳ್ಳ ಹತಾರ; ಬಲಿ=ಚುಚ್ಚು/ನಾಟು; ಬಲಿದ+ಅಂತೆ=ನಾಟಿಕೊಂಡ ಹಾಗೆ).

❖

೬೯. ಲಿಂಗಕ್ಕೆ ತೋರಿಸುತ ನುಂಗುವಾತನೆ ಕೇಳು
ಲಿಂಗ ಉಂಬುವುದೆ ಪೊಡಮಡುತೆಲೊ ಪಾಪಿ
ಜಂಗಮಕೆ ನೀಡು ಸರ್ವಜ್ಞ.

ಜಡರೂಪಿ ಲಿಂಗದ ಮುಂದೆ ಹಲವು ಬಗೆಯ ಉಣಿಸುಗಳನ್ನು ಕೆಲವು ಗಳಿಗೆ ಇಟ್ಟು, ಅನಂತರ ತಾನೇ ಕಬಳಿಸುವುದರ ಬದಲು, ಹಸಿದು ಬರುವ ಜೀವರೂಪಿ ಜಂಗಮನಿಗೆ ಉಣಿಸನ್ನು ನೀಡಬೇಕೆಂಬುದನ್ನು ಹೇಳಲಾಗಿದೆ.

(ಲಿಂಗ=ದೇವರೆಂದು ನಂಬಿರುವ ಶಿವನ ಸಂಕೇತವಾದ ವಿಗ್ರಹ; ಲಿಂಗಕ್ಕೆ ತೋರಿಸುತ=ಲಿಂಗದ ಮುಂದೆ ತಿನಸು ಉಣಿಸುಗಳನ್ನು ಎಡೆಯಿಟ್ಟು; ನುಂಗುವ+ಆತನೆ; ನುಂಗು=ತಿನ್ನು/ಕಬಳಿಸು; ನುಂಗುವಾತ=ಕಬಳಿಸುವವನು/ತಿನ್ನುವವನು; ಉಂಬುವುದೆ= ಉಣ್ಣುತ್ತದೆಯೇ/ತಿನ್ನುತ್ತದೆಯೇ;

ಪೊಡಮಡುತ+ಎಲೊ; ಪೊಡಮಡು=ಅಡ್ಡಬೀಳು/ನಮಸ್ಕರಿಸು; ಎಲೊ= ವ್ಯಕ್ತಿಯನ್ನು ಉದ್ದೇಶಿಸಿ ನುಡಿಯುವಾಗ ಬಳಸುವ ಪದ; ಪಾಪಿ=ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುವವನು/ಕೆಟ್ಟಕೆಲಸಗಳಲ್ಲಿ ತೊಡಗಿದವನು; ಜಂಗಮ=ಶಿವನನ್ನು ನಂಬಿರುವ ಮತ್ತು ಕಾಯಕದ ಬೆಲೆಯನ್ನು ಅರಿತಿರುವ ವ್ಯಕ್ತಿ; ನೀಡು=ಕೊಡು/ಉಣಬಡಿಸು).

❖

೭೦. ವಿದ್ಯೆ ಕಲಿಸದ ತಂದೆ ಬುದ್ಧಿ ಹೇಳದ ಗುರುವು
ಬಿದ್ದಿರಲು ಬಂದು ನೋಡದ ತಾಯಿಯು
ಶುದ್ಧವೈರಿಗಳು ಸರ್ವಜ್ಞ.

ಹುಟ್ಟಿಗೆ ಕಾರಣವಾಗುವ ತಾಯಿತಂದೆಗಳು ಮತ್ತು ಅರಿವನ್ನು ಮೂಡಿಸುವ ಗುರುಗಳು ತಮ್ಮ ಹೊಣೆಗಾರಿಕೆಯನ್ನು ಮರೆತಾಗ ವ್ಯಕ್ತಿಯ ಪಾಲಿಗೆ ಏನಾಗುತ್ತಾರೆ ಎಂಬುದನ್ನು ಹೇಳಲಾಗಿದೆ.

(ವಿದ್ಯೆ=ಯಾವುದೇ ಒಂದು ಸಂಗತಿಯಲ್ಲಿ ಒಳ್ಳೆಯ ತಿಳುವಳಿಕೆ ಮತ್ತು ಚೆನ್ನಾಗಿ ಕೆಲಸ ಮಾಡುವ ಕುಶಲತೆ; ಕಲಿಸು=ತಿಳಿಯುವಂತೆ/ಅರಿಯುವಂತೆ ತರಬೇತಿಯನ್ನು ನೀಡು;

ಬುದ್ಧಿ=ಅರಿವು/ವಿವೇಕ/ಯಾವುದು ಒಳಿತು–ಯಾವುದು ಕೆಡುಕು ಎಂಬುದನ್ನು ಗುರುತಿಸಿಕೊಂಡು ಒಳಿತಿನ ಕಡೆಗೆ ಅಡಿಯಿಡ ಬೇಕೆಂಬ ಎಚ್ಚರ; ಬಿದ್ದು+ಇರಲು; ಬಿದ್ದಿರಲು=ರೋಗರುಜಿನಗಳಿಗೆ ಗುರಿಯಾಗಿ ನರಳುತ್ತಿರಲು; ಶುದ್ಧ=ನಿಜ ವಾಗಿಯೂ/ಎಲ್ಲಾ ರೀತಿಯಿಂದಲೂ; ವೈರಿ=ಹಗೆ/ಶತ್ರು).

❖

೭೧. ಸಜ್ಜನರ ಸಂಗ ತಾ ಹೆಜ್ಜೇನ ಕೊಡನಂತೆ
ದುರ್ಜನರ ಕೂಟವಣುಮಾತ್ರ ಬಚ್ಚಲ
ರೊಜ್ಜಿನಂತಿಹುದು ಸರ್ವಜ್ಞ.

ಒಳ್ಳೆಯವರ ಇಲ್ಲವೇ ಕೆಟ್ಟವರ ಒಡನಾಟದಿಂದ ಉಂಟಾಗುವ ಪರಿಣಾಮಗಳನ್ನು ಹೇಳಲಾಗಿದೆ.

(ಸಜ್ಜನ=ಒಳ್ಳೆಯ ನಡೆನುಡಿಯುಳ್ಳವನು; ಸಂಗ=ಗೆಳೆತನ/ಒಡನಾಟ/ವ್ಯವಹಾರ; ತಾ=ಅದು; ಹೆಜ್ಜೇನು=ಹಿರಿದಾದ/ದೊಡ್ಡದಾದ ಜೇನುಹುಳು; ಕೊಡನ+ಅಂತೆ; ಕೊಡ=ಜೇನಿನ ಗೂಡು/ಗಡಿಗೆ/ಬಿಂದಿಗೆ; ಅಂತೆ=ಹಾಗೇ; ಹೆಜ್ಜೇನ ಕೊಡ= ದೊಡ್ಡಗಾತ್ರದ ಜೇನಿನ ಹುಟ್ಟು/ಗೂಡು/ಜೇನು ತುಂಬಿದ ಗಡಿಗೆ;

ಸಜ್ಜನರ ಸಂಗ ತಾ ಹೆಜ್ಜೇನ ಕೊಡನಂತೆ=ಸಿಹಿಯಾದ ಜೇನನ್ನು ಸವಿದು ನಲಿಯುವಂತೆ ಒಳ್ಳೆಯವರ ಜತೆಯಲ್ಲಿ ಮಾಡುವ ಗೆಳೆತನ/ವ್ಯವಹಾರದಿಂದ ಒಲವು ನಲಿವನ್ನು ಕಾಣುತ್ತೇವೆ/ಪಡೆಯುತ್ತೇವೆ; ದುರ್ಜನ=ಕೆಟ್ಟ ನಡೆನುಡಿಯುಳ್ಳವನು; ಕೂಟವು+ಅಣು+ಮಾತ್ರ; ಕೂಟ=ಗೆಳೆತನ/ಒಡನಾಟ/ನೆಂಟು; ಅಣು=ಸಣ್ಣ ಕಣ/ತುಸು/ಕಿಂಚಿತ್ತು; ಅಣು ಮಾತ್ರ=ತುಸುವಾಗಿದ್ದರೂ;

ಬಚ್ಚಲು=ಪಾತ್ರೆಪಡಗಗಳನ್ನು ಮತ್ತು ಮಯ್ಯನ್ನು ತೊಳೆದ ನೀರು ಹರಿದು ಹೋಗಲು ಮಾಡಿರುವ ಚರಂಡಿ/ಮೋರಿ; ರೊಜ್ಜಿನ+ಅಂತೆ+ಇಹುದು; ರೊಜ್ಜು= ಕೆಸರು/ರಾಡಿ/ಬಗ್ಗಡ/ಕೊಳಕಾದ ವಸ್ತುಗಳಿಂದ ತುಂಬಿದ ನೀರು; ಇಹುದು= ಇರುವುದು;

ದುರ್ಜನರ ಕೂಟವಣುಮಾತ್ರ ಬಚ್ಚಲ ರೊಜ್ಜಿನಂತಿಹುದು=ಬಚ್ಚಲಲ್ಲಿ ಹರಿಯುತ್ತಿರುವ ನೀರು ಕೊಳಕಾಗಿ ಕೆಟ್ಟವಾಸನೆಯಿಂದ ಕೂಡಿ ವಾಕರಿಕೆಯನ್ನು ತರುವಂತೆ ಕೆಟ್ಟ ನಡೆನುಡಿಯುಳ್ಳವರ ಒಡನಾಟದಿಂದ ಸಂಕಟಕ್ಕೆ/ಅಪಮಾನಕ್ಕೆ ಒಳಗಾಗಿ ನರಳುತ್ತೇವೆ.)

❖

೭೨. ಸತ್ತು ಹೋದರೆ ನಿನಗದೆತ್ತಣದು ಮೋಕ್ಷವೈ
ಸತ್ತು ಹೋಗದತಿಜೀವವಿರಲು ಮೋಕ್ಷದ
ಗೊತ್ತು ತಿಳಿಯೆಂದ ಸರ್ವಜ್ಞ.

ಜೀವವಿರುವ ತನಕ ಒಲವು ನಲಿವಿನಿಂದ ಕೂಡಿ ಸಮಾಜಕ್ಕೆ ಒಳಿತನ್ನು ಮಾಡುವ ದುಡಿಮೆಯಿಂದ ಬದುಕನ್ನು ನಡೆಸುವುದೇ ನಿಜವಾದ ಮುಕ್ತಿ ಎಂಬುದನ್ನು ಹೇಳಲಾಗಿದೆ.

(ಸತ್ತು ಹೋದರೆ=ಯಾವುದೇ ವ್ಯಕ್ತಿಯು ತಾನಾಗಿಯೇ ಸಾವನ್ನು ತಂದು ಕೊಂಡರೆ; ನಿನಗೆ+ಅದು+ಎತ್ತಣದು; ಎತ್ತಣ=ಯಾವ ಕಡೆ/ಎಡೆ/ದಿಕ್ಕು; ಎತ್ತಣದು=ಯಾವ ರೀತಿಯಲ್ಲಿ; ಮೋಕ್ಷವೈ=ಮುಕ್ತಿಯು ದೊರೆಯುತ್ತದೆ; ಮೋಕ್ಷ=ಹುಟ್ಟು ಬದುಕು ಸಾವುಗಳ ಸರಪಣಿಯಿಂದ ಜೀವವು ಬಿಡುಗಡೆಯನ್ನು/ ಮುಕ್ತಿಯನ್ನು ಹೊಂದುತ್ತದೆ ಎಂಬ ನಂಬಿಕೆ;

ಸತ್ತು ಹೋಗದೆ+ಅತಿ ಜೀವವು+ ಇರಲು; ಸತ್ತುಹೋಗದೆ=ನೀನಾಗಿಯೇ ಸಾವನ್ನು ತಂದುಕೊಳ್ಳದೆ; ಅತಿ=ದೊಡ್ಡದಾದ/ಹಿರಿದಾದ; ಜೀವವು+ಇರಲು= ಜೀವವು ಇರುವಾಗ; ಗೊತ್ತು= ನೆಲೆ/ಜಾಗ;

ಮೋಕ್ಷದ ಗೊತ್ತು ತಿಳಿ=ಮುಕ್ತಿಯ ನೆಲೆಯಿರುವುದು ಸಾವಿನಲ್ಲಲ್ಲ, ಬದುಕಿನ ಕ್ರಿಯಾಶೀಲತೆಯಲ್ಲಿ ಎಂಬುದನ್ನು ಮನದಟ್ಟು ಮಾಡಿಕೊಳ್ಳುವುದು; ತಿಳಿ+ಎಂದ; ತಿಳಿ=ಅರಿತುಕೊಳ್ಳುವುದು).

❖

೭೩. ಸತ್ಯರ ನಡೆ ತೀರ್ಥ ಮತ್ತೆ ಜಂಗಮ ತೀರ್ಥ
ಉತ್ತಮರ ಸಂಗವದು ತೀರ್ಥ ಹರಿವ ನೀ
ರೆತ್ತಣ ತೀರ್ಥ ಸರ್ವಜ್ಞ.

ದೇಗುಲಗಳ ಬಳಿ ಹರಿಯುತ್ತಿರುವ ತೊರೆಯ ನೀರು ಇಲ್ಲವೇ ಪೂಜಾರಿಯು ಕೊಡುವ ನೀರನ್ನು ಪವಿತ್ರವೆಂದು ನಂಬಿರುವ ಜನರಿಗೆ, ಯಾವುದು ಪವಿತ್ರವೆಂಬುದನ್ನು ಹೇಳಲಾಗಿದೆ.

(ಸತ್ಯ=ನಿಜ/ದಿಟ/ವಾಸ್ತವ; ಸತ್ಯರು=ಸಹ ಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನುಂಟುಮಾಡುವ ವ್ಯಕ್ತಿಗಳು; ನಡೆ=ವರ್ತನೆ/ನಡವಳಿಕೆ; ಸತ್ಯರ ನಡೆ= ಸತ್ಯವಂತರು ತಮ್ಮ ಜೀವನದಲ್ಲಿ ಆಡಿದ ನುಡಿ ಮತ್ತು ಮಾಡಿದ ಕೆಲಸಗಳು; ತೀರ್ಥ=ಪವಿತ್ರವಾದುದು/ಉತ್ತಮವಾದುದು/ಒಳ್ಳೆಯದು;

ತೀರ್ಥ=ದೇವಾಲಯಗಳಲ್ಲಿ ದೇವರ ಪೂಜೆಯ ನಂತರ ನೀಡುವ ನೀರು. ಇದನ್ನು ದೇವರಲ್ಲಿ ಒಲವು ಮತ್ತು ನಂಬಿಕೆಯುಳ್ಳ ವ್ಯಕ್ತಿಗಳು ಪವಿತ್ರವೆಂದು ನಂಬಿರುತ್ತಾರೆ; ಮತ್ತೆ=ಬಳಿಕ/ನಂತರ/ಆಮೇಲೆ; ಜಂಗಮ=ಒಳ್ಳೆಯ ನಡೆನುಡಿ ಗಳನ್ನೇ ಶಿವನನ್ನು ನಂಬಿರುವ ಮತ್ತು ಕಾಯಕದ ಬೆಲೆಯನ್ನು ಅರಿತಿರುವ ವ್ಯಕ್ತಿ; ಸಂಗವು+ಅದು; ಸಂಗ=ಜತೆಯಲ್ಲಿ ವ್ಯವಹರಿಸುವುದು; ನೀರು+ಎತ್ತಣ; ಎತ್ತಣ=ಯಾವ ರೀತಿಯಲ್ಲಿ/ಯಾವ ಬಗೆಯಲ್ಲಿ).

❖

೭೪. ಸತ್ಯರು ಹುಸಿದಡೆ ಒತ್ತಿ ಬಂದಡೆ ಶರಧಿ
ಉತ್ತಮರು ತಪ್ಪಿ ನಡೆದಡೆ ಲೋಕವಿ
ನ್ನೆತ್ತ ಸಾರುವುದು ಸರ್ವಜ್ಞ.

ಸಮಾಜದ ಒಳಿತಿಗಾಗಿ ಹೊಣೆಗಾರಿಕೆಯಿಂದ ನಡೆದುಕೊಳ್ಳಬೇಕಾದ ವ್ಯಕ್ತಿಗಳೇ ಕೆಟ್ಟ ನಡೆನುಡಿಗಳಿಂದ ವರ್ತಿಸತೊಡಗಿದಾಗ, ಅಂತಹ ಸಮಾಜಕ್ಕೆ ಕೇಡು ಕಟ್ಟಿಟ್ಟ ಬುತ್ತಿ ಎಂಬುದನ್ನು ಹೇಳಲಾಗಿದೆ.

(ಸತ್ಯರು=ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ವ್ಯಕ್ತಿಗಳು/ ಸತ್ಯವಂತರು; ಹುಸಿದಡೆ=ಸುಳ್ಳನ್ನು ಹೇಳಿದರೆ; ಹುಸಿ=ಸುಳ್ಳು; ಒತ್ತು=ಆಕ್ರಮಿಸು/ ಮುನ್ನುಗ್ಗಿ ಬರು/ತಳ್ಳು; ಬಂದಡೆ=ಬಂದರೆ; ಒತ್ತಿ ಬಂದಡೆ=ದಡವನ್ನೇ ಕೊಚ್ಚುವಂತೆ ಅಲೆಗಳು ಉಕ್ಕೆದ್ದು ಅಪ್ಪಳಿಸಿದರೆ;

ಶರಧಿ=ಸಮುದ್ರ/ಕಡಲು/ಸಾಗರ; ಉತ್ತಮರು=ಒಳ್ಳೆಯ ನಡೆನುಡಿಯುಳ್ಳವರು; ತಪ್ಪಿ ನಡೆದಡೆ= ನೀತಿನಿಯಮಗಳನ್ನು ಕಡೆಗಣಿಸಿ ನಡೆದುಕೊಂಡರೆ; ಲೋಕವು+ ಇನ್ನು+ಎತ್ತ; ಲೋಕ=ಜಗತ್ತಿನ ವ್ಯವಹಾರ/ಸಮಾಜದ ಬದುಕು; ಎತ್ತ=ಯಾವ ಕಡೆಗೆ; ಸಾರುವುದು= ಹೋಗುವುದು).

❖

೭೫. ಸತ್ಯವೆಂಬುದು ತಾನು ಹಿತ್ತಲದ ಗಿಡ ನೋಡ
ಮತ್ತೆಲ್ಲಿ ನೋಡಿ ಅರಸದಲೆ ತಾನಿರ್ದ
ಹತ್ತಿರಲೇ ನೋಡ ಸರ್ವಜ್ಞ.

ತನ್ನ ಮನೆಯಲ್ಲಿಯೇ/ತನ್ನ ನೆರೆಹೊರೆಯಲ್ಲಿಯೇ ಹಗಲಿರುಳು ದುಡಿಯುತ್ತಾ, ಇತರರ ಒಳಿತಿಗಾಗಿಯೇ ತಮ್ಮ ಬದುಕನ್ನೇ ಮುಡಿಪಾಗಿಟ್ಟಿರುವ ವ್ಯಕ್ತಿಗಳ ಒಳ್ಳೆಯ ನಡೆನುಡಿಗಳಿಂದಲೇ ಸತ್ಯದ ಸಂಗತಿಗಳನ್ನು ಅರಿತುಕೊಳ್ಳಬೇಕೆಂದು ಹೇಳಲಾಗಿದೆ.

(ಸತ್ಯವು+ಎಂಬುದು; ಸತ್ಯ=ನಿಜ/ದಿಟ ವಾಸ್ತವ; ತಾನು=ಅದು; ಹಿತ್ತಲು=ಮನೆಯ ಹಿಂದಿನ ಜಾಗ; ಹಿತ್ತಲದ ಗಿಡ=ಇದು ಒಂದು ನುಡಿಗಟ್ಟು. ನಮ್ಮ ಸುತ್ತಮುತ್ತಣ ಎಡೆಯಲ್ಲಿಯೇ ಕಾಣಬಹುದಾದ ವ್ಯಕ್ತಿಗಳು ಮತ್ತು ಸಂಗತಿಗಳು ಎಂಬ ತಿರುಳಿನಲ್ಲಿ ಬಳಕೆಯಾಗುತ್ತದೆ; ಮತ್ತೆ+ಎಲ್ಲಿ=ಬೇರೆ ಕಡೆಗಳಲ್ಲಿ; ಅರಸದಲೆ= ಹುಡುಕದೆಯೆ; ಅರಸು=ಹುಡುಕು/ತಡಕಾಡು; ತಾನು+ಇರ್ದ=ತಾನು ಇರುವ; ಹತ್ತಿರ=ಸಮೀಪ/ಬಳಿ; ಹತ್ತಿರಲೇ=ಅಕ್ಕಪಕ್ಕದಲ್ಲಿಯೇ/ತನ್ನ ಸುತ್ತಮುತ್ತಣ ಪರಿಸರ ದಲ್ಲಿಯೇ; ನೋಡ=ನೋಡುವಂತವನಾಗು/ತಿಳಿಯಲು ಪ್ರಯತ್ನಿಸು;

ಸತ್ಯವೆಂಬುದು ತಾನು ಹಿತ್ತಲದ ಗಿಡ ನೋಡ=ನಮ್ಮ ಸುತ್ತ ಮುತ್ತಣ ಪರಿಸರ ದಲ್ಲಿಯೇ ಅನೇಕ ವ್ಯಕ್ತಿಗಳು ಒಳ್ಳೆಯ ನಡೆನುಡಿಗಳಿಂದ ಬಾಳುತ್ತಿರುತ್ತಾರೆ. ಆದರೆ ಅಂತಹವರ ಬದುಕಿನ ಒಳ್ಳೆಯ ನಡೆನುಡಿಗಳ ಬೆಲೆಯನ್ನು ಅರಿಯದೆ/ ಗುರುತಿಸದೆ, ಮತ್ತೆಲ್ಲೋ/ಮತ್ತಾರಲ್ಲೋ ಒಳಿತಿನ ಗುಣಗಳನ್ನು ಹುಡುಕು ತ್ತಿರುತ್ತೇವೆ ಎಂಬ ತಿರುಳಿನಲ್ಲಿ ಬಳಕೆಯಾಗಿರುವ ನುಡಿಗಳು.

❖

೭೬. ಸಾಲವನು ಕೊಂಬಾಗ ಹಾಲೋಗರುಂಡಂತೆ
ಸಾಲಿಗನು ಬಂದು ಎಳೆವಾಗ ಕಿಬ್ಬದಿಯ
ಕೀಲು ಮುರಿದಂತೆ ಸರ್ವಜ್ಞ.

ಸಾಲದ ವ್ಯವಹಾರದಿಂದ ಉಂಟಾಗುವ ಬವಣೆಗಳನ್ನು ಹೇಳಲಾಗಿದೆ.

(ಸಾಲ=ಇತರರಿಂದ ಹಣ/ಒಡವೆ/ವಸ್ತುಗಳನ್ನು ಗೊತ್ತುಪಡಿಸಿದ ಸಮಯಕ್ಕೆ ಹಿಂತಿರುಗಿಸುವ ಕರಾರಿನೊಡನೆ ಪಡೆಯುವುದು; ಕೊಂಬ+ಆಗ; ಕೊಂಬ= ಪಡೆಯುವ/ಈಸಿಕೊಳ್ಳುವ; ಕೊಂಬಾಗ=ಪಡೆಯುವಾಗ/ತೆಗೆದುಕೊಳ್ಳುವಾಗ; ಹಾಲು+ಓಗರ+ಉಂಡ+ಅಂತೆ; ಓಗರ=ಅನ್ನ; ಹಾಲೋಗರ=ಹಾಲು ಅನ್ನ; ಉಂಡ=ಊಟ ಮಾಡಿದ; ಅಂತೆ=ಹಾಗೆ; ಸಾಲಿಗ=ಸಾಲ ಕೊಟ್ಟವನು; ಎಳೆವಾಗ=ಎಳೆಯುವಾಗ;

ಸಾಲಿಗನು ಬಂದು ಎಳೆವಾಗ=ಸಾಲವನ್ನು ಸಮಯಕ್ಕೆ ಸರಿಯಾಗಿ ಕಟ್ಟದಿದ್ದಾಗ, ಸಾಲವನ್ನು ವಸೂಲಿ ಮಾಡಲು ಬಂದ ಸಾಲಿಗನು ಆಡುವ ಅಪಮಾನದ ನುಡಿಗಳು ಹಾಗೂ ಕೊಡುವ ಕಿರುಕುಳ; ಕಿಬ್ಬದಿಯ=ಕಿರಿದಾದ+ ಬದಿ; ಬದಿ=ಪಕ್ಕ/ಮಗ್ಗಲು; ಕಿಬ್ಬದಿ=ಸೊಂಟ/ಪಕ್ಕೆ; ಕೀಲು=ಮೂಳೆ; ಮುರಿದ+ಅಂತೆ; ಮುರಿ=ತುಂಡಾಗು)

❖

೭೭. ಸಿರಿ ಬಂದ ಕಾಲದಲಿ ಕರೆದು ಧರ್ಮವ ಮಾಡು
ಪರಿಣಾಮವಕ್ಕು ಪದಪಕ್ಕು ಕೈಲಾಸ
ನೆರೆಮನೆಯಕ್ಕು ಸರ್ವಜ್ಞ.

ಸಿರಿಸಂಪದಗಳು ದೊರೆತಾಗ ಅದನ್ನು ತಾನೊಬ್ಬನೇ ಹೊಂದದೆ, ಇತರರಿಗೆ ನೆರವನ್ನು ನೀಡುವುದರ ಮೂಲಕ ಬದುಕನ್ನು ಹಸನುಗೊಳಿಸಿಕೊಳ್ಳ ಬೇಕೆಂಬುದನ್ನು ಹೇಳಲಾಗಿದೆ.

(ಸಿರಿ=ಆಸ್ತಿಪಾಸ್ತಿ/ಹಣಕಾಸು/ವಸ್ತುಒಡವೆ; ಸಿರಿಬಂದ ಕಾಲದಲಿ=ಸಿರಿವಂತ ನಾದಾಗ/ಸಂಪತ್ತು ಕೂಡಿ ಬಂದಾಗ; ಕರೆದು ಧರ್ಮವ ಮಾಡು=ಬಡಬಗ್ಗರನ್ನು/ ಸಂಕಟದಲ್ಲಿರುವವರನ್ನು ಗುರುತಿಸಿ ನೆರವನ್ನು ನೀಡು; ಪರಿಣಾಮವು+ಅಕ್ಕು; ಪರಿಣಾಮ=ಒಳಿತು/ಆನಂದ/ಏಳಿಗೆ/ಮಂಗಳ; ಅಕ್ಕು=ಆಗುವುದು/ದೊರೆಯುವುದು; ಪದಪು+ಅಕ್ಕು; ಪದಪು=ಒಲವು/ಆದರ/ಮನ್ನಣೆ/ಹಿಗ್ಗು;

ಕೈಲಾಸ=ದೇವರಾದ ಶಿವನು ನೆಲೆಸಿರುವ ತಾಣ/ಹುಟ್ಟುಬದುಕುಸಾವುಗಳ ಚಕ್ರದಿಂದ ಪಾರಾಗಿ ಶಿವನ ಬಳಿಸಾರಬೇಕೆಂದು ದೇವರನ್ನು ಪೂಜಿಸುವವರು ಹಂಬಲಿಸುವ ತಾಣ. ಇಲ್ಲಿ ಶಿವನು ನೆಲೆಸಿದ್ದಾನೆ ಎಂಬುದು ಜನಮನದಲ್ಲಿರುವ ಒಂದು ನಂಬಿಕೆ; ನೆರೆಮನೆಯು+ಅಕ್ಕು; ನೆರಮನೆ=ಪಕ್ಕದ ಮನೆ; ಕೈಲಾಸ ನೆರೆಮನೆಯಕ್ಕು=ಮುಕ್ತಿಯನ್ನು ಪಡೆಯುವುದಕ್ಕೆ ಯೋಗ್ಯನಾಗುವೆ ಎಂಬ ರೂಪಕದ ತಿರುಳಿನಲ್ಲಿ ಈ ಪದಕಂತೆಯು ಬಳಕೆಯಾಗಿದೆ.)

❖

೭೮. ಸಿರಿಯಣ್ಣನುಳ್ಳನಕ ಹಿರಿಯಣ್ಣನಾಗಿಕ್ಕು
ಸಿರಿಯಣ್ಣ ಹೋದ ಬೆಳಗಾಗಿ ಆಯಣ್ಣ
ನರಿಯಣ್ಣನಕ್ಕು ಸರ್ವಜ್ಞ.

ಸಂಪತ್ತು ಇದ್ದಾಗ/ಇಲ್ಲವಾದಾಗ ವ್ಯಕ್ತಿಯ ಸಾಮಾಜಿಕ ಅಂತಸ್ತಿನಲ್ಲಿ ಉಂಟಾಗುವ ಏರಿಳಿತಗಳನ್ನು ಎರಡು ರೂಪಕಗಳ ಮೂಲಕ ಹೇಳಲಾಗಿದೆ.

(ಸಿರಿ+ಅಣ್ಣನು+ಉಳ್ಳ+ಅನಕ; ಸಿರಿ=ಹಣ/ಆಸ್ತಿ/ಗದ್ದುಗೆ; ಸಿರಿಯಣ್ಣ=ಎಲ್ಲಾ ಬಗೆಯ ಸಂಪತ್ತು; ಉಳ್ಳ=ಇರುವ; ಅನಕ=ವರೆಗೆ; ಹಿರಿ+ಅಣ್ಣನು+ಆಗಿ+ಇಕ್ಕು; ಹಿರಿ=ದೊಡ್ಡ; ಹಿರಿಯಣ್ಣ=ಸಮಾಜದಲ್ಲಿ ದೊಡ್ಡ ಅಂತಸ್ತನ್ನು ಉಳ್ಳವನು/ ಎಲ್ಲರಿಂದಲೂ ಒಲವು–ಮೆಚ್ಚುಗೆ–ಮನ್ನಣೆಯನ್ನು ಪಡೆದವನು; ಇಕ್ಕು= ಇರುವುದು/ಕಂಡುಬರುವುದು; ಆಗಿಕ್ಕು=ಆಗಿರುವನು;

ಸಿರಿಯಣ್ಣ ಹೋದ=ಇರುವ ಸಂಪತ್ತೆಲ್ಲವೂ ಕಳೆದುಹೋದ ನಂತರ; ಬೆಳಗು+ಆಗಿ=ಬೆಳಕು ಹರಿದು ಮರುದಿನ ಬರುತ್ತಿದ್ದಂತೆಯೇ; ಆಯಣ್ಣ=ಆ+ ಅಣ್ಣ=ಆ ವ್ಯಕ್ತಿಯು; ನರಿ+ಅಣ್ಣನು +ಅಕ್ಕು; ನರಿ=ಕಪಟತನ ಮತ್ತು ಕುತಂತ್ರದ ನಡೆನುಡಿಗಳನ್ನು ಸೂಚಿಸಲು ನರಿಯನ್ನು ಒಂದು ರೂಪಕವಾಗಿ ಜನರು ಆಡುನುಡಿಯಲ್ಲಿ ಬಳಸುತ್ತಾರೆ;

ನರಿಯಣ್ಣ=ಗತಿಗೇಡಿ/ಇತರರನ್ನು ನೆಚ್ಚಿಕೊಂಡು ಹೊಟ್ಟೆಹೊರೆದು ಕೊಳ್ಳುವವನು ಎಂಬ ತಿರುಳಿನಲ್ಲಿ ಬಳಕೆಯಾಗಿರುವ ನುಡಿಗಟ್ಟು; ಅಕ್ಕು=ಆಗುತ್ತಾನೆ/ಆಗುವುದು)

❖

೭೯. ಸುರಗಿಯಲಿರಿದೇರು ಸರನೆ ಮಾದಿಹುದು ಅ
ಸ್ಥಿರದ ನಾಲಗೆಯಲಿರಿದೇರು ಅಂದಂದಿ
ಗಿರಿದಿರಿದು ಸುಡದೆ ಸರ್ವಜ್ಞ.

ಹರಿತವಾದ ಹತಾರದ ಇರಿತದಿಂದ ನಮಗೆ ಉಂಟಾದ ಗಾಯಕ್ಕಿಂತಲೂ ಇತರರು ನಮ್ಮ ಬಗ್ಗೆ ಆಡಿದ ಕೆಟ್ಟಮಾತು ಹೆಚ್ಚಿನ ನೋವನ್ನುಂಟು ಮಾಡುತ್ತದೆ ಎಂಬುದನ್ನು ಹೇಳಲಾಗಿದೆ.

(ಸುರಗಿಯಲಿ+ಇರಿದ+ಏರು; ಸುರಗಿ=ಸಣ್ಣಕತ್ತಿ/ಚೂರಿ/ಹತಾರ; ಇರಿ=ತಿವಿ/ಚುಚ್ಚು; ಏರು=ಗಾಯ/ಹುಣ್ಣು; ಸುರಗಿಯಲಿರಿದೇರು=ಕತ್ತಿ/ಚೂರಿ/ಇನ್ನಿತರ ಹತಾರಗಳ ತಿವಿತದಿಂದ ಉಂಟಾದ ಗಾಯ; ಸರನೆ=ತುಸು ಸಮಯದಲ್ಲಿ/ಕೆಲವಾರು ದಿನಗಳಲ್ಲಿ; ಮಾದು+ಇಹುದು; ಮಾಯ್+ದು; ಮಾಯ್=ಗುಣವಾಗು/ವಾಸಿಯಾಗು; ಇಹುದು= ಇರುವುದು; ಅಸ್ಥಿರ=ಅತ್ತಿತ್ತ ಹೊರಳುವ/ಅಲುಗಾಡುವ/ಚಲಿಸುವ; ಅಸ್ಥಿರದ ನಾಲಗೆ=ಎಲುಬಿಲ್ಲದ ನಾಲಗೆ/ಸಮಯ ಸನ್ನಿವೇಶಕ್ಕೆ ತಕ್ಕಂತೆ ಆಡಿದ ಮಾತುಗಳಲ್ಲಿ ಬದಲಾವಣೆಯನ್ನು ಮಾಡಿಕೊಳ್ಳುವುದು/ಕೊಟ್ಟ ಮಾತಿಗೆ ತಪ್ಪಿ ನಡೆಯುವುದು; ನಾಲಗೆಯಲಿ+ಇರಿದ+ ಏರು;

ನಾಲಗೆಯಲಿರಿದೇರು=ಕೆಟ್ಟ ಮಾತುಗಳನ್ನಾಡಿ ಮಾಡಿದ ಅವಹೇಳನ/ಮನಸ್ಸನ್ನು ಗಾಸಿಗೊಳಿಸಿ ನೀಡಿದ ನೋವು; ಅಂದು+ಅಂದಿಗೆ+ಇರಿದು+ಇರಿದು; ಅಂದು=ಆ ದಿನ; ಅಂದಂದಿಗೆ=ಪ್ರತಿದಿನವೂ; ಇರಿದಿರಿದು=ಕಡೆಗಣಿಸಿ ನುಡಿದ ಪ್ರಸಂಗವು ನೆನಪಿಗೆ ಬಂದಾಗಲೆಲ್ಲಾ ಇತರರು ಅಂದು ಆಡಿದ್ದ ಮಾತುಗಳು ಮನವನ್ನು ಚುಚ್ಚಿಚುಚ್ಚಿ ಕಾಡುತ್ತ; ಸುಡು=ಬೆಂಕಿಯಲ್ಲಿ ಬೇಯಿಸು/ಬೇಗೆಯನ್ನು ಉಂಟುಮಾಡು/ನೋವನ್ನುಂಟುಮಾಡು; ಸುಡದೆ=ನೋಯಿಸದೇ ಇರುತ್ತದೆಯೇ).

❖

೮೦. ಸೊಡರೆಣ್ಣೆ ತೀರಿದರೆ ಕೊಡನೆತ್ತಿ ಸುರಿದಿಹರೆ
ಕೊಡಬೇಡ ಕೊಡದೆ ಇರಬೇಡ ದಾನವನು
ಬಿಡಬೇಡವೆಂದ ಸರ್ವಜ್ಞ.

ಯಾವುದೇ ಒಬ್ಬ ವ್ಯಕ್ತಿಯು ತನ್ನ ಆದಾಯದ ಮಿತಿಯರಿತು ದಾನವನ್ನು ಮಾಡಬೇಕೆ ಹೊರತು, ತನ್ನಲ್ಲಿರುವುದನ್ನೆಲ್ಲಾ ಇತರರಿಗೆ ನೀಡಿ ಬರಿಗಯ್ ಆಗಬಾರದೆಂಬ ಎಚ್ಚರಿಕೆಯನ್ನು ನೀಡಲಾಗಿದೆ.

(ಸೊಡರ+ಎಣ್ಣೆ; ಸೊಡರು=ದೀಪ/ದೀವಿಗೆ; ಎಣ್ಣೆ=ಎಳ್ಳು/ಕಡಲೇಕಾಯಿ/ಹಿಪ್ಪೇಕಾಯಿ ಮುಂತಾದ ಕಾಳುಗಳಿಂದ ತೆಗೆದಿರುವ ಜಿಡ್ಡು; ತೀರು=ಮುಗಿ/ಇಲ್ಲವಾಗು; ತೀರಿದರೆ=ಮುಗಿದು ಹೋದರೆ; ಕೊಡ=ಗಡಿಗೆ/ಬಿಂದಿಗೆ; ಕೊಡನ+ಎತ್ತಿ;

ಕೊಡನ=ಎಣ್ಣೆಯಿಂದ ತುಂಬಿರುವ ಗಡಿಗೆಯನ್ನು/ಬಿಂದಿಗೆಯನ್ನು; ಸುರಿದು+ಇಹರೆ; ಸುರಿ=ಎರೆ/ಹಾಕು; ಇಹರೆ=ಇರುವರೆ/ಇರುತ್ತಾರೆಯೇ; ಸುರಿದಿಹರೆ=ಗಡಿಗೆ/ಬಿಂದಿಗೆಯಲ್ಲಿರುವುದೆಲ್ಲವನ್ನೂ ಬಗ್ಗಿಸುತ್ತಾರೆಯೇ; ದಾನ=ಹಸಿವು/ಬಡತನ/ಸಂಕಟದಲ್ಲಿ ನೋಯುತ್ತಿರುವವರಿಗೆ ಅಗತ್ಯವಾದ ವಸ್ತುಗಳನ್ನು/ಹಣಕಾಸನ್ನು/ಇತರ ರೀತಿಯ ನೆರವನ್ನು ನೀಡುವುದು; ಬಿಡಬೇಡ+ಎಂದ).

❖

೮೧. ಹಂಗಿನರಮನೆಗಿಂತ ವಿಂಗಡದ ಗುಡಿ ಲೇಸು
ಭಂಗಬಟ್ಟುಂಬ ಬಿಸಿಯನ್ನಕಿಂತಲು
ತಂಗುಳವೆ ಲೇಸು ಸರ್ವಜ್ಞ.

ಇತರರ ಮುಂದೆ ಕಯ್ಯೊಡ್ಡಿ ಬೇಡಿ ಬೇಕಾದುದನ್ನು ಪಡೆದು ನಲಿಯುವುದಕ್ಕಿಂತ, ತನ್ನತನವನ್ನು ಉಳಿಸಿಕೊಂಡು ಇದ್ದುದರಲ್ಲಿ ನೆಮ್ಮದಿಯಿಂದ ಬಾಳುವುದೇ ಒಳ್ಳೆಯದೆಂಬುದನ್ನು ಹೇಳಲಾಗಿದೆ.

(ಹಂಗಿನ+ಅರಮನೆಗಿಂತ; ಹಂಗು=ಅನ್ನ–ಬಟ್ಟೆ–ವಸತಿ–ಕೆಲಸ ಮತ್ತು ಇನ್ನಿತರ ಅಗತ್ಯಗಳಿಗಾಗಿ ಮತ್ತೊಬ್ಬರನ್ನು ಆಶ್ರಯಿಸಿ ತನ್ನತನವನ್ನು ಕಳೆದು ಕೊಂಡು ಬಾಳುವುದು; ಅರಮನೆ=ಅರಸನ ಮನೆ/ ಬಯಸಿದ್ದೆಲ್ಲವೂ ದೊರಕುವಂತಹ ಸಿರಿ ಸಂಪದಗಳ ನೆಲೆ;

ಹಂಗಿನ ಅರಮನೆ=ಇದು ಒಂದು ನುಡಿಗಟ್ಟು–ತಿನ್ನಲು/ಉಣ್ಣಲು/ ತೊಡಲು ಯಾವೊಂದು ಕೊರತೆಗಳಿಲ್ಲದಿದ್ದರೂ ವ್ಯಕ್ತಿಯು ತನ್ನ ವ್ಯಕ್ತಿತ್ವವನ್ನು ಕಳೆದು ಕೊಂಡು ಅನ್ಯರಿಗೆ ಅಡಿಯಾಳಾಗಿ ಬಾಳುವುದು; ವಿಂಗಡ=ಒಂಟಿಯಾಗಿರುವ/ ಬೇರೆಯಾಗಿರುವ/ತನ್ನದೇ ಆದ; ಗುಡಿ=ಗುಡಾರ/ಕುಟೀರ/ವಸತಿ/ಗುಡಿಸಲು;

ವಿಂಗಡದ ಗುಡಿ=ಇದು ಒಂದು ನುಡಿಗಟ್ಟು–ಯಾವೊಂದು ಬಗೆಯ ಸಂಪತ್ತಿಲ್ಲದಿದ್ದರೂ ಇತರರ ಮುಂದೆ ಕಯ್ಯೊಡ್ಡದೆ ತಲೆತಗ್ಗಿಸದೆ ತನ್ನತನವನ್ನು ಉಳಿಸಿಕೊಂಡು ಬಾಳುವುದು; ಲೇಸು=ಒಳ್ಳೆಯದು/ಉತ್ತಮ; ಭಂಗ+ಪಟ್ಟು+ ಉಂಬ; ಭಂಗ=ಅಪಮಾನ/ಸೋಲು; ಭಂಗಪಟ್ಟು=ಇತರರಿಂದ ಕಡೆಗಣಿಸುವಿಕೆಗೆ ಗುರಿಯಾಗಿ; ಉಂಬ=ಉಣ್ಣುವ: ತಂಗುಳವೆ=ತಣ್ಣಗಾಗಿರುವ ಅನ್ನವೇ; ತಣ್ಣನೆಯ ಕೂಳು=ತಂಗೂಳು/ತಂಗುಳು/ತಂಗಳು; ಕೂಳು=ಅನ್ನ/ಆಹಾರ/ತಿನಸು; ನುಡಿಗಟ್ಟು ಎಂದರೆ ಎರಡು ಇಲ್ಲವೇ ಮೂರು ಪದಗಳು ಜತೆಗೂಡಿ ಸಾಂಕೇತಿಕವಾದ ತಿರುಳನಲ್ಲಿ ಬಳಕೆಯಾಗುವ ಪದಕಂತೆ).

❖

೮೨. ಹದಬೆದೆಯಲಾರಂಬ ಕದನದಲಿ ಕೂರಂಬ
ನದಿಯ ಹಾಯುವಲಿ ಹರುಗೋಲ ಮರೆದಾತ
ವಿಧಿಯ ಬೈದೇನು ಸರ್ವಜ್ಞ.

ತಾನು ಮಾಡಬೇಕಾದ ಕೆಲಸವನ್ನು ಸರಿಯಾದ ಸಮಯದಲ್ಲಿ/ರೀತಿಯಲ್ಲಿ ಮಾಡದೆ, ಮತ್ತೊಂದನ್ನು ನಿಂದಿಸುವುದರಿಂದ ಯಾವ ಪ್ರಯೋಜನವೂ ಇಲ್ಲವೆಂಬುದನ್ನು ಹೇಳಲಾಗಿದೆ.

(ಹದಬೆದೆಯಲಿ+ಆರಂಬ; ಹದ=ಸರಿಯಾದ ಸಮಯ; ಬೆದೆ=ಕಾಮದ ನಂಟನ್ನು ಪಡೆಯಲು ಜೀವಿಗಳ ಮಯ್-ಮನಗಳಲ್ಲಿ ಉಂಟಾಗುವ ತುಡಿತ/ ಹೊಲಗದ್ದೆಗಳಲ್ಲಿ ದವಸಧಾನ್ಯಗಳ ಬೀಜವನ್ನು ಬಿತ್ತಲು/ಸಸಿಗಳನ್ನು ನಾಟಿಮಾಡ ಬೇಕಾದ ಕಾಲ; ಹದಬೆದೆಯಲಿ=ಮುಂಗಾರು ಮಳೆಯಾಗುತ್ತಿದ್ದಂತೆಯೇ ಉಳುಮೆ ಮಾಡಿದ ಹೊಲಗದ್ದೆಗಳಲ್ಲಿ ಬೆಳೆಗಳನ್ನು ಒಡ್ಡಲು ಅಂದರೆ ಬೀಜವನ್ನು ಬಿತ್ತುವ, ಸಸಿಗಳನ್ನು ನಾಟಿ ಮಾಡುವ, ಬೆಳೆದ ಪಯಿರುಗಳನ್ನು ಹರಗುವ, ಕಳೆಯನ್ನು ತೆಗೆಯುವ, ಕುಯಿಲನ್ನು ಮಾಡುವ, ಒಕ್ಕಣೆಯ ಕೆಲಸಗಳನ್ನು ಮಾಡಬೇಕಾದ ಕಾಲ;

ಕದನದಲಿ=ರಣರಂಗದಲ್ಲಿ; ಕದನ=ಕಲಹ/ಕಾಳಗ/ಸಮರ; ಕೂರ್+ಅಂಬ; ಕೂರ್=ಹರಿತವಾದ/ಮೊನೆಯುಳ್ಳ/ಚೂಪಾದ; ಅಂಬು=ಬಾಣ; ಕೂರಂಬ= ಹರಿತವಾದ ಬಾಣವನ್ನು; ಹಾಯು=ದಾಟು; ಹಾಯುವಲಿ=ದಾಟುವಾಗ; ಹರುಗೋಲು=ದೋಣಿಯನ್ನು ಮುನ್ನಡೆಸುವಾಗ ನೀರನ್ನು ಮೀಟಲು ಬಳಸುವ ಕೋಲು; ಮರೆದ+ಆತ=ಮರೆತವನು; ವಿಧಿ=ವ್ಯಕ್ತಿಯ ಜೀವನದ ಏಳುಬೀಳು ಗಳನ್ನು ದೇವರು/ಅಗೋಚರ ಶಕ್ತಿಯು ನಿರ್ಣಯಿಸಿರುತ್ತದೆ ಎಂಬ ನಂಬಿಕೆ; ಬೈದು+ಏನು; ಬೈದು=ನಿಂದಿಸಿ; ಬೈದೇನು=ಬಯ್ಯುವುದರಿಂದ ಯಾವ ಪ್ರಯೋಜನವಿಲ್ಲ.)

❖

೮೩. ಹಿರಿತನವು ಹೇಡಿಂಗೆ ಗುರುತನವು ಮೂಢಂಗೆ
ದೊರೆತನವು ನಾಡ ನೀಚಂಗೆ ದೊರೆದಿಹರೆ
ಧರೆಯೆಲ್ಲ ಕೆಡುಗು ಸರ್ವಜ್ಞ.

ಒಳ್ಳೆಯ ವ್ಯಕ್ತಿತ್ವವಿಲ್ಲದವನಿಗೆ ದೊಡ್ಡ ಗದ್ದುಗೆ/ಪಟ್ಟ/ಪದವಿಯು ದೊರೆಯುವಂತಾದರೆ ನಾಡು ಮತ್ತು ಜನಸಮುದಾಯದ ಬದುಕು ಹಾಳಾಗುತ್ತದೆ ಎಂಬ ಎಚ್ಚರಿಕೆಯನ್ನು ನೀಡಲಾಗಿದೆ.

(ಹಿರಿತನ=ಕುಟುಂಬ/ಸಾಮಾಜಿಕ ಒಕ್ಕೂಟಗಳನ್ನು ಒಳ್ಳೆಯ ರೀತಿಯಲ್ಲಿ ಮುನ್ನಡೆಸುವ ಜವಾಬ್ದಾರಿ; ಹೇಡಿಂಗೆ=ಹೇಡಿಯಾದವನಿಗೆ; ಹೇಡಿ= ಅಂಜುಬುರುಕ/ಪುಕ್ಕಲ/ಎದೆಗಾರಿಕೆಯಿಲ್ಲದವನು; ಗುರುತನ=ತನ್ನ ಒಳ್ಳೆಯ ನಡೆನುಡಿಗಳಿಂದ ವ್ಯಕ್ತಿ ಹಾಗೂ ಸಮಾಜದ ಮುನ್ನಡೆಗೆ ಬೇಕಾದ ಅರಿವನ್ನು ಜನ ಸಮುದಾಯದಲ್ಲಿ ಮೂಡಿಸುವ ಹೊಣೆಗಾರಿಕೆ; ಮೂಢಂಗೆ=ತಿಳಿಗೇಡಿಗೆ; ಮೂಢ= ಅರಿವಿಲ್ಲದವನು/ತಿಳುವಳಿಕೆಯಿಲ್ಲದವನು;

ದೊರೆತನ=ಜನ ಸಮುದಾಯದ ಹಿತಕ್ಕಾಗಿ ಸದಾಕಾಲ ಎಚ್ಚರದಿಂದ ಆಡಳಿತವನ್ನು ನಡೆಸುವ ಹುದ್ದೆ; ನಾಡ=ನಾಡಿನ/ದೇಶದ/ರಾಜ್ಯದ; ನೀಚಂಗೆ= ನೀಚನಾದವನಿಗೆ; ನೀಚ=ಸುಳ್ಳು/ಮೋಸ/ಕೆಟ್ಟತನದ ನಡೆನುಡಿಯುಳ್ಳವನು; ದೊರೆತು+ಇಹರೆ; ದೊರೆತು=ಸಿಕ್ಕು/ಪಡೆದು; ಇಹರೆ=ಇದ್ದರೆ; ದೊರೆದಿಹರೆ= ದೊರಕುವಂತಾದರೆ/ಸಿಗುವಂತಾದರೆ; ಧರೆ+ಎಲ್ಲ; ಧರೆ=ಬುವಿ/ನಾಡು; ಧರೆಯೆಲ್ಲ=ಇಡೀ ನಾಡೆಲ್ಲವೂ; ಕೆಡುಗು=ಹಾಳಾಗುತ್ತದೆ).

❖

೮೪. ಹಿರಿದು ಪಾಪವ ಮಾಡಿ ಹರಿವರು ಗಂಗೆಗೆ
ಹರಿವ ನೀರಲ್ಲಿ ಕರಗುವೊಡೆಯಾ ಪಾಪ
ಎರೆಯ ಮಣ್ಣಲ್ಲ ಸರ್ವಜ್ಞ.

ನೀರಿನಲ್ಲಿ ಮುಳುಗೆದ್ದ ಮಾತ್ರದಿಂದಲೇ ಮಾಡಿದ ಪಾಪ ಹೋಗುವುದಿಲ್ಲ ವೆಂಬುದನ್ನು ಹೇಳಲಾಗಿದೆ.

(ಹಿರಿ=ದೊಡ್ಡ/ಅತಿ/ಹೆಚ್ಚು; ಹಿರಿದು=ಅತಿಯಾಗಿ/ದೊಡ್ಡದಾಗಿ/ಹೆಚ್ಚಾಗಿ; ಪಾಪ= ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡು/ವಂಚನೆಯನ್ನುಂಟುಮಾಡುವ ನಡೆನುಡಿ; ಹರಿ=ಅತ್ತಸಾರು/ಹೋಗು/ಓಡು; ಗಂಗೆ=ನೀರು/ಉತ್ತರ ಇಂಡಿಯಾದಲ್ಲಿ ಹರಿಯುತ್ತಿರುವ ನದಿಯೊಂದರ ಹೆಸರು; ಹರಿವರು ಗಂಗೆಗೆ=ದೇಗುಲಗಳ ಬಳಿಯ ನದಿ/ಕೊಳ/ನೀರಿನ ತಾಣಗಳಲ್ಲಿ ಮೀಯುವರು–ಇಂತಹ ಎಡೆಗಳಲ್ಲಿ ಮಿಂದೆದ್ದರೆ ಮಾಡಿದ ಪಾಪ ಹೊರಟುಹೋಗುತ್ತದೆಯೆಂಬ ನಂಬಿಕೆಯು ಜನಮನದಲ್ಲಿದೆ; ಕರಗುವೊಡೆ+ಆ; ಕರಗುವೊಡೆ=ಕರಗಿ ಹೋಗುವುದಕ್ಕೆ/ಇಲ್ಲವಾಗು ವುದಕ್ಕೆ; ಆ ಪಾಪ=ಮಾಡಿರುವ ಕೆಟ್ಟಕೆಲಸಗಳು; ಎರೆಯ ಮಣ್ಣು=ಕಪ್ಪನೆಯ ಬಣ್ಣದ ಮಣ್ಣು/ಜೇಡಿಮಣ್ಣು/ಮುಟ್ಟಿದಾಗ ಇಲ್ಲವೇ ತುಳಿದಾಗ ಕಯ್ ಕಾಲುಗಳಿಗೆ ಅಂಟಿಕೊಳ್ಳುವ ಜಿಗುಟು ಮಣ್ಣು;

ಆ ಪಾಪ ಎರೆಯ ಮಣ್ಣಲ್ಲ=ಮಾಡಿದ ಪಾಪ ಹೋಗಬೇಕಾದರೆ, ಮಾಡಿದ ಕೆಟ್ಟ ಕೆಲಸಕ್ಕಾಗಿ ಮರುಗಿ, ಮತ್ತೊಮ್ಮೆ ಅಂತಹ ಕೆಟ್ಟದ್ದನ್ನು ಮಾಡದೆ, ಒಳ್ಳೆಯ ನಡೆನುಡಿ ಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಬಾಳತೊಡಗಿದ ಹೊರತು ಪಾಪ ತೊಲಗುವುದಿಲ್ಲ. ಮಾಡಿದ ತಪ್ಪನ್ನು ತಿದ್ದಿ ಸರಿಪಡಿಸಿಕೊಂಡು ನಡೆಯದಿದ್ದರೆ ಅಂತಹ ವ್ಯಕ್ತಿಯು ನೀಚನಾಗಿಯೇ/ಕೆಡುಕನಾಗಿಯೇ ಬಾಳುತ್ತಿರುತ್ತಾನೆ ಎಂಬುದನ್ನು ಈ ರೂಪಕದ ತಿರುಳು ಹೊಂದಿದೆ).

❖

೮೫. ಹುಟ್ಟುವಾಗಲೆ ಧನವ ಮೊಟ್ಟೆಗಟ್ಟಿಳಿದನೇ
ಕಟ್ಟೊಯ್ಯಲರಿಯ ಕಡೆಯಲ್ಲಿ ಅದನರಿದು
ಕೊಟ್ಟುಂಬ ದಾನಿ ಸರ್ವಜ್ಞ.

ಉಳ್ಳವರು ದಾನ ಮಾಡುವ ಗುಣವನ್ನು ಬೆಳೆಸಿಕೊಳ್ಳಬೇಕೆಂಬುದನ್ನು ಹೇಳಲಾಗಿದೆ.

(ಹುಟ್ಟುವ+ಆಗಲೆ; ಹುಟ್ಟುವಾಗಲೆ=ತಾಯಿಯ ಹೊಟ್ಟೆಯಿಂದ ಹೊರಬಂದ ಗಳಿಗೆಯಲ್ಲೇ; ಧನ=ಹಣ/ಚಿನ್ನಬೆಳ್ಳಿ ಒಡವೆ/ಆಸ್ತಿಪಾಸ್ತಿ; ಮೊಟ್ಟೆ+ಕಟ್ಟಿ+ಇಳಿದನೇ; ಮೊಟ್ಟೆ=ಗಂಟು/ಹೊರೆ/ಮೂಟೆ; ಇಳಿದನೇ=ಈ ಜಗತ್ತಿಗೆ ಬಂದನೇ; ಮೊಟ್ಟೆ ಗಟ್ಟಿಳಿದನೇ= ಗಂಟುಕಟ್ಟಿಕೊಂಡು ಜತೆಯಲ್ಲಿ ತಂದನೆ; ಕಟ್ಟಿ+ಒಯ್ಯಲು+ಅರಿಯ; ಒಯ್ಯಲು=ತೆಗೆದುಕೊಂಡು ಹೋಗಲು; ಅರಿಯ=ತಿಳಿಯನು;

ಕಟ್ಟೊಯ್ಯಲರಿಯ=ಗಂಟನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗಲಾಗದು; ಕಡೆಯಲ್ಲಿ=ಸಾವನ್ನಪ್ಪಿದಾಗ; ಅದನು+ಅರಿದು; ಅದನು=ಅದನ್ನು; ಅರಿದು= ತಿಳಿದು;

ಅದನರಿದು=ಹುಟ್ಟುವಾಗ ಸಂಪತ್ತನ್ನು ಹೊತ್ತು ತರಲಿಲ್ಲ/ಸಾಯುವಾಗ ಜತೆಯಲ್ಲಿ ಹೊತ್ತು ಕೊಂಡೊಯ್ಯುವುದಿಲ್ಲವೆಂಬ ವಾಸ್ತವವನ್ನು ಅರಿತುಕೊಂಡು; ಕೊಟ್ಟು+ಉಂಬ; ಕೊಟ್ಟು=ತನ್ನ ಆದಾಯದ ಮಿತಿಗೆ ಒಳಪಟ್ಟಂತೆ ಇತರರಿಗೂ ನೆರವನ್ನು ನೀಡಿ; ಉಂಬ=ಉಣ್ಣುವನು/ತನ್ನ ಬಳಿಇರುವ ಸಂಪತ್ತಿನಿಂದ ನಲಿವು ನೆಮ್ಮದಿಯ ಬಾಳ್ವೆಯನ್ನು ನಡೆಸುವನು; ದಾನಿ=ಇತರರ ಹಸಿವು/ಬಡತನ/ ಸಂಕಟವನ್ನು ನಿವಾರಿಸಲು ತನ್ನ ಸಂಪತ್ತನ್ನು ನೀಡುವವನು.)

❖

೮೬. ಹುಸಿವನ ದೇಹಾರ ಕಸ ಹತ್ತಿದಾರಂಬ
ವಿಷಯ ಉಳ್ಳವನ ಗುರುತನ ಇವು ಮೂರು
ಮಸಿವಣ್ಣ ಕಂಡ ಸರ್ವಜ್ಞ.

ದೇವರ ಪೂಜೆ, ಬೇಸಾಯ ಮತ್ತು ಅರಿವನ್ನು ಮೂಡಿಸುವ ಕಸುಬುಗಳನ್ನು ಮಾಡುವವರು ಯಾವ ಬಗೆಯ ವ್ಯಕ್ತಿತ್ವವನ್ನು ಹೊಂದಿರಬಾರದು ಎಂಬುದನ್ನು ಹೇಳಲಾಗಿದೆ.

(ಹುಸಿ=ಸುಳ್ಳು/ದಿಟವಲ್ಲದ್ದು/ನಿಜವಲ್ಲದ್ದು; ಹುಸಿವನ=ಸುಳ್ಳನ್ನು ಹೇಳುವವನ; ದೇಹಾರ=ಪೂಜೆ; ಕಸ ಹತ್ತಿದ+ಆರಂಬ=ಕಳೆಯೇ ಹೆಚ್ಚಾಗಿರುವ ಬೆಳೆ; ಆರಂಬ= ಬೇಸಾಯ/ಬೆಳೆಯನ್ನು ಒಡ್ಡುವಿಕೆ; ವಿಷಯ=ಕೆಟ್ಟ ನಡೆನುಡಿಗಳು/ಕಾಮನೆಗಳು; ಉಳ್ಳವನ=ಇರುವವನ;

ಗುರುತನ=ಮಕ್ಕಳಲ್ಲಿ ಹಾಗೂ ಇತರರಲ್ಲಿ ಅರಿವನ್ನು ಮೂಡಿಸುವ ಹೊಣೆಗಾರಿಕೆಯ ಕಸುಬು; ಮಸಿ+ಬಣ್ಣ; ಮಸಿ=ಕಪ್ಪು; ಮಸಿವಣ್ಣ ಅಂದರೆ ಪ್ರಯೋಜನವಿಲ್ಲದ್ದು/ಹಾನಿಯನ್ನು ಉಂಟುಮಾಡುವಂತಹುದು; ಕಂಡ= ಎಂಬುದನ್ನು ತಿಳಿ).

❖

೮೭. ಹುಸಿವಾತ ದೇಗುಲದ ದೆಸೆಯತ್ತ ಮುಂತಾಗಿ
ನೊಸಲೆತ್ತಿ ಕರವ ಮುಗಿದರೆ ಇಷ್ಟುದ್ದ
ಹುಸಿವೆನೆಂದೆಂಬ ಸರ್ವಜ್ಞ.

ನಿತ್ಯಜೀವನದಲ್ಲಿ ಸುಳ್ಳಿನ ನಡೆನುಡಿಗಳಿಂದ ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುತ್ತಿರುವ ವ್ಯಕ್ತಿಯು ದೇವರ ಮುಂದೆ ಮಾಡುವ ತೋರಿಕೆಯ ಆಚರಣೆಯನ್ನು ಅಣಕಮಾಡಲಾಗಿದೆ.

(ಹುಸಿವ+ಆತ; ಹುಸಿ=ಸುಳ್ಳು/ದಿಟವಲ್ಲದ್ದು/ನಿಜವಲ್ಲದ್ದು; ಆತ=ಅವನು; ಹುಸಿವಾತ=ಸುಳ್ಳು ಮತ್ತು ಮೋಸದ ನಡೆನುಡಿಗಳಿಂದ ಜನರನ್ನು ವಂಚಿಸುತ್ತಿರುವವನು; ದೇಗುಲ=ದೇವ+ಕುಲ; ಕುಲ=ಮನೆ/ಇರುವ ಜಾಗ/ಆಲಯ; ದೇಗುಲ=ದೇವಾಲಯ/ದೇವರ ವಿಗ್ರಹ ಇರುವ ಮಂದಿರ; ದೆಸೆ+ಅತ್ತ; ದೆಸೆ=ದಿಕ್ಕು; ಅತ್ತ=ಆ ಕಡೆ; ಮುಂದಕ್ಕೆ+ತಾಗಿ; ತಾಗು=ಮುಟ್ಟು; ಮುಂತಾಗಿ= ಮುಂದೆ ನಿಂತು; ನೊಸಲ+ಎತ್ತಿ; ನೊಸಲು=ಹಣೆ; ನೊಸಲೆತ್ತಿ=ಹಣೆಯನ್ನು ಮೇಲೆತ್ತಿ; ಕರ=ಕಯ್;

ನೊಸಲೆತ್ತಿ ಕರವ ಮುಗಿದರೆ=ಹಣೆಯ ಮೇಲೆ ಎರಡು ಕಯ್ಗಳನ್ನು ಜೋಡಿಸಿಟ್ಟುಕೊಂಡು ದೇವರಿಗೆ ನಮಿಸಿದರೆ; ಇಷ್ಟು+ಉದ್ದ; ಇಷ್ಟುದ್ದ=ಅವನು ಎಷ್ಟು ಎತ್ತರಕ್ಕೆ ತನ್ನ ಕಯ್ಗಳನ್ನು ಎತ್ತಿರುವನೋ ಅಶ್ಟು ದೊಡ್ಡ ಪ್ರಮಾಣದಲ್ಲಿ/ಮಟ್ಟದಲ್ಲಿ; ಹುಸಿವೆನ್+ಎಂದು+ಎಂಬ; ಹುಸಿವೆನ್=ಸುಳ್ಳನ್ನು ಆಡುವೆನು; ಎಂದು+ಎಂಬ; ಎಂಬ=ಎನ್ನುವನು/ಹೇಳುವನು; ಎಂದೆಂಬ=ಎಂಬುದನ್ನು ತನ್ನ ಕಪಟತನದ ಆಚರಣೆಯಿಂದ ಜಗತ್ತಿಗೆ ತಿಳಿಸುವನು/ತೋರಿಸುವನು).

❖

೮೮. ಹೊಲಬನರಿಯದ ಗುರುವು ತಿಳಿಯಲರಿಯದ ಶಿಷ್ಯ
ನೆಲೆಯನಾರಯ್ಯದುಪದೇಶವಂಧಕನು
ಕಳನ ಹೊಕ್ಕಂತೆ ಸರ್ವಜ್ಞ.

ಒಳ್ಳೆಯ ವ್ಯಕ್ತಿತ್ವವನ್ನು ಹೊಂದಿರದ ಗುರುಶಿಷ್ಯರಿಗೆ ಉಂಟಾಗುವ ಪಾಡನ್ನು 'ಕುರುಡನೊಬ್ಬ ರಣರಂಗವನ್ನು ಹೊಕ್ಕಾಗ ತೊಳಲಾಡುವ' ಪ್ರಸಂಗದ ಮೂಲಕ ಹೇಳಲಾಗಿದೆ.

(ಹೊಲಬನು+ಅರಿಯದ; ಹೊಲಬು=ದಾರಿ/ಹಾದಿ/ಮಾರ್ಗ; ಅರಿ=ತಿಳಿ; ಅರಿಯದ= ಗೊತ್ತಿಲ್ಲದ; ಹೊಲಬನರಿಯದ=ಜೀವನದಲ್ಲಿ ಯಾವುದು ಒಳಿತು/ಕೆಡಕು ಮತ್ತು ಯಾವುದು ಸರಿ/ತಪ್ಪು ಎಂಬುದು ಗೊತ್ತಿಲ್ಲದ; ತಿಳಿಯಲು+ಅರಿಯದ; ಗುರು=ಮಕ್ಕಳಲ್ಲಿ/ಇತರರಲ್ಲಿ ಅರಿವನ್ನು ಮೂಡಿಸಿ ಒಳ್ಳೆಯ ನಡೆನುಡಿಗಳನ್ನು ರೂಪಿಸುವ ಹೊಣೆಗಾರಿಕೆಯುಳ್ಳ ವ್ಯಕ್ತಿ; ಶಿಷ್ಯ=ಗುರುವಿನಿಂದ ಒಳ್ಳೆಯ ವಿದ್ಯೆಯನ್ನು ಪಡೆದು ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಹೊಣೆ ಹೊತ್ತವನು;

ನೆಲೆಯನು+ಆರಯ್ಯದ+ಉಪದೇಶವು+ಅಂಧಕನು; ನೆಲೆಯನು= ಒಳ್ಳೆಯ ಸಂಗತಿಗಳನ್ನು/ವಿಚಾರಗಳನ್ನು; ಆರಯ್=ಹುಡುಕು/ಯೋಚಿಸು/ಒರೆಹಚ್ಚಿ ನೋಡು; ಆರಯ್ಯದ=ಹುಡುಕಿ ತಿಳಿಯಲು ಪ್ರಯತ್ನಿಸದಿರುವ; ಉಪದೇಶ=ವಿದ್ಯೆಯನ್ನು ಕಲಿಸುವುದು/ತಿಳುವಳಿಕೆಯನ್ನು ಹೇಳುವುದು; ಅಂಧಕ=ಕುರುಡ; ಕಳನ=ರಣರಂಗವನ್ನು; ಕಳ=ರಣರಂಗ/ಕದನ ನಡೆಯುವ ಜಾಗ; ಹೊಕ್ಕ+ಅಂತೆ; ಹೊಕ್ಕ=ಒಳನುಗ್ಗಿದ; ಅಂತೆ=ಹಾಗೆ).

❖

೮೯. ಹೊಲಬನರಿಯದ ಮಾತು ತಲೆ ಬೇನೆ ಹಿಡಿದಂತೆ
ಹೊಲಬರಿದೊಂದ ನುಡಿದರೆ ಅದು ದಿವ್ಯ
ಫಲ ಪಕ್ವದಂತೆ ಸರ್ವಜ್ಞ.

ಸರಿತಪ್ಪುಗಳ ಅರಿವಿಲ್ಲದೆ ಆಡುವ ಮಾತುಗಳಿಂದ ಉಂಟಾಗುವ ಕೆಟ್ಟ ಪರಿಣಾಮಗಳನ್ನು ಹಾಗೂ ಒಳ್ಳೆಯ ಅರಿವಿನಿಂದ ಆಡುವ ಮಾತುಗಳಿಂದ ಉಂಟಾಗುವ ಒಳ್ಳೆಯ ಪರಿಣಾಮಗಳನ್ನು ಹೇಳಲಾಗಿದೆ.

(ಹೊಲಬನು+ಅರಿಯದ; ಹೊಲಬು=ದಾರಿ/ಮಾರ್ಗ/ಹಾದಿ; ಅರಿ=ತಿಳಿ; ಅರಿಯದ=ತಿಳಿಯದ; ಹೊಲಬನರಿಯದ ಮಾತು= ತಿಳುವಳಿಕೆಯಿಲ್ಲದ ನುಡಿ/ನಿಜದ ಅರಿವಿಲ್ಲದ ನುಡಿ/ಒಳಿತು ಕೆಡುಕನ್ನು ವಿಂಗಡಿಸಿ ನೋಡದೆ ಆಡುವ ನುಡಿ; ಬೇನೆ=ನೋವು/ಯಾತನೆ; ತಲೆಬೇನೆ=ತಲೆನೋವು; ಹಿಡಿದ+ಅಂತೆ; **ಹೊಲಬು**+ಅರಿದು+ಒಂದ; ಒಂದ ನುಡಿದರೆ=ಒಂದು ಮಾತನ್ನಾಡಿದರೆ;

ಹೊಲಬರಿದೊಂದ ನುಡಿದರೆ=ಇತರರ ಮನಸ್ಸಿಗೆ ನೋವಾಗದಂತೆ/ಸತ್ಯವನ್ನು ಮರೆಮಾಚದಂತೆ ಒಳಿತನ್ನುಂಟುಮಾಡುವ ಮಾತುಗಳನ್ನಾಡಿದರೆ; ದಿವ್ಯ= ಒಳ್ಳೆಯದು/ಉತ್ತಮವಾದುದು; ಫಲ=ಹಣ್ಣು; ಪಕ್ವದ+ಅಂತೆ; ಪಕ್ವ=ಮಾಗುವುದು/ರಸದಿಂದ ಕೂಡಿ ರುಚಿಕರವಾದುದು; ಅಂತೆ=ಹಾಗೆ;

ದಿವ್ಯಫಲ ಪಕ್ವದಂತೆ=ಇದೊಂದು ಹೋಲಿಕೆ. ರಸದಿಂದ ತುಂಬಿ ರುಚಿಕರವಾದ ಮಾಗಿದ ಹಣ್ಣನ್ನು ತಿಂದಾಗ ಯಾವ ಬಗೆಯ ನಲಿವು ನೆಮ್ಮದಿ ದೊರೆಯುವುದೋ ಅಂತೆಯೇ ತಿಳುವಳಿಕೆಯ ಮಾತುಗಳನ್ನು ಆಡಿದಾಗ/ಕೇಳಿದಾಗ ಉಂಟಾಗುತ್ತದೆ).

❖

೯೦. ಸರ್ವಜ್ಞನೆಂಬವನು ಗರ್ವದಿಂದಾದವನೆ
ಸರ್ವರೊಳೊಂದೊಂದ ನುಡಿ ಕಲಿತು ವಿದ್ಯದ
ಪರ್ವತವಾದ ಸರ್ವಜ್ಞ.

ಸರ್ವಜ್ಞನು ತನ್ನ ಸಾಮಾಜಿಕ ನಡೆನುಡಿ ಹಾಗೂ ಕವಿಯ ವ್ಯಕ್ತಿತ್ವ ರೂಪುಗೊಂಡ ಬಗೆಯನ್ನು ಹೇಳಿಕೊಂಡಿದ್ದಾನೆ.

(ಸರ್ವಜ್ಞ+ಎಂಬವನು; ಸರ್ವ=ಎಲ್ಲ/ಸಮಸ್ತ; ಜ್ಞ=ತಿಳಿದವನು/ಅರಿತವನು; ಸರ್ವಜ್ಞ=ಎಲ್ಲವನ್ನೂ ತಿಳಿದವನು/ಕವಿಯ ಅಂಕಿತ ನಾಮ/ಕಾವ್ಯರಚನೆಗಾಗಿ ಇಟ್ಟು ಕೊಂಡ ಹೆಸರು; ಎಂಬವನು=ಎಂಬ ವ್ಯಕ್ತಿಯು; ಗರ್ವದಿಂದ+ಆದವನೆ; ಗರ್ವ= ಅಹಂಕಾರ/ಒಣಹೆಮ್ಮೆ/ಸೊಕ್ಕು; ಆದವನೆ=ರೂಪುಗೊಂಡಿದ್ದಾನೆಯೇ/ ಆಗಿದ್ದಾನೆಯೇ;

ಸರ್ವಜ್ಞನೆಂಬವನು ಗರ್ವದಿಂದಾವನೆ= ಸರ್ವಜ್ಞನ ವ್ಯಕ್ತಿತ್ವವು ಗರ್ವದಿಂದ ರೂಪು ಗೊಂಡಿಲ್ಲ. ಒಳಿತನ್ನು ಕೇಳುವ/ಕಾಣುವ/ತನ್ನದಾಗಿಸಿಕೊಳ್ಳುವ ವಿನಯದ ನಡೆನುಡಿಗಳಿಂದ ರೂಪುಗೊಂಡಿದೆ; ಸರ್ವರೊಳು+ಒಂದು+ಒಂದ; ಸರ್ವರೊಳು= ಎಲ್ಲರಿಂದಲೂ; ಒಂದೊಂದ= ಒಂದೊಂದು ಬಗೆಯ/ರೀತಿಯ; ನುಡಿ=ಮಾತು; ಕಲಿ=ಅರಿತು/ತಿಳಿದು;

ನುಡಿ ಕಲಿತು=ಅರಿವನ್ನು/ತಿಳುವಳಿಕೆಯನ್ನು ತನ್ನದಾಗಿಸಿ ಕೊಂಡು; ವಿದ್ಯದ=ವಿದ್ಯೆಯ; ವಿದ್ಯೆ=ಅರಿವು/ತಿಳುವಳಿಕೆ/ಜ್ಞಾನ; ಪರ್ವತ+ಆದ;

❖

ಬರಹಗಾರ

ಹೆಸರು : ಸಿ.ಪಿ.ನಾಗರಾಜ (೧೯೪೫)

ತಾಯಿ : ಲಕ್ಷ್ಮಿದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ.

ತಂದೆ : ಪುಟ್ಟೇಗೌಡ, ಚೆಕ್ಕೆರೆ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಓದು : ಎಂ.ಎ., ಪಿಎಚ್.ಡಿ.,

ಕೆಲಸ : ಕನ್ನಡ ಅಧ್ಯಾಪಕ

೧೯೭೧–೭೨ ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ.

೧೯೭೨–೨೦೦೩ ಭಾರತಿ ಕಾಲೇಜು, ಕಾಳಮುದ್ದನದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

೨೦೦೬–೨೦೨೧ ತೇಜಸ್ವಿ ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

ಬರಹ

೧. ಮುದ್ರಿತ ಪುಸ್ತಕಗಳು

ನಾಟಕ: ಭಾಗೀರಥಿ, ಅಂಬೆ, ಹಾವು, ಅಂಗಿಬಟ್ಟೆ, ಒಂದು ರೂಪಾಯಿ, ಕಳ್ಳರಿದ್ದಾರೆ ಎಚ್ಚರಿಕೆ, ಹೆಣದ ಹಣ, ಮೂರು ಸಾಮಾಜಿಕ ನಾಟಕಗಳು

ಗದ್ಯ: ಕರಿಯನ ಪುರಾಣ, ಕನಕನ ಅವ್ವ, ಹಳ್ಳಿಗಾಡಿನ ರೂವಾರಿ, ಡಾ. ಬಂದೀಗೌಡ, ಆಣೆ ಪ್ರಮಾಣಗಳು, ಬಯ್ಗುಳ, ಸರ್ವಜ್ಞ ವಚನಗಳ ಓದು, ಅಲ್ಲಮ ವಚನಗಳ ಓದು, ಶಿವಶರಣೆಯರ ವಚನಗಳ ಓದು, ಶಿವಶರಣರ ವಚನಗಳ ಓದು, ಬಸವಣ್ಣ ವಚನಗಳ ಓದು, ಮುದ್ದೆಗಂಟು, ಶಿವಶರಣಶರಣೆಯರ ವಚನಗಳ ಓದು

ಪಂಪ ಭಾರತ ಓದು　　　　　ಸರ್ವಜ್ಞ ಮತ್ತು ಅಲ್ಲಮ ವಚನಗಳ ಓದು
ವಚನದಿಂದ ಆಯ್ದ ಸಾಲುಗಳ ಓದು
ಕುವೆಂಪು ಕವನಗಳ ಓದು　　　ಕನ್ನಡ ಬಯ್ಗುಳ ಓದು
ಬಸವಯುಗದ ವಚನಕಾರರು
ಕನಕದಾಸರ ರಾಮಧಾನ್ಯ ಪ್ರಸಂಗ ಓದು
ಪಂಪ ಭಾರತ ಪ್ರಸಂಗ

೨. ಮೈಲಾಂಗ್ ಮತ್ತು ಋತುಮಾನ ಡಿಜಿಟಲ್ ಪುಸ್ತಕಗಳು

ಏಳು ನಾಟಕಗಳು(ಇಬುಕ್); ಭಾಗೀರಥೀ(ನಾಟಕ–ಇಬುಕ್); ಅಂಬೆ (ನಾಟಕ–ಇಬುಕ್); ಹಾವು (ನಾಟಕ–ಇಬುಕ್); ಅಂಗಿಬಟ್ಟೆ(ನಾಟಕ–ಇಬುಕ್); ಒಂದು ರೂಪಾಯಿ (ನಾಟಕ–ಇಬುಕ್); ಕಳ್ಳರಿದ್ದಾರೆ ಎಚ್ಚರಿಕೆ (ನಾಟಕ–ಇಬುಕ್); ಹೆಣದ ಹಣ(ನಾಟಕ–ಇಬುಕ್); ಶಿವಶರಣಶರಣೆಯರ ವಚನಗಳ ಓದು(ಇಬುಕ್); ಬಯ್ಗುಳ(ಆಡಿಯೋ ಬುಕ್); ಸರ್ವಜ್ಞನ ವಚನಗಳ ಓದು (ಆಡಿಯೋ ಬುಕ್); ಅಲ್ಲಮನ ವಚನಗಳ ಓದು(ಆಡಿಯೋ ಬುಕ್); ಬಸವಣ್ಣನ ವಚನಗಳ ಓದು(ಆಡಿಯೋ ಬುಕ್); ಶಿವಶರಣಶರಣೆಯರ ವಚನಗಳ ಓದು–ಭಾಗ–೧ (ಆಡಿಯೋ ಬುಕ್); ಶಿವಶರಣಶರಣೆಯರ ವಚನಗಳ ಓದು–ಭಾಗ–೨–(ಆಡಿಯೋ ಬುಕ್); ವಚನದಿಂದ ಆಯ್ದ ಸಾಲುಗಳು ಓದು–ಭಾಗ–೧–(ಆಡಿಯೋ ಬುಕ್); ವಚನದಿಂದ ಆಯ್ದ ಸಾಲುಗಳು ಓದು–ಭಾಗ–೨–(ಆಡಿಯೋ ಬುಕ್); ಮುದ್ದೆಗಂಟು(ಆಡಿಯೋ ಬುಕ್)

3. C P Nagaraj-You Tube

Play lists
ಸರ್ವಜ್ಞನ ವಚನಗಳ ಓದು–೧೩ ಎಪಿಸೋಡ್
ಅಲ್ಲಮನ ವಚನಗಳ ಓದು– ೩೬ ಎಪಿಸೋಡ್
ಬಸವಣ್ಣನ ವಚನಗಳ ಓದು–೨೬ ಎಪಿಸೋಡ್
ಶಿವಶರಣಶರಣೆಯರ ವಚನಗಳ ಓದು–೫೨ ಎಪಿಸೋಡ್
ವಚನದಿಂದ ಆಯ್ದ ಸಾಲುಗಳ ಓದು–೧೬೨ ಎಪಿಸೋಡ್
ಮುದ್ದೆಗಂಟು–೬೦ ಎಪಿಸೋಡ್
ಹಳ್ಳಿಗಾಡಿನ ರೂವಾರಿ ಜಿ.ಮಾದೇಗೌಡ–೧೫ ಎಪಿಸೋಡ್
ಜನಪರ ಚೇತನ ಡಾ.ಬಂದೀಗೌಡ–೧೫ ಎಪಿಸೋಡ್

ಕುವೆಂಪು ಕವನಗಳ ಓದು–೧೩ ಎಪಿಸೋಡ್
ಪಂಪ ಭಾರತ ಪ್ರಸಂಗಗಳು – ೯ ಎಪಿಸೋಡ್
ಭಾಷೆಯ ಬಗೆಗೆ ನೀವೇನು ಬಲ್ಲಿರಿ–೪೧
(ಡಿ.ಎನ್. ಶಂಕರ ಭಟ್)
ಸಮಗ್ರ ಬುದ್ಧ ಸಾಹಿತ್ಯ ಮಾಲೆ–೩೦
(ಸಿ.ಎಚ್. ರಾಜಶೇಖರ್)
ನುಡಿಯರಿಮೆ ಬರಹಗಳು–೨೬
(ಕೆ.ವಿ. ನಾರಾಯಣ)
ಗೂಗಿ ವಾ ಥಿಯಾಂಗೊ ವೈಚಾರಿಕ ಬರಹಗಳು–೧೩
(ಅನುವಾದ : ಎಚ್.ಎಸ್. ನಾಗಭೂಷಣ)
ಎದೆಗೆ ಬಿದ್ದ ಅಕ್ಷರ–೨೯
(ದೇವನೂರು ಮಹಾದೇವ)
ವೇದಗಳಲ್ಲಿ ಜನಸಾಮಾನ್ಯರು–೪೦
(ಬಿ.ವಿ. ವೀರಭದ್ರಪ್ಪ)
ಆಣೆ ಪ್ರಮಾಣಗಳ ಓದು–೧೦
ರಾಮಧಾನ್ಯ ಪ್ರಸಂಗ–೧
(ಕನಕದಾಸ)
The conquest of Happiness
ಮೂಲ : ಬರ್ಟ್‌ಂಡ್ ರಸೆಲ್
ಸುಖ ಸಾಧನೆ
ಕನ್ನಡ ಅನುವಾದ : ಎಚ್. ಯೋಗ ನರಸಿಂಹಮ್–೬೩

ವಿಳಾಸ : ಸಿ.ಪಿ.ನಾಗರಾಜ, 75, 5ನೇ ಕ್ರಾಸ್, 'ಎ' ಬ್ಲಾಕ್, ಕ್ರಿಷ್ಣ ಗಾರ್ಡನ್, ಆರ್.ವಿ. ಕಾಲೇಜು ಅಂಚೆ, ಬೆಂಗಳೂರು–560 059. ಮೊ : 9986347521

e-mail : ngy7777@gmail.com